ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 3 ಮಂಗಳವಾರ 2022

ಸಂಪುಟ: 43 | ಸಂಚಿಕೆ: 17 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಇಂದು ಬಸವ ಜಯಂತಿ



ಮೈಸೂರು, ಮೇ 2– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಬಸವ ಜಯಂತ್ಯುತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಮೇ 3ರ ಮಂಗಳವಾರ ಬೆಳಗ್ಗೆ 11 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಬಸವ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟನೆ ಮಾಡುವರು. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸಪ್ರಸಾದ್, ಸುಮಲತಾ ಅಂಬರೀಷ್, ಶಾಸಕರು ಹಾಗೂ ನಿಗಮ ಮಂಡಳಿ ಅಧ್ಯಕ್ಷರು, ಗಣ್ಯರು ಉಪಸ್ಥಿತರಿರುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ಶ್ರೀನಿವಾಸ ಕಲ್ಯಾಣ ವೈಭವ ಕಾರ್ಯಕ್ರಮ

ಮೈಸೂರು,ಮೇ 2(ಎಂಟಿವೈ)– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ನಾಳೆ(ಮೇ 3)ಯಿಂದ ಮೆ 11ರವರೆಗೆ ಹರಿ ದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ ವತಿಯಿಂದ 'ಶ್ರೀನಿವಾಸ ಕಲ್ಯಾಣ ವೈಭವ' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಸಮಿತಿಯ ಸಂಸ್ಥಾಪಕ ಎಸ್. ರವಿಕುಮಾರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 3ರಂದು ಸಂಜೆ 6ಕ್ಕೆ ಸೋಸಲೆಯ ವ್ಯಾಸ ರಾಜ ಮಠದ ಪೀಠಾಧಿಪತಿ ವಿದ್ಯಾಶ್ರೀಶ ತೀರ್ಥ ಶ್ರೀಪಾದಂಗಳ ಕಾರ್ಯಕ್ರಮವನ್ನು ಉದ್ಘಾಟಿಸ ಲಿದ್ದಾರೆ. ಪ್ರತಿದಿನ ವೆಂಕಟೇಶ ಪಾರಿಜಾತ ಆಧಾರಿತ ಪದ್ಯಗಳನ್ನು ಮತ್ತು ಅದಕ್ಕೆ ಹೊಂದಿಕೊಂಡಂತೆ ದಾಸರ ಕೀರ್ತನೆಗಳನ್ನು ಗಾಯಕರು ಪ್ರಸ್ತುತಪಡಿಸಲಿದ್ದಾರೆ. ಇದರ ಬಗ್ಗೆ ಡಾ. ಬೆ.ನಾ. ವಿಜಯೀಂದ್ರಾಚಾರ್ಯ ಅವರು ವಿಶ್ಲೇಷಣೆ ನೀಡಲಿದ್ದಾರೆ ಎಂದರು.

ಮೇ 4ರಂದು ಬಾಗಲಕೋಟೆಯ ಅನಂತ ಕುಲಕರ್ಣಿ, ಮೇ 5ರಂದು ಉಡುಪಿಯ ಸಂಗೀತಾ ಬಾಲಚಂದ್ರ, ಮೇ 6ರಂದು ಕಲ್ಬುರ್ಗಿಯ ಅನಂತರಾಜ್ ಮಿಸ್ತ್ರಿ, ಮೇ 7ರಂದು ಬೆಂಗಳೂರಿನ ದಿವ್ಯಾ ಗಿರಿಧರ್, ಮೇ 8ರಂದು ಬಳ್ಳಾರಿ ರಾಘವೇಂದ್ರ, ಮೇ 9ರಂದು ಬೆಂಗಳೂರಿನ ತೇಜಸ್ವಿನಿ ಶ್ರೀಹರಿ (ಮಳಗಿ), ಮೇ 10ರಂದು ಮೈಸೂರಿನ ರಾಜೇಶ್ ಪಡಿಯಾರ್ ಮತ್ತು ನಿತ್ಯ ಶ್ರೀ, ಮೇ 11ರಂದು ಬೆಂಗಳೂರಿನ ಶುಭಾ ಸಂತೋಷ್ ಅವರಿಂದ ಕಾರ್ಯಕ್ರಮ ಜರುಗಲಿದೆ. ಅಂದು ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ವೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್, ಬ್ರಾಹ್ಮಣ ಸಮುದಾಯದ ಮುಖಂಡ ಕೆ.ರಘುರಾಂ ವಾಜಪೇಯಿ ಮುಂತಾದವರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಮೇ 8ರಂದು ಸಂಜೆ 5ರಿಂದ ವಿಶೇಷ ಕಾರ್ಯಕ್ರಮಗಳು ನಡೆಯಲಿವೆ. ಜಗನ್ನಾಥ ದಾಸರ ಚಲನಚಿತ್ರ ತಂಡದವರೊಂದಿಗೆ ಸಂವಾದ ಕೂಡ ಜರುಗಲಿದೆ. ನಂತರ ಚಿತ್ರ ತಂಡದವರಿಗೆ ಅಭಿನಂದಿಸಲಾಗುವುದು. ಶ್ರೀನಿವಾಸ ಕಲ್ಯಾಣ ವೈಭವ ದೊಡ್ಡ ಮಟ್ಟದಲ್ಲಿ 9 ದಿನಗಳ ಕಾಲ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಮಿತಿಯ ಖಜಾಂಚಿ ಜಯಶ್ರೀ, ಮಾರ್ಗದರ್ಶಕ ಡಾ.ಬೆ.ನಾ.ವಿಜಯೀಂದ್ರಾಚಾರ್ಯ ಇದ್ದರು.

ಇಂದು 'ನೆನಪಿನೋತ್ಸವ' ನಿತ್ಯೋತ್ಸವ ಪ್ರಶಸ್ತಿ ಪ್ರದಾನ

ಮೈಸೂರು,ಮೇ 2(ಎಂಟಿವೈ)–ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಮೇ 3ರಂದು ಬೆಳಗ್ಗೆ 11.30ಕ್ಕೆ ಕವಿ ಕೆ.ಎಸ್.ನಿಸಾರ್ ಅಹಮ್ಮದ್ ಅವರ ಸ್ಮರಣಾರ್ಥ ಎರಡನೇ ವರ್ಷದ 'ನೆನಪಿನೋತ್ಸವ' ಮತ್ತು ನಿತ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಲಾಗಿದೆ ಎಂದು ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾನ ಸಮಿತಿ ಅಧ್ಯಕ್ಷ ಜಾಕೀರ್ ಹುಸೇನ್ ತಿಳಿಸಿದ್ದಾರೆ.



ಕೆ.ಎಸ್.ನಿಸಾರ್ ಅಹಮ್ಮದ್

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡದ ಸಾಹಿತ್ಯ ಕ್ಷೇತ್ರಕ್ಕೆ ಸುಪ್ರಸಿದ್ಧ ಕವಿ, ವಿಮರ್ಶಕರು ಹಾಗೂ ವೈಚಾರಿಕ ಬರಹಗಾರರೂ ಆಗಿದ್ದ ನಿತ್ಯೋತ್ಸವ ಕವಿ ಕೆ.ಎಸ್.ನಿಸಾರ್ ಅಹಮ್ಮದ್ ಅವರು ನಮ್ಮನ್ನು ಅಗಲಿ ಮೇ 3ಕ್ಕೆ 3 ವರ್ಷವಾಗುತ್ತಿದೆ. ಅವರ ಎರಡನೇ ಸ್ಮರಣೋತ್ಸವ ನಡೆಸಲಾಗುತ್ತಿದೆ ಎಂದರು.

ಮೇ 3ರಂದು ಬೆಳಗ್ಗೆ 11.30ಕ್ಕೆ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ನಡೆಯುವ ಕಾರ್ಯಕ್ರಮವನ್ನು ಸಂಸದ ವಿ.ಶ್ರೀನಿವಾಸ ಪ್ರಸಾದ್ ಉದ್ಘಾಟಿಸಲಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಎನ್.ಎಂ.ನಂದೀಶ್ ಹಂಚೆ, ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಇದೇವೇಳೆ ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮತ್ತು ನಿಕಟ ಪೂರ್ವ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಅವರಿಗೆ ಕವಿ ನಿಸಾರ್–ನಿತ್ಯೋತ್ಸವ ಪ್ರಶಸ್ತಿಯನ್ನು ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಪ್ರದಾನ ಮಾಡಲಿದ್ದಾರೆ ಎಂದರು. ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ವಕೀಲ ಕಾಂತರಾಜು, ಯುವ ಮುಖಂಡರಾದ ರಾಜೇಶ್, ಪವನ್ ಸಿದ್ದರಾಮು ಇದ್ದರು.



ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕಿನಲ್ಲಿ 36 ವರ್ಷಗಳಿಂದ ಕ್ಯಾಷಿಯರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾದ ಕಾಂತರಾಜು ಅವರನ್ನು ಬ್ಯಾಂಕಿನ ಆಡಳಿತ ಮಂಡಳಿ ಹಾಗೂ ನೌಕರ ವರ್ಗದವರ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಬ್ಯಾಂಕಿನ ಅಧ್ಯಕ್ಷ ಪ್ರತಿಧ್ವನಿ ಪ್ರಸಾದ್, ಉಪಾಧ್ಯಕ್ಷ ಡಿ.ಬಸವರಾಜು (ಬಸಪ್ಪ), ನಿರ್ದೇಶಕರಾದ ನಂ.ಸಿದ್ದಪ್ಪ ಎಂ.ಡಿ.ಪಾರ್ಥಸಾರಥಿ, ಹೆಚ್.ವಿ.ಭಾಸ್ಕರ್, ಎಂ.ಎಸ್.ಅರುಣ್ ಸಿದ್ದಪ್ಪ ಬಿ.ನಾಗರಾಜು, ತಾಯೂರು ವಿಠಲಮೂರ್ತಿ, ಎಂ.ಪಾರ್ವತಮ್ಮ, ಹೆಚ್.ಎನ್.ಸರ್ವ ಮಂಗಳ, ಬ್ಯಾಂಕಿನ ಪ್ರಭಾರ ವ್ಯವಸ್ಥಾಪಕ ಡಿ.ಅನಂತವೀರಪ್ಪ ಇನ್ನಿತರರಿದ್ದರು.

ಬುಂಡನ ಪುಟ್ಟಯ್ಯ ನಿಧನ



ಮೈಸೂರು, ಮೇ 2– ಮೈಸೂರಿನ ವಕೀಲರಾದ ಡಾ.ಪುಟ್ಟಯ್ಯ ಅವರ ತಂದೆ ಬುಂಡನ ಪುಟ್ಟಯ್ಯನವರು ಇಂದು ನಿಧನರಾದರು.

ಇವರು ಮೂವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ(ಮೇ3) ಸರಗೂರು ತಾಲೂಕಿನ ಕಿತ್ತೂರು ಗ್ರಾಮದಲ್ಲಿ ಮಧ್ಯಾಹ್ನ 12 ಗಂಟೆಗೆ ನೆರವೇರಲಿದೆ.

ಶ್ರೀಮತಿ ಲಕ್ಷ್ಮಮ್ಮ



ಮೈಸೂರು, ಮೇ 2– ಮೈಸೂರಿನ ಬೃಂದಾವನ ಬಡಾವಣೆ ನಿವಾಸಿ ಹಾಗೂ ದಿವಂಗತ ಡಾ.ಎಂ.ಎಸ್.ಚೆಲುವೇಗೌಡ ಅವರ ಪತ್ನಿ ಶ್ರೀಮತಿ ಲಕ್ಷ್ಮಮ್ಮ ವಯೋಸಹಜ ಅನಾರೋಗ್ಯದಿಂದ ನಿನ್ನೆ ಸಂಜೆ ತಮ್ಮ ನಿವಾಸದಲ್ಲಿ ನಿಧನರಾದರು. ಇವರಿಗೆ 74 ವರ್ಷ ವಯಸ್ಸಾಗಿತ್ತು. ಮೃತರು ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಬೆಳಿಗ್ಗೆ ಮೇಟಗಳ್ಳಿಯ ಅವರ ತೋಟದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುಂದ್ರಮ್ಮ



ಮೈಸೂರು, ಮೇ 2– ಚಾಮರಾಜನಗರ ಜಿಲ್ಲೆ ಕೊಳ್ಳೆಗಾಲ ನಿವಾಸಿ ಹಾಗೂ ದಿವಂಗತ ಡಾ.ಕೆಂಪನಂಜಪ್ಪ ಅವರ ಪತ್ನಿ ಸುಂದ್ರಮ್ಮ ಅವರು ಏ.25ರಂದು ಅಮೆರಿಕಾದ ನಾರ್ತ್ ಕರೋಲಿನದ ರಾಲೈನಲ್ಲಿ ಹೃದಯಾಘಾತದಿಂದ ನಿಧನರಾದರು. ಇವರಿಗೆ 65 ವರ್ಷ ವಯಸ್ಸಾಗಿತ್ತು ಮೃತರು ಪುತ್ರಿ ಡಾ.ತೇಜಸ್ವಿನಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ನಿನ್ನೆಯಷ್ಟೆ ಅವರ ಅಂತ್ಯಕ್ರಿಯೆ ರಾಲೈನಲ್ಲಿ ನೆರವೇರಿದೆ.

ಅಲ್ಹಾಜಾ ಶಬ್ರೀನ್ ತಾಜ್

ಮೈಸೂರು, ಮೇ 2– ಮೈಸೂರಿನ ಉದಯಗಿರಿ ನಿವಾಸಿ ಹಾಗೂ ನಿವೃತ್ತ ಶಿಕ್ಷಕಿ ಅಲ್ಹಾಜಾ ಶಬ್ರೀನ್ ತಾಜ್(62) ಏ.30ರಂದು ನಿಧನರಾದರು. ಮೃತರು ಪತಿ ಅಲ್ಹಾಜಾ ರಹಮತುಲ್ಲಾ ಷರೀಫ್, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಟಿಪ್ಪು ವೃತ್ತದ ಸಮೀಪದಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುಮಂತ್‌ಗೌಡ



ಮೈಸೂರು, ಮೇ 2– ಮೈಸೂರಿನ ನಜರ್‌ಬಾದ್ ನಿವಾಸಿ, ಪತ್ರಿಕಾ ವಿತರಕ ಸುಮಂತ್‌ಗೌಡ(28) ಶುಕ್ರವಾರ ನಿಧನರಾದರು. ಮೃತರು ತಾಯಿ, ಸಹೋದರಿ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಶನಿವಾರ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ನಾಲ್ಕನೇ ಘಟಿಕೋತ್ಸವ

ಗುಣಮಟ್ಟ, ಪಠ್ಯದ ಪ್ರಸ್ತುತತೆ ಉತ್ಕೃಷ್ಟತೆಗೆ ಒತ್ತು ನೀಡಿ

ಎಐಸಿಟಿಇ ಅಧ್ಯಕ್ಷ ಪ್ರೊ. ಅನಿಲ್ ಡಿ. ಸಹಸ್ರ ಬುದ್ಧೆ ಅಭಿಮತ



ಮೈಸೂರು, ಮೇ2(ಆರ್‌ಕೆಬಿ)– ಶಿಕ್ಷಣ ವ್ಯವಸ್ಥೆಯಲ್ಲಿ ಸಂಪೂರ್ಣ ಉತ್ಕೃಷ್ಟತೆ ಸಾಧಿಸಲು ವಿಷಯದ ಗುಣಮಟ್ಟ ಮತ್ತು ಪ್ರಸ್ತುತತೆಯಲ್ಲಿ ನಿರಂತರ ಸುಧಾರಣೆಗಳ ಮೇಲಿನ ಒತ್ತಡವನ್ನು ಕಾಪಾಡಿಕೊಳ್ಳುವುದು ಬಹು ಮುಖ್ಯ ಎಂದು ಎಐಸಿಟಿಇ (ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು) ಅಧ್ಯಕ್ಷ ಪ್ರೊ. ಅನಿಲ್ ಡಿ. ಸಹಸ್ರಬುದ್ಧೆ ಇಂದಿಲ್ಲಿ ತಿಳಿಸಿದರು.

ಮೈಸೂರಿನಲ್ಲಿ ಸೋಮವಾರ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ 4ನೇ ಘಟಿಕೋತ್ಸವ ಭಾಷಣ ಮಾಡಿದ ಅವರು, ವಿಶ್ವವಿದ್ಯಾನಿಲಯವು ಪದವಿ, ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಹಂತಗಳಲ್ಲಿ ವ್ಯಾಪಕ ಶ್ರೇಣಿಯ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕೋರ್ಸ್‌ಗಳನ್ನು ಪ್ರಾರಂಭಿಸುವ ಮೂಲಕ ಸಮಾಜದ ಉನ್ನತ ಶಿಕ್ಷಣಕ್ಕಾಗಿ ಸೇವೆ ಸಲ್ಲಿಸುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು.

ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿಯು ಈಗಾಗಲೇ ರಾಷ್ಟ್ರೀಯ ಶಿಕ್ಷಣ ನೀತಿ–2020 ಮಾರ್ಗಸೂಚಿಗಳಿಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಇದರಲ್ಲಿ ಪಠ್ಯಕ್ರಮ ಮತ್ತು ಸಮಾನ ಪ್ರಮಾಣೀಕರಣದೊಂದಿಗೆ ಬಹು ನಿರ್ಗಮನ ನೀಡಲಾಗುತ್ತಿದೆ ಎಂದರು.

ನವ ಪದವೀಧರರು ತಮ್ಮ ಶೈಕ್ಷಣಿಕ ಜೀವನದಲ್ಲಿ ಒಂದು ಮೈಲಿಗಲ್ಲು ತಲುಪಿದಂತಾಗಿದೆ. ಕಲಿಕೆ ಇಲ್ಲಿಗೆ ಕೊನೆಗೊಳ್ಳುವುದಿಲ್ಲ. ಕಲಿಕೆಯು ಜೀವಿತಾವಧಿಯ ಪ್ರಕ್ರಿಯೆಯಾಗಿದೆ. ಅವರು ಉನ್ನತ ಶಿಕ್ಷಣಕ್ಕೆ ಹೋಗಲಿ ಅಥವಾ ಉದ್ಯೋಗವನ್ನು ಆರಿಸಿಕೊಳ್ಳಲಿ ಎಂದು ಹಾರೈಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಧನೆ ಶ್ಲಾಘಿಸಿದ ಅವರು, ಒಂದು ಸಂಸ್ಥೆಯಿಂದ ಅಸಾಧಾರಣ ಶೈಕ್ಷಣಿಕ ಪ್ರಗತಿ ಸಾಧ್ಯವಾಗಿದೆ ಎಂದು ಬಣ್ಣಿಸಿದರು. ಇಂದಿನ ಜಾಗತೀಕರಣ ಯುಗದಲ್ಲಿ ನಿರಂತರವಾಗಿ ಬದಲಾಗುತ್ತಿರುವ ಸವಾಲುಗಳನ್ನು ಎದುರಿಸಲು ದಶಕಗಳಿಂದ ಹೆಚ್ಚು ಸಮರ್ಥ ತಾಂತ್ರಿಕ ಮತ್ತು ನಿರ್ವಾಹಕ ಮಾನವಶಕ್ತಿಯನ್ನು ಉತ್ಪಾದಿಸುತ್ತಿದೆ ಎಂದು ಹೇಳಲು ಸಂತೋಷವಾಗುತ್ತದೆ ಎಂದರು.

> "ಒಬ್ಬರ ಜೀವನದ ಒಟ್ಟಾರೆ ಪ್ರಗತಿಯಲ್ಲಿ ಜ್ಞಾನವು ನಿರ್ಣಾಯಕ ಪಾತ್ರ ವಹಿಸುತ್ತದೆ. ಇತ್ತೀಚೆಗೆ ವಿಶ್ವವಿದ್ಯಾನಿಲಯದಲ್ಲಿ ಜೀವಿತಾವಧಿಯ ಕಲಿಕೆಯನ್ನು ಒದಗಿಸಲು ಮತ್ತು ಸಾಮರ್ಥ್ಯ ವರ್ಧನೆಗಾಗಿ ಸಿಇಪಿ ಕೋಶವನ್ನು ಸ್ಥಾಪಿಸಲಾಗಿದೆ. ದಶಕದ ಹಿಂದೆ ಅಸ್ತಿತ್ವಕ್ಕೆ ಬಂದ ತಂತ್ರಜ್ಞಾನಗಳ ಹಿನ್ನೆಲೆಯಲ್ಲಿ ನಿರಂತರ ಕಲಿಕೆಯು ಪ್ರಸ್ತುತತೆ ಪಡೆಯುತ್ತಿದೆ. ತರಬೇತಿ ಪಡೆದ ಮಾನವಶಕ್ತಿ ರಾಷ್ಟ್ರದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. –ಪ್ರೊ.ಅನಿಲ್ ಡಿ. ಸಹಸ್ರಬುದ್ಧೆ

ಇದೇ ವೇಳೆ ಯುಜಿಯಲ್ಲಿ ವಿವಿಧ ವಿಭಾಗಗಳಲ್ಲಿ ಪ್ರಥಮ ಶ್ರೇಣಿ ಹಾಗೂ ಚಿನ್ನದ ಪದಕ ಪಡೆದ 12 ಮಂದಿ, ಬಿಸಿಎನಲ್ಲಿ ಚಿನ್ನದ ಪದಕ ಪಡೆದ ಒಬ್ಬರು ಹಾಗೂ ಪಿಜಿಯಲ್ಲಿ ವಿವಿಧ ವಿಭಾಗದಲ್ಲಿ ಪ್ರಥಮ ಶ್ರೇಣಿ ಪಡೆದ 14 ಮಂದಿ, ಎಂಸಿಎ, ಎಂಎಸ್‌ಸಿ–ಕೆಮಿಸ್ಟ್ರಿ, ಎಂಬಿಎ (ರೆಗ್ಯುಲರ್), ಎಂಬಿಎ (ಕಾರ್ಪೊರೇಟ್ ಫೈನಾನ್ಸ್), ಎಂಬಿಎ (ರೀಟೈಲ್ ಮ್ಯಾನೇಜ್‌ಮೆಂಟ್), ಎಂಬಿಎ (ಡಿಜಿಟಲ್ ಮಾರ್ಕೆಟಿಂಗ್)ನಲ್ಲಿ ತಲಾ ಒಬ್ಬರು ಸೇರಿದಂತೆ ಒಟ್ಟು 20 ಮಂದಿ ಚಿನ್ನದ ಪದಕಗಳನ್ನು ಸ್ವೀಕರಿಸಿದರು. ಒಟ್ಟಾರೆ 1519 ವಿದ್ಯಾರ್ಥಿಗಳು ಪ್ರಮಾಣ ಪತ್ರಗಳನ್ನು ಪಡೆದರು.

ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ್ ಮಠ, ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕ ಹಾಗೂ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಸಮಕುಲಾಧಿಪತಿ ಡಾ.ಬಿ.ಸುರೇಶ್, ತಾಂತ್ರಿಕ ಶಿಕ್ಷಣ ವಿಭಾಗದ ಸಲಹೆಗಾರ ಪ್ರೊ.ಎಂ.ಹೆಚ್.ಧನಂಜಯ, ಜೆಎಸ್‌ಎಸ್ ಎಸ್‌ಟಿಯು ಪ್ರಭಾರ ಕುಲಪತಿ ಪ್ರೊ.ಸಂತೋಷ್ ಕುಮಾರ್, ಕುಲಸಚಿವ ಪ್ರೊ.ಎಸ್.ಎ. ಧನರಾಜ್ ಇನ್ನಿತರರು ಉಪಸ್ಥಿತರಿದ್ದರು.

ಪತ್ರಿಕೋದ್ಯಮ ವಿದ್ಯಾರ್ಥಿಗಳೊಂದಿಗೆ ಸಂವಾದ

ಮಾಧ್ಯಮಗಳು ಸಮಾಜದ ಸ್ವಾಸ್ಥ್ಯಕ್ಕೆ ಪೂರಕವಾಗಿ ಕೆಲಸ ಮಾಡಬೇಕು: ಎಂಎಲ್‌ಸಿ ಹೆಚ್.ವಿಶ್ವನಾಥ್



ಮೈಸೂರು, ಮೇ 2 (ಆರ್‌ಕೆಬಿ)– ಮಾಧ್ಯಮಗಳು ಸಮಾಜದ ಸ್ವಾಸ್ಥ್ಯಕ್ಕೆ ಪೂರಕವಾಗಿ ಕೆಲಸ ಮಾಡಬೇಕೆ ಹೊರತು, ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡಬಾರದು ಎಂದು ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ತಿಳಿಸಿದರು.

ಮೈಸೂರಿನ ಮಾನಸಗಂಗೋತ್ರಿಯ ಪತ್ರಿಕೋದ್ಯಮ ವಿಭಾಗ ಸೋಮವಾರ ಆಯೋಜಿಸಿದ್ದ 'ಪತ್ರಿಕೋದ್ಯಮ ವಿದ್ಯಾರ್ಥಿಗಳೊಂದಿಗೆ ಪ್ರಚಲಿತ ವಿದ್ಯಮಾನ, ರಾಜಕೀಯ, ಪತ್ರಿಕೋದ್ಯಮ' ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಿಂದೆ ವಿದ್ಯಾರ್ಥಿ ನಾಯಕರಾಗಿದ್ದವರು ರಾಜಕೀಯಕ್ಕೆ ಬರುತ್ತಿದ್ದರು. ಈಗ ವಿದ್ಯಾರ್ಥಿ ಸಂಘದ ಚುನಾವಣೆ ರದ್ದು ಮಾಡಿರುವುದಾದರೂ ಏಕೆ ಎಂಬುದು ಗೊತ್ತಿಲ್ಲ. ವಿದ್ಯಾರ್ಥಿ ನಾಯಕರಾಗಿದ್ದವರು ರಾಜಕೀಯದಲ್ಲಿ ಯಶಸ್ವಿಯಾಗಿದ್ದಾರೆ. ದೆಹಲಿ, ಜವಾಹರ್‌ಲಾಲ್ ವಿವಿಗಳಲ್ಲಿ ಈಗಲೂ ವಿದ್ಯಾರ್ಥಿ ಸಂಘದ ಚುನಾವಣೆಗಳಿವೆ ಎಂದು ವಿಶ್ವನಾಥ್ ಹೇಳಿದರು.

ಸಂವಿಧಾನದ ನಾಲ್ಕನೇ ಅಂಗವಾದ ಪತ್ರಿಕೋದ್ಯಮಕ್ಕೆ ಜನತಂತ್ರ ವ್ಯವಸ್ಥೆಯಲ್ಲಿ ಬಹು ದೊಡ್ಡ ಪಾತ್ರವಿದೆ. ಮೂರು ಅಂಗಗಳ ತಪ್ಪು ಒಪ್ಪುಗಳನ್ನು ತಿದ್ದಿ ಸರಿಪಡಿಸುವುದು ಪತ್ರಿಕಾರಂಗ. ಹಸಿರು ಕ್ರಾಂತಿಗೆ ಆಕಾಶವಾಣಿ ಸಾಕಷ್ಟು ಕೆಲಸ ಮಾಡಿರುವುದನ್ನು ಮರೆತಿದ್ದೇವೆ. ಮಾಧ್ಯಮ ಕೂಡ ದೇಶದ ಬೆಳವಣಿಗೆಗೆ ಪೂರಕವಾಗಿ ಕೆಲಸ ಮಾಡಿದೆ. ಆದರೆ ಈಗ ಎಲ್ಲವೂ ಅವಸರದ ಪತ್ರಿ ಕೋದ್ಯಮವಾಗಿದೆ. ಮೊದಲು ನಾನು ವರದಿ ನೀಡಬೇಕು ಎಂಬ ಸ್ಪರ್ಧೆ ಏರ್ಪಟ್ಟಿದೆ ಎಂದು ಹೇಳಿದರು.

ಯುದ್ಧ ಭೂಮಿಯಲ್ಲಿ ಧೈರ್ಯವಾಗಿ ನಿಂತು ವರದಿ ಮಾಡುವುದು ಸುಲಭದ ಕೆಲಸವಲ್ಲ. ಮಾಧ್ಯಮಗಳು ಸಮಾಜದ ಆರೋಗ್ಯ ಹಾಳಾಗದ ರೀತಿಯಲ್ಲಿ ಮೊದಲು ಅನುಭವ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು. ಸಂವಾದದಲ್ಲಿ ಮೈಸೂರು ವಿವಿ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪುಟ್ಟಸ್ವಾಮಿ ಸೇರಿದಂತೆ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬಿಜೆಪಿಯಲ್ಲಿ ಹೊಸ ಮುಖಕ್ಕೆ ಮಣೆ: ಬಿ.ಎಲ್.ಸಂತೋಷ್ ಹೇಳಿಕೆ ಸ್ವಾಗತಿಸಿದ ವಿಶ್ವನಾಥ್

ಮೈಸೂರು, ಮೇ 2(ಆರ್‌ಕೆಬಿ)–ಗುಜರಾತ್‌ನಲ್ಲಿ ಮುಖ್ಯಮಂತ್ರಿ ಸೇರಿ ಇಡೀ ಸಂಪುಟ ಪುನಾರಚನೆಯಾಗಿದೆ. ಗುಜರಾತ್, ದೆಹಲಿ ಪಾಲಿಕೆ ಚುನಾವಣೆಯಲ್ಲಿ ಹೊಸ ಮುಖಕ್ಕೆ ಮಣೆ ಹಾಕಿದ್ದರಿಂದ ಗೆಲುವಾಗಿದೆ. ಬಿಜೆಪಿಯಲ್ಲಿ ಇಂತಹ ಪ್ರಯೋಗಗಳು ಯಶಸ್ವಿಯಾಗಿವೆ. ಹೀಗಾಗಿ ಹೊಸ ಮುಖಗಳಿಗೆ ಮಣೆ ಹಾಕಲಾಗುವುದು ಎಂಬ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹೇಳಿಕೆಯನ್ನು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಸ್ವಾಗತಿಸಿದ್ದಾರೆ.

ಮೈಸೂರಿನಲ್ಲಿ ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಂತೋಷ್ ಅವರು ಸರಿಯಾಗಿಯೇ ಹೇಳಿದ್ದಾರೆ. ನಾಗ್ಪುರ ಕಾರ್ಯಕ್ರಮದಲ್ಲಿ ಕುಟುಂಬ ರಾಜಕಾರಣಕ್ಕೆ ಬ್ರೇಕ್ ಹಾಕಬೇಕೆಂದು ಮೋದಿ ಹೇಳಿರುವಂತೆ ಈಗ ಅದನ್ನೂ ಆರಂಭಿಸಬೇಕಿದೆ ಎಂದು ಹೇಳಿದರು.

ಪಿಎಸ್‌ಐ ನೇಮಕಾತಿ ಹಗರಣ ಕುರಿತು ಪ್ರಸ್ತಾಪಿಸಿದ ಅವರು, ಇದರ ನಿಷ್ಪಕ್ಷಪಾತ ತನಿಖೆಯಾಗಬೇಕು. ಈ ಹಗರಣದಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಿದೆ. ಸರ್ಕಾರ ಸರಿಯಾಗಿ ತನಿಖೆ ನಡೆಸಬೇಕು. ಕೇವಲ ಕಲ್ಬುರ್ಗಿ ವ್ಯಾಪ್ತಿಗೆ ಮಾತ್ರ ತನಿಖೆ ಸೀಮಿತವಾಗಬಾರದು. ಪಿಎಸ್‌ಐ ಹಗರಣದಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗ ಶಾಮೀಲಾಗಿದೆ. ಪೊಲೀಸ್ ಇಲಾಖೆಯ ಕೆಲ ಅಧಿಕಾರಿಗಳು ಇದರಲ್ಲಿದ್ದಾರೆ. ನಿಷ್ಪಕ್ಷಪಾತ ತನಿಖೆ ಆಗಬೇಕು ಎಂದು ಹೇಳಿದರು.

ಆಡಳಿತದಲ್ಲಿ ಮೃದುತನವೇಕೆ? ಮೃದುವಾಗಿಯೇ ಆಡಳಿತ ನಡೆಸುತ್ತಿರುವುದಾಗಿ ಸಿಎಂ ಬೊಮ್ಮಾಯಿ ಹೇಳಿರುವ ಕುರಿತ ಪ್ರಶ್ನೆಗೆ ಕೆಂಡಾಮಂಡಲರಾದ ವಿಶ್ವನಾಥ್, ಇದು ಒಬ್ಬ ಮುಖ್ಯಮಂತ್ರಿ ನೀಡುವ ಹೇಳಿಕೆಯಲ್ಲ. ಆಡಳಿತದಲ್ಲಿ ಸಾಫ್ಟ್ ಅಥವಾ ಹಾರ್ಡ್ ಅಂತಾ ಇಲ್ಲ. ಸಾಂವಿಧಾನಿಕ ಅಧಿಕಾರವನ್ನು ಚಲಾಯಿಸಬೇಕು ಅಷ್ಟೇ. ನಿಮ್ಮ ಹಾರ್ಡ್ ವೆಪನ್ ಅನ್ನು ಹಗರಣ ಮಾಡಿದವರ ಮೇಲೆ ಬಳಸಿ, ಶಾಂತಿ ಕದಡುವವರು, ಆರ್‌ಎಸ್‌ಎಸ್, ಬಜರಂಗದಳದವರ ಮೇಲೆ ಬಳಸಬೇಕು. ಪ್ರತಿದಿನ ಒಂದಲ್ಲ ಒಂದು ಹಗರಣ ಸರ್ಕಾರಕ್ಕೆ ಕೆಟ್ಟ ಹೆಸರು ತರುತ್ತಿದೆ ಎಂದು ಕಿಡಿಕಾರಿದರು.

ಮೇ 5, ವಿಶ್ವ ವ್ಯಂಗ್ಯಚಿತ್ರಕಾರರ ದಿನಾಚರಣೆ





ಮೈಸೂರು,ಮೇ 2–ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘ ಮತ್ತು ರಂಗಾಯಣದ ಸಂಯುಕ್ತ ಆಶ್ರಯದಲ್ಲಿ ವ್ಯಂಗ್ಯಚಿತ್ರಕಾರ ಹಾಗೂ ಫುಲ್‌ಬ್ರೈಟರ್ ಎಂ.ವಿ.ನಾಗೇಂದ್ರಬಾಬು ಅವರ 'ಕಾರ್ಟೂನ್ ಕುಂಚದಲ್ಲಿ ಕೊರೊನಾ' ವ್ಯಂಗ್ಯಚಿತ್ರಗಳ ಪ್ರದರ್ಶನವನ್ನು ಮೇ 5ರಂದು ಬೆಳಗ್ಗೆ 10.30ಕ್ಕೆ ರಂಗಾಯಣದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮವನ್ನು ಸಂಸದ ಪ್ರತಾಪ್ ಸಿಂಹ ಉದ್ಘಾಟಿಸುವರು. ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಮಾಜ ಸೇವಕ ಡಾ. ಕೆ.ರಘುರಾಂ ವಾಜಪೇಯಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಭಾಗವಹಿಸುವರು. ವ್ಯಂಗ್ಯಚಿತ್ರ ಪ್ರದರ್ಶನ ಮೇ 5ರಿಂದ 7ರವರೆಗೆ ಬೆಳಗ್ಗೆ 10.30ರಿಂದ ಸಂಜೆ 5ರವರೆಗೆ ಇರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಪಂ ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ

ಮೈಸೂರು, ಮೇ 2–ಮೈಸೂರು ಜಿಲ್ಲೆಯ ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಕಾರಣಗಳಿಂದ ಖಾಲಿ ಇರುವ ಮತ್ತು ತೆರವಾಗಿರುವ ಸದಸ್ಯ ಸ್ಥಾನಗಳಿಗೆ ಉಪಚುನಾವಣೆ ನಡೆಸಲು ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸಿದೆ. ನಂಜನಗೂಡು ತಾಲೂಕಿನ ಹಗಿನವಾಳು ಪಂಚಾಯಿತಿಯ, ಹಗಿನವಾಳು–4 ಕ್ಷೇತ್ರದ 1 ಸದಸ್ಯ ಸ್ಥಾನಕ್ಕೆ, ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಗ್ರಾಮ ಪಂಚಾಯಿತಿಯ, ಬೆಟ್ಟದಪುರದ ಎರಡು ಕ್ಷೇತ್ರದ 1 ಸದಸ್ಯ ಸ್ಥಾನಕ್ಕೆ ಉಪಚುನಾವಣೆ ನಡೆಯಲಿದೆ. ಜಿಲ್ಲಾಧಿಕಾರಿಗಳು ಮೇ 5ರಂದು ಚುನಾವಣಾ ಅಧಿಸೂಚನೆ ಹೊರಡಿಸುವರು. ನಾಮಪತ್ರಗಳನ್ನು ಸಲ್ಲಿಸಲು ಮೇ 10 ಕೊನೆಯ ದಿನ. ನಾಮಪತ್ರಗಳನ್ನು ಮೇ 11ರಂದು ಪರಿಶೀಲಿಸಲಾಗುವುದು. ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು ಮೇ 13 ಕೊನೆಯ ದಿನ. ಮತದಾನ ಅವಶ್ಯವಿದ್ದರೆ, ಮತದಾನವನ್ನು ಮೇ 20ರಂದು ಬೆಳಗ್ಗೆ 7 ಗಂಟೆಯಿಂದ ಸಂಜೆ 5ರವರೆಗೆ ನಡೆಸಲಾಗುವುದು.

ಮರು ಮತದಾನದ ಅವಶ್ಯವಿದ್ದರೆ, ಮರು ಮತದಾನವನ್ನು ಮೇ 21ರಂದು ನಡೆಸಲಾಗುವುದು. ಮತಗಳ ಎಣಿಕೆಯನ್ನು ಮೇ 22ರಂದು ಬೆಳಗ್ಗೆ 8 ಗಂಟೆಯಿಂದ, ತಾಲೂಕು ಕೇಂದ್ರ ಸ್ಥಳದಲ್ಲಿ ನಡೆಸಲಾಗುವುದು. ಅಂದೆ ಚುನಾವಣೆ ಪ್ರಕ್ರಿಯೆ ಮುಕ್ತಾಯವಾಗುವುದು.

ಚುನಾವಣಾಧಿಕಾರಿಗಳು ಹಾಗೂ ಸಹಾಯಕ ಚುನಾವಣಾಧಿಕಾರಿಗಳು: ಗ್ರಾಮ ಪಂಚಾಯಿತಿ ಉಪಚುನಾವಣೆ–2022ರ (ಮೇ ಮಾಹೆ) ಸಂಬಂಧ ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಒಬ್ಬ ಚುನಾವಣಾಧಿಕಾರಿ ಹಾಗೂ ಒಬ್ಬ ಸಹಾಯಕ ಚುನಾವಣಾಧಿಕಾರಿಯನ್ನು ನೇಮಕ ಮಾಡಲಾಗುವುದು. ಚುನಾವಣಾಧಿಕಾರಿಗಳು ಮತ್ತು ಸಹಾಯಕ ಚುನಾವಣಾಧಿಕಾರಿಗಳು ಚುನಾವಣಾ ವೇಳಾಪಟ್ಟಿಯಂತೆ ಸಂಬಂಧಪಟ್ಟ ಗ್ರಾಪಂ ಕಚೇರಿಯಲ್ಲಿ ನಾಮಪತ್ರ ಸ್ವೀಕರಿಸಲು ನಿಗದಿಪಡಿಸಿರುವ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ. ಚುನಾವಣೆಗೆ ಸ್ಪರ್ಧಿಸಬಯಸುವ ಅಭ್ಯರ್ಥಿಗಳು ನಾಮಪತ್ರಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ವೇಳಾಪಟ್ಟಿಯಂತೆ ಚುನಾವಣಾಧಿಕಾರಿಗೆ ಸಲ್ಲಿಸಬಹುದು.

ನಿಯಂತ್ರಣ ಕೊಠಡಿ: ಗ್ರಾಮ ಪಂಚಾಯಿತಿ ಉಪಚುನಾವಣೆ–2022ರ (ಮೇ ಮಾಹೆ) ಸಂಬಂಧ ಯಾವುದೇ ಮಾಹಿತಿಗಳು ಹಾಗೂ ದೂರುಗಳ ನಿರ್ವಹಣೆಗಾಗಿ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿದೆ. ಜಿಲ್ಲಾಧಿಕಾರಿಗಳ ಕಚೇರಿ, ಮೈಸೂರು, ಕಂಟ್ರೋಲ್ ರೂಂ ದೂ.ಸಂಖ್ಯೆ–1077, ಉಪವಿಭಾಗಾಧಿಕಾರಿಗಳು, ಮೈಸೂರು ಉಪವಿಭಾಗ, ಮೈಸೂರು ದೂರವಾಣಿ ಸಂಖ್ಯೆ–0821–2422100, ಉಪವಿಭಾಗಾಧಿಕಾರಿಗಳು, ಹುಣಸೂರು ಉಪ ವಿಭಾಗ, ಹುಣಸೂರು ದೂ.ಸಂಖ್ಯೆ –08222–252073, ನಂಜನಗೂಡು ತಾಲೂಕು ಕಚೇರಿ ದೂ.ಸಂಖ್ಯೆ –08221–223108, ಪಿರಿಯಾಪಟ್ಟಣ, ತಾಲೂಕು ಕಚೇರಿ ದೂ.ಸಂಖ್ಯೆ – 08223–274007 ಯಾವುದೇ ದೂರು ಅಥವಾ ಮಾಹಿತಿಯನ್ನು ನೀಡಲು ನಿಯಂತ್ರಣ ಕೊಠಡಿಗಳ ದೂರವಾಣಿಯನ್ನು ಸಂಪರ್ಕಿಸಬಹುದಾಗಿದೆ.

ಚುನಾವಣಾ ನೀತಿ ಸಂಹಿತೆ: ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 308ಎಸಿರಂತೆ ಚುನಾವಣಾ ನೀತಿ ಸಂಹಿತೆಯು ಮೇ 5ರಿಂದ ಮೇ 22ರವರೆಗೆ ಜಾರಿಯಲ್ಲಿರುತ್ತದೆ. ಚುನಾವಣಾ ನೀತಿ ಸಂಹಿತೆಯು ಚುನಾವಣೆ ನಡೆಯುವ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರದೇಶಕ್ಕೆ ಮಾತ್ರ ಅನ್ವಯವಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

03.05.2022 ಮಂಗಳವಾರ, ಮಳೆ ನಕ್ಷತ್ರ : ಭರಣಿ 27.04.2022 ರಿಂದ 10.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ
ತಿಥಿ: ತೃತೀಯ, ನಕ್ಷತ್ರ: ರೋಹಿಣಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20ಗೀತಾರಾಧನ, 6.35 ಮತ್ತು 5.00 ಅಕ್ಷರ ಮೈಸೂರು ಅನ್ನದ ಸೂರು –ಮೈಸೂರಿನ ಪರಂಪರೆಯಲ್ಲಿ ಅನ್ನ ಅಕ್ಷರಗಳ ನೆನಪು, ಪ್ರಸ್ತುತಿ–ಡಾ. ವಿ. ರಂಗನಾಥ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಕೆ.ಪಿ.ರೇವತಿ, ಬಿ. ಶ್ರೀರಾಂಭಟ್, ವ್ಯಾಖ್ಯಾನ– ಕೆ.ಎಲ್.ಪದ್ಮಿನಿ ಹೆಗಡೆ, 7.15 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 10.05 ಖೇಲೋ ಇಂಡಿಯಾ ಯೂನಿವರ್ಸಿಟಿ ಕ್ರೀಡಾಕೂಟ 2021–ದಿನದ ಮುಖ್ಯಾಂಶಗಳ ಕನ್ನಡ ಅವತರಣಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05ವನಿತಾ ವಿಹಾರ, 12.30 ದೇವರನಾಮ– ಎಂ. ವೆಂಕಟೇಶ್ ಕುಮಾ, ರಘು ಹೆಗಡೆ, 1.20 ಭಾವಗೀತೆ–ಎ.ಎನ್. ಶೀಲ, 3.00 ಅನಯಂ ಪಟ್ಟಿ ಎಸ್. ಗಣೇಶನ್ – ಜಲತರಂಗ್, 4.00 ಶ್ರೀ ಬಸವೇಶ್ವರರ ಜಯಂತಿಯ ಸಂದರ್ಭದಲ್ಲಿ ವಿಶೇಷ ರೂಪಕ 'ವಚನ ಗಂಗಾ', ಪ್ರಸ್ತುತಿ–ಪ್ರಭುಸ್ವಾಮಿ ಮಳೀಮಠ್, 4.45 ವಚನ ಗಾಯನ, 6.50ಕೃಷಿರಂಗ–ಕಿಸಾನ್‌ವಾಣಿ, ಗ್ರಾಮೀಣ ಯುವ ಜನತೆಗೆ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು ಕುರಿತು ಜೆ.ಜಿ. ರಾಜಣ್ಣ ಅವರೊಡನೆ ಸಂದರ್ಶನ, 9.30 ಎಂ.ಎಸ್. ಸುಬ್ಬಲಕ್ಷ್ಮಿ – ಹಾಡುಗಾರಿಕೆ, 10.30 ಸವಿನೆನಪು

- **ಗೃಹಶೋಭೆ ಇಂಟರ್‌ನ್ಯಾಷನಲ್ ಟ್ರೇಡ್ ಫೇರ್ :** ಗೃಹಶೋಭೆ ಜೀವನ ಶೈಲಿ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಗ್ರೌಂಡ್, ಬೆಳಗ್ಗೆ 11ರಿಂದ.
- **ಮೈಸೂರು ಉತ್ಸವ :** ಮುಖ್ಯ ಅತಿಥಿಗಳು : ಶಾಸಕರಾದ ಎಸ್.ಎ. ರಾಮದಾಸ್, ಎಲ್. ನಾಗೇಂದ್ರ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ.
- **ಇಂಡಿಯನ್ ಥಿಯೇಟರ್ :** ಭೀಮಣ್ಣನ ಮಗ ನಾಟಕ ಪ್ರದರ್ಶನ, ನಿರ್ದೇಶನ : ಪ್ರೊ. ಹೆಚ್.ಎಸ್. ಉಮೇಶ್, ಸ್ಥಳ: ರಮಾಬಾಯಿ ಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 7ಕ್ಕೆ.
- **ಜನ ಚೈತನ್ಯ ಫೌಂಡೇಷನ್:** ಡಾ. ವಿಷ್ಣುವರ್ಧನ್, ರೆಬಲ್‌ಸ್ಟಾರ್ ಅಂಬರೀಷ್ ಸ್ಮರಣಾರ್ಥ 'ದಿಗ್ಗಜರು' ಸಂಗೀತ ಸಂಜೆ, ಉದ್ಘಾಟನೆ : ಸಮಾಜ ಸೇವಕ ರವಿಗೌಡ, ಅಧ್ಯಕ್ಷತೆ : ಎನ್. ಶ್ರೀನಿವಾಸಲು, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಎಂ.ಎನ್. ಮಲ್ಲಿಕಾರ್ಜುನಸ್ವಾಮಿ, ಬಿ.ಎಂ. ಸಿದ್ದರಾಜು, ಎಂ.ಆರ್. ವೆಂಕಟೇಶ್, ಎಂ.ಎನ್. ಸಂಪತ್‌ಕುಮಾರ್, ನಾಗರಾಜ್ ತಲಕಾಡು, ಸ್ಥಳ: ನಾದಬ್ರಹ್ಮ ಸಂಗೀತ ಸಭಾ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4.30ಕ್ಕೆ.
- **ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ, ವೀರಶೈವ–ಲಿಂಗಾಯತ ಸಂಘ ಸಂಸ್ಥೆಗಳು, ಬಸವ ಬಳಗಗಳ ಒಕ್ಕೂಟ, ಜಿಲ್ಲಾಡಳಿತ :** ಬಸವ ಜಯಂತಿ, ಬೆಳಗ್ಗೆ 8 ಗಂಟೆಗೆ ಶ್ರೀ ಕುದೇರು ಮಠದ ಶ್ರೀ ಗುರುಶಾಂತ ಸ್ವಾಮಿಗಳಿಂದ ಷಟ್‌ಸ್ಥಲ ಧ್ವಜಾರೋಹಣ, ಬೆಳಗ್ಗೆ 8.30ಕ್ಕೆ ಶ್ರೀ ಬಸವಣ್ಣನವರ ಪುತ್ಥಳಿ ಮೆರವಣಿಗೆ ಉದ್ಘಾಟನೆ, ಸಾನ್ನಿಧ್ಯ : ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮಿಗಳು, ಉದ್ಘಾಟನೆ: ದೇವನೂರು ಶ್ರೀ ಗುರುಮಲ್ಲೇಶ್ವರ ದಾಸೋಹ ಮಹಾಸಂಸ್ಥಾನ ಮಠದ ಶ್ರೀ ಮಹಾಂತ ಸ್ವಾಮೀಜಿ, ಅಧ್ಯಕ್ಷತೆ : ಶಾಸಕ ಎಸ್.ಎ. ರಾಮದಾಸ್, ಮುಖ್ಯ ಅತಿಥಿಗಳು: ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಹಂಗಾಮಿ ಉಪಮೇಯರ್ ಅನ್ವರ್ ಬೇಗ್, ಪಾಲಿಕೆ ಸದಸ್ಯ ಬಿ.ವಿ. ಮಂಜುನಾಥ್, ಪಾಲಿಕೆ ಆಯುಕ್ತ ಐ. ಲಕ್ಷ್ಮೀಕಾಂತರೆಡ್ಡಿ, ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಪೊಲೀಸ್ ವರಿಷ್ಠಾಧಿಕಾರಿ ಆರ್. ಚೇತನ್, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಮುಡಾ ಆಯುಕ್ತ ಡಾ. ಡಿ.ಬಿ. ನಟೇಶ್, ಬೆಳಗ್ಗೆ 11 ಗಂಟೆಗೆ ವೇದಿಕೆ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ : ಶಾಸಕ ಎಲ್.ನಾಗೇಂದ್ರ, ಕೃತಿ ಬಿಡುಗಡೆ : ಸಂಸದ ಪ್ರತಾಪ್ ಸಿಂಹ, ಮುಖ್ಯ ಅತಿಥಿಗಳು : ಸಂಸದರಾದ ವಿ. ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಸ್ಥಳ: ಕಲಾಮಂದಿರ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 3 ಮಂಗಳವಾರ 2022

ಸಂಪುಟ: 43 | ಸಂಚಿಕೆ: 17 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಪಿಎಸ್ಐ ನೇಮಕಾತಿ ಹಗರಣ

ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಪಾತ್ರ: ಕಾಂಗ್ರೆಸ್ ಗಂಭೀರ ಆರೋಪ

- ಸಚಿವರ ರಾಜೀನಾಮೆಗೆ ಕಾಂಗ್ರೆಸ್ ವಕ್ತಾರ ವಿ.ಎಸ್.ಉಗ್ರಪ್ಪ ಆಗ್ರಹ
- ಕೆಪಿಸಿಸಿ ಅಧ್ಯಕ್ಷ ಡಿಕೆಶಿಯಿಂದಲೂ ಸಚಿವರ ಮೇಲೆ ಆರೋಪ
- ಸಹೋದರನ ವಿಚಾರಣೆಗೆ ಅವಕಾಶ ನೀಡದ ಸಚಿವರು: ವಾಗ್ದಾಳಿ
- ಸಿಐಡಿ ವಿಚಾರಣೆ ವೇಳೆ ಅಭ್ಯರ್ಥಿಯಿಂದ ಹಣ ನೀಡಿದ ಮಾಹಿತಿ

ಬೆಂಗಳೂರು,ಮೇ 2–ಪಿಎಸ್ಐ ನೇಮಕಾತಿ ಪರೀಕ್ಷೆ ಹಗರಣದಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ ಅವರ ಸಹೋದರನ ಪಾತ್ರವಿದೆ ಎಂದು ಕೆಪಿಸಿಸಿ ವಕ್ತಾರ ವಿ.ಎಸ್. ಉಗ್ರಪ್ಪ ಆರೋಪಿಸಿದರೆ, ಹಗರಣದಲ್ಲಿ ಪ್ರಭಾವಿ ಸಚಿವರೊಬ್ಬರ ಪಾತ್ರವಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.





ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿ.ಎಸ್.ಉಗ್ರಪ್ಪ, ಈ ಹಗರಣದಲ್ಲಿ ಸಚಿವ ಅಶ್ವತ್ಥನಾರಾಯಣ ಸಹೋದರ ಸತೀಶ್ ಅವರ ಪಾತ್ರವಿದೆ. 4ನೇ ಟಾಪರ್ ಆಗಿ ಬಂದಿರುವ ಅಭ್ಯರ್ಥಿ ದರ್ಶನ್ ಗೌಡರಿಂದ ಸತೀಶ್ 80 ಲಕ್ಷ ರೂ. ಪಡೆದಿದ್ದರು ಎಂದರು. ಈ ವಿಚಾರದಲ್ಲಿ ಸಚಿವ ಅಶ್ವತ್ಥನಾರಾಯಣ ಪ್ರಭಾವ ಬೀರಿ ತಮ್ಮ ಸಹೋದರನನ್ನು ರಕ್ಷಿಸಿದ್ದಾರೆ. ಅವರು ಉಸ್ತುವಾರಿ ವಹಿಸಿರುವ ರಾಮನಗರ ಜಿಲ್ಲೆಯ ಮಾಗಡಿ ತಾಲೂಕು ವೊಂದರಲ್ಲೇ ಮೂರರಿಂದ ಐವರು ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.

ಇದನ್ನು ನೋಡಿದರೆ ಈ ಹಗರಣದಲ್ಲಿ ಸಚಿವರ ಪಾಲ್ಗೊಳ್ಳುವಿಕೆ ಸ್ಪಷ್ಟವಾಗಿದೆ. ಹೀಗಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಸಚಿವ ಅಶ್ವತ್ಥನಾರಾಯಣ ಅವರಿಂದ ರಾಜೀನಾಮೆ ಪಡೆಯಬೇಕು ಎಂದು ಆಗ್ರಹಿಸಿದರು. ನಾನೊಬ್ಬ ವಕೀಲನು ಕೂಡ ಹೌದು. ಹಗರಣವೂ ಸಚಿವ ಅಶ್ವತ್ಥನಾರಾಯಣ ಕಡೆಗೂ ಬೆರಳು ತೋರಿಸುತ್ತಿದೆ. ನೀವು ಗಂಡಸ್ತನದ ಬಗ್ಗೆ ಮಾತನಾಡಿದ್ರಿ, ನಿಮಗೆ ಗಂಡಸ್ತನವಿದ್ದರೆ, ನಿಮಗೆ ತಾಕತ್ತಿದ್ದರೆ, ಧಮ್ ಇದ್ದರೇ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಿ. ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆ ನಡೆಸಿ ಎಂದು ಉಗ್ರಪ್ಪ ಆಗ್ರಹಿಸಿದರು.

ಮತ್ತೊಂದೆಡೆ ಡಿ.ಕೆ.ಶಿವಕುಮಾರ್ ಅವರು ಡಾ. ಅಶ್ವತ್ಥನಾರಾಯಣ ಅವರ ಹೆಸರನ್ನು ಪರೋಕ್ಷವಾಗಿ ಪ್ರಸ್ತಾಪಿಸಿ, ಆರೋಪ ಮಾಡಿದ್ದಾರೆ. ಹಗರಣದಲ್ಲಿ ಪ್ರಭಾವಿ ಶಾಸಕರ ಕೈವಾಡ ಇದೆ ಎಂದಿರುವ ಅವರು, ನಾನು ಆ ಸಚಿವರ ಬಗ್ಗೆ ಮಾತನಾಡಿ ಬಿಡಬಹುದು ಎಂಬ ಭಾವನೆಯಿಂದ ಯಾರ್ಯಾರೋ ಕರೆ ಮಾಡುತ್ತಿದ್ದಾರೆ. ಅಣ್ಣ ಅವರ ಬಗ್ಗೆ ಮಾತನಾಡಬೇಡಿ. ಅವರು ಈ ಬಾರಿ ಮುಖ್ಯಮಂತ್ರಿ ಆಗುತ್ತಾರೆ ಅವರಿಗೆ ತೊಂದರೆ ಕೊಡಬೇಡಿ ಎಂದು ಹೇಳುತ್ತಿದ್ದಾರೆ ಎಂದ ಡಿಕೆಶಿ, ಪ್ರಭಾವಿ ಸಚಿವರೊಬ್ಬರು ಕರೆ ಮಾಡಿ, ಅಕ್ರಮದಲ್ಲಿ ಭಾಗಿಯಾಗಿರುವ ಒಬ್ಬರನ್ನು ಪೊಲೀಸರಿಂದ ಬಿಡಿಸಿದ್ದಾರೆ ▶ 8ನೇ ಪುಟಕ್ಕೆ

ಸಿಐಡಿ ಎದುರು ಮತ್ತಿಬ್ಬರು ಶರಣಾಗತಿ

ಕಲಬುರಗಿ, ಮೇ 2– ಪಿಎಸ್ಐ ನೇಮಕಾತಿ ಪರೀಕ್ಷೆಯ ಅಕ್ರಮಕ್ಕೆ ಸಂಬಂಧಿಸಿದಂತೆ ಮತ್ತೋರ್ವ ಪ್ರಮುಖ ಆರೋಪಿ ಬಂಧನವಾಗಿದ್ದು, ಕಳೆದ 20 ದಿನಗಳಿಂದ ತಲೆಮರೆಸಿಕೊಂಡಿದ್ದ ಪ್ರಮುಖ ಆರೋಪಿ ನೀರಾವರಿ ಇಲಾಖೆಯ ಸಹಾಯಕ ಎಂಜಿನಿಯರ್ ಮಂಜುನಾಥ ಮೇಳಕುಂದಿ ಭಾನುವಾರ ಖುದ್ದಾಗಿ ಸಿಐಡಿಗೆ ಶರಣಾಗಿದ್ದಾರೆ.


ಮಂಜುನಾಥ್


ಕಾಶಿನಾಥ್

ಕಲಬುರಗಿಯಲ್ಲಿ ರಹಸ್ಯವಾಗಿ ಆಟೋದಲ್ಲಿ ಬಂದ ಆರೋಪಿ ಮಂಜುನಾಥ್, ಇಲ್ಲಿನ ಐವಾನ್ ಇ ಶಾಹಿ ಅತಿಥಿಗೃಹದಲ್ಲಿ ಸಿಐಡಿ ಕ್ಯಾಂಪ್ ಕಚೇರಿಗೆ ಬಂದರು. ಚಾಲಕನಿಗೆ ಹಣ ಕೊಟ್ಟ ನಂತರ ತಮ್ಮ ಜೊತೆಗೆ ತಂದಿದ್ದ ಬ್ಯಾಗನ್ನು ಹೆಗಲೇರಿಸಿಕೊಂಡು ಒಳಗೆ ಹೋದರು. ಈ ವೇಳೆ ಅಲ್ಲಿಯೇ ನೆರೆದಿದ್ದ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಆರೋಪಿ ಮಂಜುನಾಥ್, 'ನನ್ನದೇನೂ ತಪ್ಪಿಲ್ಲ. ಸುಮ್ಮನೇ ಪ್ರಕರಣದಲ್ಲಿ ಸಿಕ್ಕಿಸುತ್ತಿದ್ದಾರೆ' ಎಂದು ಹೇಳಿದರು. ಅಷ್ಟರಲ್ಲಿ ಹೊರಗೆ ಬಂದ ಪೊಲೀಸರು ಅವರನ್ನು ಕಚೇರಿಯ ಒಳಗೆ ಕರೆದೊಯ್ದರು. ಇಷ್ಟು ದಿನ ಸಣ್ಣ ಸುಳಿವೂ ಸಿಗದಂತೆ ತಲೆಮರೆಸಿಕೊಂಡಿದ್ದ ಪ್ರಮುಖ ಆರೋಪಿ ▶ 8ನೇ ಪುಟಕ್ಕೆ

ಸಾಕ್ಷ್ಯಾಧಾರಗಳಿದ್ದರೆ ಬಿಡುಗಡೆ ಮಾಡಲಿ

ಬೆಂಗಳೂರು, ಮೇ 2– ಪಿಎಸ್ಐ ನೇಮಕಾತಿ ಅಕ್ರಮದಲ್ಲಿ ತಮ್ಮ ಸಹೋದರನ ಪಾತ್ರವಿದೆ ಎಂಬ ಕಾಂಗ್ರೆಸ್ ನಾಯಕರ ಆರೋಪಗಳಿಗೆ ತಿರುಗೇಟು ನೀಡಿರುವ ಸಚಿವ ಡಾ. ಅಶ್ವತ್ಥ್‌ನಾರಾಯಣ್, ನಿರಾಧಾರವಾದ ಆರೋಪ ಮಾಡುವುದನ್ನು ಬಿಟ್ಟು, ಸಾಕ್ಷ್ಯಾಧಾರಗಳಿದ್ದರೆ ಬಿಡುಗಡೆ ಮಾಡಲಿ ಎಂದು ಸವಾಲೆಸೆದಿದ್ದಾರೆ.



ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಭ್ರಷ್ಟಾಚಾರದಲ್ಲಿ ಪಳಗಿರುವ ಕೈ ನಾಯಕರಿಗೆ ಭ್ರಷ್ಟ ರಹಿತರನ್ನು ನೋಡಿದಾಗ ಅಸೂಯೆ ಹಾಗೂ ಭಯ ಉಂಟಾಗುವುದರಲ್ಲಿ ಆಶ್ಚರ್ಯವಿಲ್ಲ. ಹಿಟ್ ಅಂಡ್ ರನ್ ರಾಜಕೀಯ ಬಿಟ್ಟು ಸೂಕ್ತ ದಾಖಲೆಯಿದ್ದರೆ ಒದಗಿಸಿ. ಪುರಾವೆಯಿಲ್ಲದೆ ಮಾತನಾಡುವ ಭ್ರಷ್ಟಾಚಾರವೆಂಬ ಕಾಯಿಲೆಯಿಂದ ಬಳಲುತ್ತಿರುವ ಕಾಂಗ್ರೆಸ್ಸಿಗರಿಗೆ ಎಲ್ಲವೂ ಹಳದಿಯಾಗಿ ಕಾಣುವುದು ಸಹಜವಲ್ಲವೆ? ಗಾಳಿಯಲ್ಲಿ ಗುಂಡು ಹಾರಿಸುವ ಕೆಪಿಸಿಸಿ ಅಧ್ಯಕ್ಷರ ಕೀಳುಮಟ್ಟದ ರಾಜಕಾರಣ ಇಂದು–ನಿನ್ನೆಯದಲ್ಲ. ನಿರಾಧಾರವಾದ ಆರೋಪ ಮಾಡುವ ಬದಲು ಸಾಕ್ಷ್ಯವಿದ್ದರೆ ಬಿಡುಗಡೆ ಮಾಡಲಿ. ಪಿಎಸ್ಐ ನೇಮಕಾತಿ ಅಕ್ರಮದ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆ ನಡೆದು ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಭ್ರಷ್ಟಾಚಾರ ರಹಿತವಾಗಿ ಆಡಳಿತ ನಡೆಸುವವರಿಗೆ ಮಸಿ ಬಳಿಯುವ ವಿಫಲ ಯತ್ನ ಬಿಡಿ ಎಂದು ಟ್ವೀಟ್ ಮಾಡಿದ್ದಾರೆ.

ಮತ್ತೊಂದು ಟ್ವೀಟ್‌ನಲ್ಲಿ ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿ ವೇಳೆ ವಿ.ಎಸ್. ಉಗ್ರಪ್ಪ ಮತ್ತು ಸಲೀಂ ಗುಸುಗುಸು ಮಾತನಾಡಿದ ವೀಡಿಯೋವನ್ನು ಅಪ್ಲೋಡ್ ಮಾಡಿ, ಕೆಪಿಸಿಸಿ ಅಧ್ಯಕ್ಷರನ್ನು ಕಲೆಕ್ಷನ್ ಗಿರಾಕಿ ಎಂದಿದ್ದ ಉಗ್ರಪ್ಪ ಅವರು, ಮೇಲೇಳದ ಡಿ.ಕೆ.ಶಿವಕುಮಾರ್ ಅವರ ತಕ್ಕಡಿಯನ್ನು ಮೇಲೆತ್ತುವ ಪ್ರಯತ್ನಕ್ಕೆ ಕೈ ಹಾಕಿದಂತೆ ಕಾಣುತ್ತಿದೆ. ಉಗ್ರಪ್ಪ ಅವರಿಗೆ ತನ್ನ ಬಗ್ಗೆ ಮಾತನಾಡುವ ನೈತಿಕತೆ ಇದೆಯೇ? ಇದೆ ಎನ್ನುವುದಾದರೆ ತಾವು ಮಾಡಿರುವ ಆರೋಪವನ್ನು ಸಾಬೀತು ಮಾಡಲಿ. ಇಲ್ಲವೇ ಕ್ಷಮೆಯಾಚಿಸಲಿ ಎಂದು ಟ್ವೀಟ್ ಮಾಡಿದ್ದಾರೆ.

ಎಲ್ಲಾ ಪರೀಕ್ಷಾ ಕೇಂದ್ರದ ಬಗ್ಗೆಯೂ ತನಿಖೆಯಾಗಬೇಕು

ಮೈಸೂರು, ಮೇ 2(ಎಸ್‌ಬಿಡಿ)– ಪಿಎಸ್ಐ ನೇಮಕಾತಿ ಅಕ್ರಮ ಸಂಬಂಧ ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರದ ಬಗ್ಗೆಯೂ ತನಿಖೆಯಾಗಬೇಕು ಎಂದು ಶಾಸಕ ಪ್ರಿಯಾಂಕ ಖರ್ಗೆ ಆಗ್ರಹಿಸಿದ್ದಾರೆ.



ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 545 ಪಿಎಸ್ಐ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ಸಂಬಂಧ ಸಿಐಡಿ ಪೊಲೀಸರು ವಶಕ್ಕೆ ಪಡೆದಿರುವುದು ಮಧ್ಯವರ್ತಿಗಳನ್ನು ಮಾತ್ರ. ಅವರ್ಯಾರು ಕಿಂಗ್ ಪಿನ್‌ಗಳಲ್ಲ. ಗೃಹ ಸಚಿವ ಆರಗ ಜ್ಞಾನೇಂದ್ರಗೆ ಆಡಳಿತ ನಡೆಸಲು ಸಾಧ್ಯವಾಗದೆ ಕೈಕಟ್ಟಿ ಕುಳಿತಿದ್ದಾರೆ. ಅವರಿಗೆ ಕೇಶವ ಕೃಪಾದಿಂದ ಆದೇಶ ಬರುತ್ತಿದೆ. ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರದ ಬಗ್ಗೆ ತನಿಖೆ ನಡೆಸಿ, ಪಿಎಸ್ಐ ನೇಮಕಾತಿ ಅಕ್ರಮದ ಕಿಂಗ್ ಪಿನ್‌ಗಳನ್ನು ಹೊರಗೆಳೆಯಬೇಕು. ಬಿಟ್ ಕಾಯಿನ್ ಪ್ರಕರಣದ ತನಿಖೆ ಚುರುಕುಗೊಂಡರೆ ಬಿಜೆಪಿಯಿಂದ ರಾಜ್ಯಕ್ಕೆ ಮತ್ತೆ 3ನೇ ಮುಖ್ಯಮಂತ್ರಿ ಸಿಗಬಹುದು ಎಂದು ಹೇಳಿದರು.

ಸಂಸದ ಪ್ರತಾಪ್ ಸಿಂಹ ಟೀಕೆಗೆ ಪ್ರತಿಕ್ರಿಯಿಸಿ, ಸಿಐಡಿ ಪೊಲೀಸರು ನನಗೆ ಯಾವ ನೋಟಿಸ್ ನೀಡಿದ್ದಾರೆ ಎನ್ನುವುದನ್ನು ಸರಿಯಾಗಿ ತಿಳಿಯಲಿ. ನೋಟಿಸ್‌ಗೆ ಕಾನೂನು ಪ್ರಕಾರ ನಾನು ನಡೆದುಕೊಂಡಿದ್ದೇನೆ. ಪ್ರತಾಪ್ ಸಿಂಹಗೆ ಕಾನೂನಿನ ಅರಿವಿಲ್ಲ. ಮೊದಲು ಅವರ ಕೆಲಸ ಸರಿಯಾಗಿ ಮಾಡಲಿ ಎಂದರು.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ


ಶಿವಮೊಗ್ಗ, ಮೇ 2–ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಬೆಂಗಳೂರು ಭೇಟಿಗೂ ಮುನ್ನ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಕುರಿತ ಊಹಾಪೋಹಗಳನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸ್ಪಷ್ಟವಾಗಿ ತಳ್ಳಿಹಾಕಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ.



ಅಮಿತ್ ಶಾ ಅವರು 'ಖೇಲೋ ಇಂಡಿಯಾ' ಸಮಾರೋಪ ಸಮಾರಂಭ ಹಾಗೂ ಬಸವ ಜಯಂತಿ ಕಾರ್ಯಕ್ರಮ ಸೇರಿದಂತೆ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಲು ▶ 8ನೇ ಪುಟಕ್ಕೆ

ಇಂದಿನಿಂದ ವಾರದಲ್ಲಿ 3 ದಿನ ಮೈಸೂರು–ಹುಬ್ಬಳ್ಳಿ ವಿಮಾನ ಸಂಚಾರ

ಮೈಸೂರು,ಮೇ2(ಆರ್‌ಕೆ)–ನಾಳೆ (ಮೇ 3)ಯಿಂದ ವಾರದಲ್ಲಿ 3 ದಿನ ಮೈಸೂರು ಮತ್ತು ಹುಬ್ಬಳ್ಳಿ ನಡುವೆ ವಿಮಾನ ಹಾರಾಟ ಆರಂಭವಾಗಲಿದೆ. ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಈಗ ಅಧಿಕ ವಿಮಾನಗಳು ಸಂಚರಿಸುತ್ತಿವೆ. ಜನರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಇದೀಗ ಇಂಡಿಗೋ ಸಂಸ್ಥೆಯು ಮೈಸೂರು–ಹುಬ್ಬಳ್ಳಿ ನಡುವೆ ಸೇವೆ ಕಲ್ಪಿಸಲು ಮುಂದಾಗಿದೆ. ಮಂಗಳವಾರ ಸಂಜೆ 5.30ಗಂಟೆಗೆ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮೈಸೂರು –ಹುಬ್ಬಳ್ಳಿ ಇಂಡಿಗೋ ವಿಮಾನ ಸೇವೆಗೆ ಶಾಸಕ ನಾಗೇಂದ್ರ ಚಾಲನೆ ನೀಡುವರು ಎಂದು ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕ ಆರ್.ಮಂಜುನಾಥ್ ತಿಳಿಸಿದ್ದಾರೆ.



ಮಂಗಳವಾರ, ಗುರುವಾರ ಮತ್ತು ಶನಿವಾರಗಳಂದು ಇಂಡಿಗೋ ವಿಮಾನ ಸಂಚರಿಸಲಿದೆ. ಸಂಜೆ 5–05 ಗಂಟೆಗೆ ಹುಬ್ಬಳ್ಳಿಯಿಂದ ಹೊರಡುವ ವಿಮಾನವು, ಸಂಜೆ 6.05 ಗಂಟೆಗೆ ಮೈಸೂರು ತಲುಪಲಿದೆ. ಸಂಜೆ 6.25ಕ್ಕೆ ಮೈಸೂರಿನಿಂದ ಪ್ರಯಾಣ ಬೆಳೆಸಿ 7.40ಕ್ಕೆ ಹುಬ್ಬಳ್ಳಿ ತಲುಪಲಿದೆ. ಸದ್ಯಕ್ಕೆ ವಾರದಲ್ಲಿ 3 ದಿನ ಮಾತ್ರ ಸೇವೆ ಕಲ್ಪಿಸಲಿರುವ ವಿಮಾನವು ಪ್ರಯಾಣಿಕರಿಂದ ಪ್ರತಿಕ್ರಿಯೆ ನೋಡಿಕೊಂಡು ಅಗತ್ಯಬಿದ್ದರೆ ಮುಂದಿನ ದಿನಗಳಲ್ಲಿ ನಿತ್ಯ ಸೇವೆ ವಿಸ್ತರಿಸಲಾಗುವುದು ಎಂದರು. ಪ್ರಸ್ತುತ ಮೈಸೂರಿನಿಂದ ಬೆಂಗಳೂರು, ಗೋವಾ, ಕೊಚ್ಚಿನ್, ಚೆನ್ನೈ, ಹೈದರಾಬಾದ್‌ಗೆ ಅಲೆಯನ್ಸ್, ಏರ್ ಇಂಡಿಗೋ ಸಂಸ್ಥೆಗಳಿಂದ ವಿಮಾನ ಸೇವೆ ಕಲ್ಪಿಸಲಾಗಿದೆ.

ಕೋವಿಡ್–19 ಲಸಿಕೆ ಪಡೆಯಲು ಯಾರನ್ನೂ ಒತ್ತಾಯಿಸುವಂತಿಲ್ಲ

ನವದೆಹಲಿ, ಮೇ 2– ಮಾರಕ ಕೋವಿಡ್–19 ನಾಲ್ಕನೇ ಅಲೆ ಭೀತಿ ನಡುವೆಯೇ ಲಸಿಕೆ ಹಾಕಿಸಿಕೊಳ್ಳಲು ಯಾರನ್ನೂ ಒತ್ತಾಯಿಸಬಾರದು ಮತ್ತು ಲಸಿಕೆಯ ಅಡ್ಡಪರಿಣಾಮಗಳನ್ನು ಸಾರ್ವಜನಿಕಗೊಳಿಸಿ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಕೋವಿಡ್ ಲಸಿಕೆ ವಿಚಾರವಾಗಿ ಇಂದು ನಡೆದ ವಿಚಾರಣೆಯಲ್ಲಿ, ಹಾಲಿ ಇರುವ ಕೇಂದ್ರ ಸರ್ಕಾರದ ಲಸಿಕೆ ನೀತಿಯನ್ನು ಅಸಮಂಜಸವೆಂದು ಹೇಳಲಾಗುವುದಿಲ್ಲ ಎಂದು ಹೇಳಿದ ಸುಪ್ರೀಂ ನ್ಯಾಯಾಲಯ ಇದೇ ವೇಳೆ ಲಸಿಕೆ ಹಾಕಿಸಿಕೊಳ್ಳಲು ಯಾರನ್ನೂ ಒತ್ತಾಯಿಸಬಾರದು ಎಂದೂ ಹೇಳಿದೆ. ಸಂವಿಧಾನದ ಅಡಿಯಲ್ಲಿ ದೈಹಿಕ ಸ್ವಾಯತ್ತತೆ ಮತ್ತು ಸಮಗ್ರತೆಯನ್ನು ರಕ್ಷಿಸಲಾಗಿದ್ದು, ಲಸಿಕೆ ಪಡೆಯುವಂತೆ ಯಾರನ್ನೂ ಒತ್ತಾಯಿಸಲಾಗುವುದಿಲ್ಲ ಎಂದು ನ್ಯಾಯಾಲಯ ಹೇಳಿದೆ.



ಉಕ್ರೇನ್‌ನಿಂದ ವಾಪಸ್ಸಾದ ಮೆಡಿಕಲ್ ವಿದ್ಯಾರ್ಥಿಗಳಿಗೆ ಜೆಎಸ್ಎಸ್ ಮೆಡಿಕಲ್ ಕಾಲೇಜಲ್ಲಿ ಬ್ರಿಡ್ಜ್ ಕೋರ್ಸಿಗೆ ಪ್ರವೇಶಾವಕಾಶ

- 2 ದಿನದಲ್ಲಿ 511 ವಿದ್ಯಾರ್ಥಿಗಳು ದಾಖಲು: ಸುತ್ತೂರು ಶ್ರೀ
- ಇವರಲ್ಲಿ ಶೇ.70ರಷ್ಟು ಕರ್ನಾಟಕದ ವಿದ್ಯಾರ್ಥಿಗಳೇ ಇದ್ದಾರೆ

ಮೈಸೂರು,ಮೇ2(ಆರ್‌ಕೆಬಿ)– ಯುದ್ಧ ನಿರತ ಉಕ್ರೇನ್, ರಷ್ಯಾ ಅಲ್ಲದೆ ಚೀನಾದಲ್ಲಿ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದು, ವಾಪಸ್ ಬಂದಿರುವ ದೇಶದ ವಿದ್ಯಾರ್ಥಿಗಳು ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಮತ್ತು ಶಿವರಾತ್ರಿ ಉನ್ನತ ಶಿಕ್ಷಣ ಅಕಾಡೆಮಿ ಆರಂಭಿಸಿರುವ ಸೇತುಬಂಧ (ಬ್ರಿಡ್ಜ್) ಕೋರ್ಸಿಗೆ ಸೇರ್ಪಡೆಯಾಗಿದ್ದಾರೆ. ಈ ಕೋರ್ಸ್‌ಗೆ ಎರಡು ದಿನದಲ್ಲಿ 511 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದು, ಅವರಲ್ಲಿ 321 ವಿದ್ಯಾರ್ಥಿಗಳು ಕರ್ನಾಟಕದವರೇ ಆಗಿದ್ದಾರೆ.



ವಿದ್ಯಾಭ್ಯಾಸ ಮುಂದುವರಿಸಲಾಗದೇ ಕಂಗಾಲಾಗಿದ್ದ ವಿದ್ಯಾರ್ಥಿಗಳ ನೆರವಿಗೆ ಇದೀಗ ಮೈಸೂರಿನ ಸುತ್ತೂರು ಮಠ ಧಾವಿಸಿದೆ. ಉಕ್ರೇನ್‌ನಿಂದ ವಾಪಸ್ಸಾಗಿರುವ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಡಲು ಸುತ್ತೂರು ಮಠ ಅವಕಾಶ ಕಲ್ಪಿಸಿದೆ. ಘೋಷಿಸಿದ್ದು 500 ಸೀಟ್‌ಗಳು. ಆದರೆ ಇನ್ನೂ 11 ಹೆಚ್ಚುವರಿ ಸೀಟ್‌ಗಳನ್ನು ಸೇರ್ಪಡೆ ಮಾಡಲಾಗಿದೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಮೈಸೂರಿನ ಸುತ್ತೂರು ಶಾಖಾ ಮಠದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಉಕ್ರೇನ್, ರಷ್ಯಾ ನಡುವಿನ ಯುದ್ಧದಿಂದಾಗಿ ಅರ್ಧಕ್ಕೆ ▶ 8ನೇ ಪುಟಕ್ಕೆ

ಸೇತುಬಂಧ ಕೋರ್ಸ್‌ಗೆ ಸೇರ ಬಯಸುವವರು 63663 66663 ಸಂಪರ್ಕಿಸಬಹುದು

ಮೈಸೂರಲ್ಲಿ 22,900 ಕೋಟಿ ರೂ. ವೆಚ್ಚದಲ್ಲಿ ಸೆಮಿಕಂಡಕ್ಟರ್ ಘಟಕ ಸ್ಥಾಪನೆ

- ಮೈಸೂರು ವಲಯದ ಸರ್ವತೋಮುಖ ಅಭಿವೃದ್ಧಿಗೆ ನಾಂದಿಯಾಗುವ ವಿಶ್ವಾಸ
- ಕಡಕೊಳ ಬಳಿಯ ಕೋಚನಹಳ್ಳಿ ಬಳಿ 150 ಎಕರೆ ಭೂಮಿ ಇದಕ್ಕಾಗಿ ಮೀಸಲು

ಮೈಸೂರು,ಮೇ2(ಆರ್‌ಕೆ)–ಮೈಸೂರಲ್ಲಿ 22,900 ಕೋಟಿ ರೂ. ಹೂಡಿಕೆಯೊಂದಿಗೆ ಸೆಮಿಕಂಡಕ್ಟರ್ ಫ್ಯಾಬ್ ಘಟಕ ಸ್ಥಾಪಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಈ ಬಗ್ಗೆ ಕರ್ನಾಟಕ ಸರ್ಕಾರವು ಇಸ್ರೇಲ್ ಮೂಲದ ಇಂಟರ್‌ನ್ಯಾಷನಲ್ ಸೆಮಿಕಂಡಕ್ಟರ್ ISMC ಅನ್‌ಲಾಗ್ ಫ್ಯಾಬ್ ಪ್ರೈವೇಟ್ ಲಿಮಿಟೆಡ್‌ನೊಂದಿಗೆ ಭಾನುವಾರ ಬೆಂಗಳೂರಿನಲ್ಲಿ ಒಡಂಬಡಿಕೆ ಮಾಡಿಕೊಂಡಿದ್ದು, ಈ ಘಟಕ ಸ್ಥಾಪಿಸುವ ನಿರ್ಧಾರಕ್ಕೆ ಮೈಸೂರಿನ ಕೈಗಾರಿಕೋದ್ಯಮಿಗಳು, ಜನಪ್ರತಿನಿಧಿಗಳು ಸಂತಸ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಮ್ಮುಖದಲ್ಲಿ ಐಟಿ–ಬಿಟಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ.ರಮಣರೆಡ್ಡಿ ಹಾಗೂ ಐಎಸ್‌ಎಂಸಿ ಅನ್‌ಲಾಗ್ ಫ್ಯಾಬ್ ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ಅಜಯ್ ಜಲನ್ ಒಡಂಬಡಿಕೆಗೆ ಸಹಿ ಹಾಕಿದರು.

ಸೆಮಿ ಕಂಡಕ್ಟರ್ ಮ್ಯಾನುಫ್ಯಾಕ್ಚರಿಂಗ್ ಘಟಕವನ್ನು 22,900 ಕೋಟಿ ರೂ. ಹೂಡಿಕೆಯೊಂದಿಗೆ ಸ್ಥಾಪಿಸುತ್ತಿರುವ ಕಂಪನಿಗೆ ಮೈಸೂರು ಭಾಗದ ಕೋಚನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಅಗತ್ಯವಿರುವ ಭೂಮಿ ನೀಡಲಾಗುವುದು. ಕಡಕೊಳ ಸಮೀಪ ನಿರ್ಮಿಸುತ್ತಿರುವ ಕಂಟೇನರ್ ಕಾರ್ಪೊರೇಷನ್ ಆಫ್ ಇಂಡಿಯಾ (CONCOR)ವೇ ಫ್ಯಾಬ್ ಘಟಕ ಸ್ಥಾಪಿಸಲು ಭೂಮಿ ನೀಡಲಾಗುವುದು ಎಂದು ಮೂಲಗಳು ತಿಳಿಸಿವೆ.


ಪ್ರತಾಪ್‌ಸಿಂಹ ಸಂಸದ


ಅರ್ಜುನ್ ರಂಗ ಛೇರ್ಮನ್, ಸಿಐಐ


ಸುಪ್ರಿಯಾ, ಛೇರ್‌ಪರ್ಸನ್, ಮೈಸೂರು ವಲಯ, ಸಿಐಐ


ಸುರೇಶ್‌ಕುಮಾರ್ ಜೈನ್, ಕಾರ್ಯದರ್ಶಿ, ಎಂಐಎ


ಕೆ.ಬಿ.ಲಿಂಗರಾಜು ಅಧ್ಯಕ್ಷರು, ಎಂಸಿಸಿಐ


ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್

1,500 ಪ್ರತ್ಯಕ್ಷ ಹಾಗೂ 10,000 ಪರೋಕ್ಷ ಉದ್ಯೋಗ ಕಲ್ಪಿಸುವ ಸೆಮಿಕಂಡಕ್ಟರ್ ಫ್ಯಾಬ್ರಿಕೇಷನ್ ಪ್ಲಾಂಟ್‌ಗೆ 150 ಎಕರೆ ಭೂಮಿ ನೀಡಬೇಕೆಂದು ಕಂಪನಿ ಕೋರಿಕೊಂಡಿದೆ

ಪ್ರತಾಪ್ ಸಿಂಹ ಸ್ವಾಗತ: ಘಟಕ ಸ್ಥಾಪಿಸುತ್ತಿರುವುದನ್ನು ಸ್ವಾಗತಿಸಿರುವ ಸಂಸದ ಪ್ರತಾಪ್ ಸಿಂಹ, ಸೆಮಿಕಂಡಕ್ಟರ್ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಪ್ರಧಾನಿ ನರೇಂದ್ರ ಮೋದಿ ಅವರು 75,000 ಕೋಟಿ ರೂ.ಗಳನ್ನು ಮೀಸಲಿರಿಸಿದ್ದು, ಮೈಸೂರು ಭಾಗದಲ್ಲಿ ಪ್ಲಾಂಟ್ ಬರುತ್ತಿರುವುದರಿಂದ ಇಲ್ಲಿನ ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿಗೆ ಇದು ಪೂರಕವಾಗಲಿದೆ ಎಂದಿದ್ದಾರೆ. ಮೈಸೂರು ವಿಮಾನ ▶ 8ನೇ ಪುಟಕ್ಕೆ

> "ಕೇಂದ್ರ ಸರ್ಕಾರ ಕಳೆದ 2020ರಲ್ಲಿ ಇಂಡಿಯಾ ಸೆಮಿಕಂಡಕ್ಟರ್ ಯೋಜನೆ ಪ್ರಕಟಿಸಿತ್ತು. ಮೊಬೈಲ್ ಸೇರಿದಂತೆ ಆಯ್ದ ಕೆಲವು ಎಲೆಕ್ಟ್ರಾನಿಕ್ ಉಪಕರಣಗಳಿಂದ ಹಿಡಿದು ಕೆಲ ಸುಧಾರಿತ ಸೇವೆಗಳು ಆಟೋಮೊಬೈಲ್ ಸೇರಿದಂತೆ ಅನೇಕ ಎಲೆಕ್ಟ್ರಾನಿಕ್ ಸಾಧನಗಳಲ್ಲಿ ಬಳಸುವ ಪ್ರಮುಖ ಉಪಕರಣವಿದು. ಸೆಮಿಕಂಡಕ್ಟರ್ ಚಿಪ್ ರೂಪಿಸುವುದರಲ್ಲಿ ಬೆಂಗಳೂರು ಮುಂಚೂಣಿಯಲ್ಲಿದೆ. ಆದರೂ ಇಡೀ ದೇಶ ಚಿಪ್‌ಗಳಿಗೆ ಅನ್ಯ ದೇಶಗಳನ್ನು ಅವಲಂಬಿಸಬೇಕಾಗಿದೆ. ಇದನ್ನು ಮನವರಿಕೆ ಮಾಡಿಕೊಂಡು ಪ್ರಧಾನಿ ನರೇಂದ್ರ ಮೋದಿ 80 ಸಾವಿರ ಕೋಟಿ ರೂ. ಹೂಡಿಕೆ ಮೂಲಕ ದೇಶದಲ್ಲಿ ಸೆಮಿಕಂಡಕ್ಟರ್ ಯೋಜನೆ ಜಾರಿಗೆ ಬಜೆಟ್‌ನಲ್ಲಿ ಘೋಷಿಸಿದ್ದರು.

ಮೈಸೂರಲ್ಲಿ ಕ್ಯಾನ್ಸರ್ ರೋಗಿಗಳಿಗೆ ಆರೈಕಾ ಕೇಂದ್ರ ಕಿದ್ವಾಯಿಗೆ 18 ಎಕರೆ ಭೂಮಿ ನೀಡಲು ಕಂದಾಯ ಇಲಾಖೆಗೆ ಪ್ರಸ್ತಾವನೆ

ಮೈಸೂರು, ಮೇ 2(ಆರ್‌ಕೆ)– ಕ್ಯಾನ್ಸರ್ ರೋಗಿಗಳ ಚಿಕಿತ್ಸೆ ಮತ್ತು ಆರೈಕೆಗಾಗಿ ಮೈಸೂರಿನಲ್ಲಿ ಕಿದ್ವಾಯಿ ಸಂಸ್ಥೆಯ ಘಟಕ ಸ್ಥಾಪಿಸಲು ಚಿಂತನೆ ನಡೆದಿದೆ.

ಪ್ರಸ್ತುತ ಕೆಆರ್ ಆಸ್ಪತ್ರೆ ಆವರಣದಲ್ಲಿ ಚಿಕ್ಕದಾಗಿ ನಡೆಯುತ್ತಿರುವ ಕಿದ್ವಾಯಿ ಘಟಕವನ್ನು ಅಗತ್ಯ ಮೂಲ ಸೌಲಭ್ಯದೊಂದಿಗೆ ಪೂರ್ಣ ಪ್ರಮಾಣದಲ್ಲಿ ಚಿಕಿತ್ಸಾ ಮತ್ತು ಆರೈಕೆ ಕೇಂದ್ರ ಸ್ಥಾಪಿಸಲು ಸಂಸದ ಪ್ರತಾಪ್ ಸಿಂಹ ಆಸಕ್ತಿ ತೋರಿದ್ದು, ಈ ಬಗ್ಗೆ ಸಂಸ್ಥೆ ಮುಖ್ಯಸ್ಥರನ್ನು ಭೇಟಿ ಮಾಡಿ ಚರ್ಚಿಸಿದ್ದರು.

ಕೇಂದ್ರ ಸರ್ಕಾರದ ಅನುದಾನದೊಂದಿಗೆ ಬೃಹತ್ ಪ್ರಮಾಣದಲ್ಲಿ ಕ್ಯಾನ್ಸರ್ ಆಸ್ಪತ್ರೆ ಸ್ಥಾಪಿಸಿ ಈ ಮಾರಕ ರೋಗಕ್ಕೆ ತುತ್ತಾಗಿ ಬದುಕಿನ ಕಡೇ ದಿನಗಳನ್ನು ಎಣಿಸುತ್ತಿರುವ ರೋಗಿಗಳಿಗೆ ಚಿಕಿತ್ಸೆ ಮತ್ತು ಆರೈಕೆ ಮಾಡಲು ಗಿಡ–ಮರಗಳಿರುವ ನೈಸರ್ಗಿಕ ಸ್ಥಳದಲ್ಲಿ ಜಾಗ ಗುರುತಿಸುವಂತೆ ಪ್ರತಾಪ್‌ಸಿಂಹ ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದರು.

ಅದರಂತೆ ಮೈಸೂರು ತಾಲೂಕು, ದಡದಕಲ್ಲಹಳ್ಳಿ ಬಳಿ 18 ಎಕರೆ ಭೂಮಿ ಗುರ್ತಿಸಲಾಗಿದ್ದು, ಕಿದ್ವಾಯಿ ಸಂಸ್ಥೆಗೆ ನೀಡುವ ಬಗ್ಗೆ ಅನುಮೋದನೆ ಕೋರಿ ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಭೂಮಿ ಹಸ್ತಾಂತರಿಸಲು ಅನುಮತಿ ನೀಡಿದಲ್ಲಿ ಸಂಸ್ಥೆಯು ಆಸ್ಪತ್ರೆ ನಿರ್ಮಿಸಲು ಮುಂದಾಗಲಿದೆ ಎಂದು ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಇದಿನ್ನೂ ಆರಂಭಿಕ ಹಂತವಾಗಿದ್ದು, ಭೂಮಿ ಮಂಜೂರು ಮಾಡಿದ ನಂತರವಷ್ಟೇ ಬೆಂಗಳೂರಿನ ಕಿದ್ವಾಯಿ ಸಂಸ್ಥೆಯು ಪ್ರಕ್ರಿಯೆ ಆರಂಭಿಸಲಿದೆ. ಸರ್ಕಾರದ ಅನುಮೋದನೆ ಬಂದ ನಂತರವಷ್ಟೇ ನಾವು ಕಿದ್ವಾಯಿ ಮುಖ್ಯಸ್ಥರೊಂದಿಗೆ ಪತ್ರ ವ್ಯವಹಾರ ನಡೆಸಿ, ಅಗತ್ಯ ನೆರವು ನೀಡುತ್ತೇವೆ ಎಂದು ಅವರು ತಿಳಿಸಿದರು.

ಆರೋಗ್ಯ ತಪಾಸಣೆ ಮಾಡಿ ಕ್ಯಾನ್ಸರ್ ರೋಗ ಪತ್ತೆ ಮಾಡಿ ಆರಂಭಿಕ ಹಂತದಲ್ಲಿರುವವರಿಗೆ ಮಾತ್ರ ಕೆಆರ್ ಆಸ್ಪತ್ರೆಯಲ್ಲಿರುವ ಘಟಕದಲ್ಲಿ ಚಿಕಿತ್ಸೆ ನೀಡಬಹುದಾಗಿದ್ದು, ತೀವ್ರ ಸ್ವರೂಪದ ಕ್ಯಾನ್ಸರ್ ಚಿಕಿತ್ಸೆಗೆ ಖಾಸಗಿ ಆಸ್ಪತ್ರೆ ಅವಲಂಬಿಸಬೇಕಾಗಿದೆ. ಅಗತ್ಯ ಮೂಲ ಸೌಲಭ್ಯದೊಂದಿಗೆ ಸರ್ಕಾರದಿಂದಲೇ ಆರೈಕೆ ಮಾಡಲು ಸುಸಜ್ಜಿತ ಕೇಂದ್ರ ಸ್ಥಾಪಿಸಬೇಕೆಂಬ ಉದ್ದೇಶದಿಂದ ಸಂಸದ ಪ್ರತಾಪ್ ಸಿಂಹ ಸರ್ಕಾರದ ಹಂತದಲ್ಲಿ ಪ್ರಯತ್ನಿಸುತ್ತಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ನಕ್ಕರೆ ಅದೇ ಸ್ವರ್ಗ

ಸುಬ್ಬಿ : "ಡಾಕ್ಟ್ರೇ, ನನ್ನ ಕೂದಲು ತುಂಬಾ ಉದುರುತ್ತಿದೆ, ಹಾಕೋಕೆ ಏನಾದರೂ ಕೊಡಿ"

ಡಾಕ್ಟರ್ : "ತಗೋ ಈ ಪ್ಲಾಸ್ಟಿಕ್ ಕವರ್, ಇದರಲ್ಲಿ ಹಾಕಿಟ್ಟುಕೋ!"

ಮೈಸೂರು ಮಿತ್ರ

ಮಂಗಳವಾರ, 3 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಸಾವಿರ ಉಪದೇಶಗಳಿಗಿಂತಲೂ ಆಪತ್ಕಾಲದಲ್ಲಿ ಮಾಡಿದ ಒಂದು ಸಹಾಯ ಶ್ರೇಷ್ಠವಾದುದು. –ಗೌತಮ ಬುದ್ಧ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಕುಣಿಯಲಾರದವಳು ನೆಲ ಡೊಂಕು ಅಂದಳಂತೆ

ನಿಮ್ಮ ಪತ್ರಗಳು

ಕಬಿನಿ ದೊಡ್ಡ ಕಾಲುವೆ ಸುತ್ತ ಸ್ವಚ್ಛತೆ ಕಾಪಾಡಿ

ಮಾನ್ಯರೆ,

ಹೆಚ್‌ಡಿ.ಕೋಟೆ ತಾಲೂಕಿನ ಸರಗೂರಿನಿಂದ ಕೊತ್ತೇಗಾಲ ನಡುವೆ ಹಾದು ಹೋಗುವ ಕಬಿನಿ ದೊಡ್ಡ ಕಾಲುವೆ ಸುತ್ತಮುತ್ತ ಪ್ಲಾಸ್ಟಿಕ್ ತ್ಯಾಜ್ಯ, ಪ್ರಾಣಿಗಳ ತ್ಯಾಜ್ಯ ಹಾಗೂ ಗೊಬ್ಬರದ ಚೀಲಗಳನ್ನು ಎಸೆಯಲಾಗಿದ್ದು, ಅಂಗಡಿ ಮತ್ತು ಹೋಟೆಲ್ ಮಾಲೀಕರು ನಾಲೆ ಪಕ್ಕದ ಜಾಗವನ್ನು ಕಸ ಸುರಿಯುವ ತಾಣವನ್ನಾಗಿಸಿಕೊಂಡಿರುವುದರಿಂದ ಅನೈರ್ಮಲ್ಯದ ವಾತಾವರಣವುಂಟಾಗಿದೆ. ಸುತ್ತ ಮುತ್ತಲ ಗ್ರಾಮಸ್ಥರು ಕಬಿನಿ ದೊಡ್ಡ ನಾಲೆಯ ನೀರನ್ನೇ ಕುಡಿಯಲು, ಅಡುಗೆಗೆ ಬಳಸುತ್ತಿದ್ದು, ತ್ಯಾಜ್ಯವಸ್ತುಗಳು ನಾಲೆ ಸೇರಿದರೆ ಈ ನೀರನ್ನು ಬಳಸುವವರ ಆರೋಗ್ಯದ ಮೇಲೆ ದುಷ್ಪರಿಣಾಮವುಂಟಾಗುತ್ತದೆ.

ಸರಗೂರು ಗ್ರಾಮದಿಂದ ಚಿಕ್ಕದೇವಮ್ಮ ಬೆಟ್ಟಕ್ಕೆ ಹೋಗುವ ಮಾರ್ಗದಲ್ಲೂ ಕುಡುಕರು ಕುಡಿದು ಬಿಸಾಡಿರುವ ಬಿಯರ್ ಬಾಟಲ್‌ಗಳ ದರ್ಶನವಾಗುತ್ತಿದ್ದು, ಶ್ರದ್ಧಾ ಭಕ್ತಿಯಿಂದ ದೇವಾಲಯಕ್ಕೆ ತೆರಳುವ ಭಕ್ತರು ಈ ಅನೈರ್ಮಲ್ಯ ವಾತಾವರಣವನ್ನು ಕಂಡು ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಗ್ರಾಮದಲ್ಲಿ ಅದರಲ್ಲೂ ಕಬಿನಿ ದೊಡ್ಡ ನಾಲೆ ಮತ್ತು ಚಿಕ್ಕ ದೇವಮ್ಮ ಬೆಟ್ಟಕ್ಕೆ ಹೋಗುವ ಮಾರ್ಗದಲ್ಲಿ ಸ್ವಚ್ಛತೆ ಕಾಪಾಡುವಂತೆ ಒತ್ತಾಯಿಸಿ ಗ್ರಾಮಸ್ಥರು ದೂರು ನೀಡಲು ಪುರಸಭೆಗೆ ಹೋದರೆ ಅಲ್ಲಿನ ಸಿಬ್ಬಂದಿ ದೂರು ಸ್ವೀಕರಿಸಲು ನಿರಾಕರಿಸುತ್ತಾರೆ.

ಸಂಬಂಧಪಟ್ಟವರು ಈಗಲಾದರೂ ಕಬಿನಿ ದೊಡ್ಡ ನಾಲೆ ಸುತ್ತಮುತ್ತ ಹಾಗೂ ಚಿಕ್ಕದೇವಮ್ಮ ಬೆಟ್ಟಕ್ಕೆ ಹೋಗುವ ಮಾರ್ಗದಲ್ಲಿ ಕಸವನ್ನು ತೆರವುಗೊಳಿಸಬೇಕು ಹಾಗೂ ಇಲ್ಲಿ ಕಸ ಹಾಕದಂತೆ ಸೂಚನಾ ಫಲಕವನ್ನು ಅಳವಡಿಸಿ ಕಸ ಹಾಕುವವರಿಗೆ ದಂಡ ವಿಧಿಸುವ ಮೂಲಕ ನೈರ್ಮಲ್ಯ ಕಾಪಾಡಲು ಕ್ರಮ ಕೈಗೊಳ್ಳಬೇಕಾಗಿದೆ.

– ಬಿ.ಸಿ.ನೀಲಮ್ಮ, ರೂಪನಗರ ಮೈಸೂರು

ಹಾವೇರಿ ಸಾಹಿತ್ಯ ಸಮ್ಮೇಳನದ ದಿನಾಂಕ ಬದಲಿಸಿ

ಮಾನ್ಯರೇ

86ನೇ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ತವರು ಜಿಲ್ಲೆ ಹಾವೇರಿಯಲ್ಲಿ ಸೆ.23, 24,25ರಂದು ಆಯೋಜಿಸಿದ್ದು, ಸಾಹಿತಿ ದೊಡ್ಡರಂಗೇಗೌಡರು ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ಸಂತಸದ ಸಂಗತಿ.

ಸೆ.25ರಂದು ಮಹಾಲಯ ಅಮಾವಾಸ್ಯೆ ಇರುವುದರಿಂದ ಹಳೇ ಮೈಸೂರು ಪ್ರಾಂತ್ಯದ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ರಾಮನಗರ, ಚಿತ್ರದುರ್ಗ, ಶಿವಮೊಗ್ಗ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರಿನಲ್ಲಿ ಪ್ರತಿ ಮನೆಯಲ್ಲೂ ಅದ್ಧೂರಿಯಾಗಿ ಆಚರಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಈ ಭಾಗದ ಕನ್ನಡಾಭಿಮಾನಿಗಳು ಸಮ್ಮೇಳನದಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ.

ಆದ್ದರಿಂದ ಮುಖ್ಯಮಂತ್ರಿಗಳು, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರೂ ಹಾಗೂ ಸ್ಥಳೀಯ ಜನ ಪ್ರತಿನಿಧಿಗಳು ಸಾಹಿತ್ಯ ಸಮ್ಮೇಳನದ ದಿನಾಂಕವನ್ನು ಮಾರ್ಪಾಡು ಮಾಡುವ ಮೂಲಕ ಹಳೇ ಮೈಸೂರು ಭಾಗದ ಕನ್ನಡಾಭಿಮಾನಿಗಳು ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಬೇಕಾಗಿದೆ.

– ಎಂ.ಹೆಚ್.ಹನುಮಂತಯ್ಯ, ಕುವೆಂಪುನಗರ ಮೈಸೂರು

ತಪ್ಪಿತಸ್ಥರಿಗೆ ಶಿಕ್ಷೆಯಾಗದಿರುವುದೇ ಅಪರಾಧ ಹೆಚ್ಚಳಕ್ಕೆ ಕಾರಣ

ಮಾನ್ಯರೇ

ಕಳೆದ ಸುಮಾರು 2–3 ತಿಂಗಳಿನಿಂದ ಒಂದೇ ಸಮನೆ ಬಿಡುವಿಲ್ಲದಂತೆ ಸರ್ಕಾರಿ ಇಲಾಖೆಗಳಲ್ಲಿ ಹಾಗೂ ಸರ್ಕಾರಿ ಸಂಸ್ಥೆಗಳಲ್ಲಿ ಭ್ರಷ್ಟಾಚಾರ, ಅಕ್ರಮಗಳ ಬಗ್ಗೆ ಪ್ರತಿನಿತ್ಯ ಸುದ್ದಿಮಾಧ್ಯಮಗಳಲ್ಲಿ ಸುದ್ದಿ ಪ್ರಸಾರವಾಗುತ್ತಿದೆ.

ಇವೆಲ್ಲವೂ ಬಹಳ ವರ್ಷಗಳಿಂದಲೂ ದೊಡ್ಡ, ದೊಡ್ಡ ಭ್ರಷ್ಟರು ಸೇರಿ ಮಾಡುತ್ತಿರುವ ಕೃತ್ಯಗಳು ಎಂದರೆ ತಪ್ಪಾಗಲಾರದು. ಈ ಕೃತ್ಯಗಳಲ್ಲಿ ದೊಡ್ಡ ಗ್ಯಾಂಗ್‌ಗಳ ಕೈವಾಡವಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ ದಾಖಲೆ(ಕಡತ)ಗಳ 300 ಪುಟಗಳು, 216 ನಿವೇಶನಗಳ ವ್ಯತ್ಯಾಸಗಳು ಆಗಿರುವುದು ಅಲ್ಲಿನ ಅಧಿಕಾರಿಗಳ ಕೈವಾಡದಿಂದ ಎಂದು ಮುಡಾ ಅಧ್ಯಕ್ಷರೇ ಹೇಳಿದ್ದಾರೆ.

ಸರ್ಕಾರಿ ಹುದ್ದೆಗಳಿಗೆ ನಡೆಸುವ ಪರೀಕ್ಷೆಯಲ್ಲಿ ದೊಡ್ಡ, ದೊಡ್ಡ ತಿಮಿಂಗಿಲಗಳೇ ಸೇರಿ ಕೃತ್ಯವೆಸಗಿದ್ದು, ಈ ಬಗ್ಗೆ ಸರ್ಕಾರದಿಂದ ತನಿಖೆ ನಡೆಯುತ್ತಿರುವುದನ್ನು ರಾಜ್ಯದ ಜನತೆ ಗಮನಿಸುತ್ತಿದ್ದಾರೆ. ಇದು ತಾರ್ಕಿಕ ಅಂತ್ಯಕ್ಕೆ ಪ್ರಕರಣ ಹೋಗಬೇಕು.

ಮುಡಾ ವಿಚಾರದಲ್ಲಿ ಮನೆಯವರೇ ಕಳ್ಳರಾದರೆ ಹಿಡಿಯುವುದು ಯಾರನ್ನು? ಎಂಬ ಪ್ರಶ್ನೆ ಕಾಡುತ್ತದೆ. ಎಂತಹಾ ಭ್ರಷ್ಟರನ್ನಾದರೂ ಹಿಡಿಯಬಹುದು, ಆದರೆ ಅವರು ಕೂದಲು ಕೊಂಕದಂತೆ ರಕ್ಷಿಸಿಕೊಳ್ಳುವ ವ್ಯವಸ್ಥೆಯನ್ನೂ ನೋಡುತ್ತಿದ್ದೇವೆ.

ಭ್ರಷ್ಟರಿಗೆ, ತಪ್ಪಿತಸ್ಥರಿಗೆ, ಅಪರಾಧಿಗಳಿಗೆ ಕಾನೂನಿನ ಅಡಿಯಲ್ಲಿ (ಅದರ ವಿಧಿ ವಿಧಾನಗಳಂತೆ) ಶಿಕ್ಷೆಯಾಗುವುದು ಬಹಳ ಅಪರೂಪ ಮತ್ತು ನಿಧಾನ ಈ ಕಾರಣಕ್ಕಾಗಿ ದಿನಬೆಳಗಾದರೆ ಹೆಚ್ಚಿನ ಅಪರಾಧ ಅಕ್ರಮಗಳು, ಭ್ರಷ್ಟಾಚಾರಗಳು ಎಗ್ಗಿಲ್ಲದೇ ನಡೆಯುತ್ತಿವೆ. ವಿಚಾರಣಾ ಹಂತದಲ್ಲಿ ಆಳಕ್ಕೆ ಹೋದಷ್ಟು ದೊಡ್ಡ ಪ್ರಮಾಣದ ಅಕ್ರಮಗಳು, ಅಪರಾಧಗಳು ಬಯಲಾಗುತ್ತಾ ಹೋಗುತ್ತವೆ. ಅಕ್ರಮಗಳು ನಡೆದಾಗ, ಆರೋಪ ಮಾಡಿದಾಗ ಸಂಬಂಧಪಟ್ಟವರನ್ನು ವಿಚಾರಣೆಗೆ ಕರೆದರೂ ಹೋಗಬೇಡಿ ಎಂದು ತಡೆಯುವವರಿಗೆ ನ್ಯಾಯಾಂಗದ ಮೇಲೆ ವಿಶ್ವಾಸವಿಲ್ಲವೇ ಎಂದು ಕೇಳಬೇಕಾಗುತ್ತದೆ. ವಿಚಾರಣೆಗೆ ಗೈರಾದರೆ ಅವರಲ್ಲೇ ಏನೋ ತಪ್ಪಿರಬಹುದು ಎಂಬ ಅನುಮಾನ ಬರುವುದಿಲ್ಲವೇ? ಯಾವುದೇ ವ್ಯಕ್ತಿ ಭ್ರಷ್ಟಾಚಾರ, ಅಕ್ರಮದಲ್ಲಿ ಭಾಗಿಯಾಗಿದ್ದಾನೆಂದು ಸಾಬೀತಾದರೆ ಆತನನ್ನು ಕಾನೂನು ರೀತ್ಯ ಶಿಕ್ಷೆಗೆ ಒಳಪಡಿಸಲೇಬೇಕು. ಮಾಡಿದ ತಪ್ಪಿಗೆ ಶಿಕ್ಷೆ ನೀಡುವಲ್ಲಿ ವಿಳಂಬ ಮಾಡಿದಷ್ಟೂ ಅಪರಾಧಗಳು ದಿನೇ ದಿನೇ ಹೆಚ್ಚುತ್ತಲೇ ಇರುತ್ತವೆ.

–ಎ.ಎಸ್.ಗೋಪಾಲಕೃಷ್ಣ(ಜಿ.ಕೆ.), ಮೈಸೂರು.

ಕೇಂದ್ರ ಸರ್ಕಾರದ ನಿರ್ಧಾರ ಸ್ವಾಗತಾರ್ಹ

ಮಾನ್ಯರೆ,

ಕೇಂದ್ರೀಯ ವಿದ್ಯಾಲಯಗಳಲ್ಲಿ ಎಂಪಿ ಕೋಟಾದಡಿ ಪ್ರವೇಶ ಕಲ್ಪಿಸುವ ಸೌಲಭ್ಯವನ್ನು ಇತ್ತೀಚೆಗೆ ಕೇಂದ್ರ ಸರ್ಕಾರವು ರದ್ದುಗೊಳಿಸಿದೆ. ಅನೇಕ ವರ್ಷಗಳಿಂದ ಸೀಟುಗಳ ವಿಚಾರಕ್ಕೆ ಸಂಬಂಧಿಸಿದಂತೆ ದುರ್ಬಳಕೆ ಹಾಗೂ ಸಾಕಷ್ಟು ಆರೋಪಗಳು ಕೇಳಿಬರುತ್ತಿದ್ದವು. ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ನೂತನ ನಿಯಮ ಜಾರಿಗೆ ತಂದಿದೆ. ಈ ನಿಯಮದಡಿ ಕೊರೊನಾದಿಂದ ಪೋಷಕರು ಮೃತಪಟ್ಟ ಅನಾಥ ಮಕ್ಕಳಿಗೆ ಪ್ರತಿ ಕೇಂದ್ರೀಯ ವಿದ್ಯಾಲಯದಲ್ಲಿ 10 ಸೀಟುಗಳನ್ನು ಮೀಸಲಿಟ್ಟು, ಅವರಿಗೆ ಅತ್ಯುತ್ತಮ ಶಿಕ್ಷಣ ಒದಗಿಸುವ ಮೂಲಕ ಕೇಂದ್ರ ಸರ್ಕಾರವು ಮೇಲ್ಪಂಕ್ತಿಯನ್ನು ಹಾಕಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಮೊದಲೆಲ್ಲಾ ಕೇಂದ್ರೀಯ ವಿದ್ಯಾಲಯಗಳಲ್ಲಿ ಸಂಸದರು ತಮಗಿರುವ ಅಧಿಕಾರವನ್ನು ಬಳಸಿಕೊಂಡು ತಮಗೆ ಬೇಕಾದವರಿಗೆ, ಸಂಬಂಧಿಕರಿಗೆ, ಪಕ್ಷದ ಕಾರ್ಯಕರ್ತರಿಗೆ, ಪ್ರಭಾವಿಗಳಿಗೆ, ಸ್ವಜಾತಿಯವರಿಗೆ, ಶಿಫಾರಸು ಮಾಡುತ್ತಾರೆಂಬ ದೂರಿತ್ತು.

ಯಾವ ಉದ್ದೇಶಕ್ಕಾಗಿ ಸಂಸದರ ಕೋಟಾ ನೀಡಲಾಗಿತ್ತೋ ಆ ಉದ್ದೇಶವೇ ಈಡೇರುತ್ತಿರಲಿಲ್ಲ. ಈ ಆರೋಪಗಳನ್ನು ಸೂಕ್ಷ್ಮವಾಗಿ ಗಮನಿಸಿದ ಕೇಂದ್ರ ಸರ್ಕಾರವು ಎಂಪಿ ಕೋಟಾ ಅಲ್ಲದೆ, ಎಂಪಿಗಳ ಮೊಮ್ಮಕ್ಕಳು, ಕೇಂದ್ರೀಯ ವಿದ್ಯಾಲಯದ ನಿವೃತ್ತ ನೌಕರರು ಮತ್ತು ಕೇಂದ್ರ ಶಿಕ್ಷಣ ಸಚಿವಾಲಯದ ನೌಕರರ ಪಾಲಿಗೆ ಮೀಸಲಾಗಿದ್ದ ಕೋಟಾವನ್ನೂ ರದ್ದುಗೊಳಿಸಿರುವುದು ಶ್ಲಾಘನೀಯ ನಿರ್ಧಾರ ಎಂದು ಪೋಷಕರಿಂದ ಮೆಚ್ಚುಗೆ ವ್ಯಕ್ತವಾಗುತ್ತಿದೆ.!!

–ಪರಶಿವಮೂರ್ತಿ ಎನ್.ಪಿ., ಸರಗೂರು ತಾ.

ಸುಪ್ರಭ



ಜಿ.ಎಲ್. ತ್ರಿಪುರಾಂತಕ
ಮೊ : 9686677284

ಬದುಕುವ ಕಲೆಯ ಮಹಾಶಿಲ್ಪಿ ಬಸವಣ್ಣ



ಶತಮಾನಗಳೇ ಆದರೂ ಶಿವಶರಣರ, ವಚನಕಾರರ ಬದುಕು ಹಾಗೂ ಬರಹ ಇಂದಿಗೂ ಪ್ರಸ್ತುತವಾಗಿರುವುದು ಅವರ ಅಧಮ್ಯ ಅನುಭವಕ್ಕೆ ಸಾಕ್ಷಿಯಾಗಿದೆ. ಜೀವನ ಮೌಲ್ಯಗಳನ್ನು ನೇರವಾಗಿ, ನಿಷ್ಠುರವಾಗಿ ಹೇಳುವ ಶರಣರ ವಚನಗಳಿಗೆ ಸಾಟಿಯಾದ ಬೇರೆ ಸಾಹಿತ್ಯವಿಲ್ಲ. ಹೇಳುವ ಮಾತನ್ನು ಕ್ಲಿಷ್ಟವಾಗಿ ಹೇಳದೆ ಬಹಳ ಸರಳವಾಗಿ ಹೇಳುವ ಮೂಲಕ ಸಾಮಾನ್ಯರ ವ್ಯಕ್ತಿತ್ವ ವಿಕಸನಕ್ಕೆ ವಚನಗಳು ಸಾಕ್ಷಿಯಾಗಿವೆ. ದೇವರು, ಭಕ್ತಿ, ದಯೆ, ಧರ್ಮ, ನಂಬಿಕೆ, ಕಾಯಕ, ಆಸೆ, ಮೌಢ್ಯ...... ಹೀಗೆ ಹತ್ತಾರು ವಿಷಯಗಳ ಕುರಿತು ನೂರಾರು ಶರಣರು ತಮ್ಮ ವಚನಗಳಲ್ಲಿ ತಮ್ಮದೇ ಆದ ನಿಲುವುಗಳನ್ನು ಪ್ರಕಟಿಸಿದ್ದಾರೆ. ಅವರು ನುಡಿದಂತೆ ನಡೆದ ಕಾರಣ ಅವರ ವಚನಗಳು ಇಲ್ಲಿಯವರೆವಿಗೂ ನಡೆದು ಬಂದಿವೆ 'ಪುರಾಣ ಹೇಳೋದಿಕ್ಕೆ ಬದನೆಕಾಯಿ ತಿನ್ನೋದಿಕ್ಕೆ' ಎಂಬ ಮಾತಿನಂತೆ ಅವರ ನಡೆನುಡಿ ಬೇರೆಯಾಗಿದ್ದರೆ ಎಂದೋ ಮರೆಯಾಗುತ್ತಿದ್ದವು. ಆಧುನಿಕ ಜಗತ್ತಿನ ಸ್ಪರ್ಧಾಯುಗದಲ್ಲಿ ಅಸಹಜ ಬದುಕಿನಿಂದ ತತ್ತರಿಸುತ್ತಿರುವ ಜನರನ್ನು ಸಹಜ ಬದುಕಿನತ್ತ ಮುಖ ಮಾಡಲು ಈ ವಚನಗಳು ಸಹಕಾರಿ ಯಾಗಿವೆ. ವಚನಕಾರರಾದ ಬಸವಣ್ಣನವರ ರಚನೆಯ ವಚನಗಳಿಗಂತೂ ಮನುಷ್ಯ ಎಂಬ ಕಲ್ಲುಬಂಡೆಯನ್ನು ಮಾನವತೆಯ ಸಾಕಾರಮೂರ್ತಿಯಾಗಿ ಕೆತ್ತನೆ ಮಾಡುವ ಶಕ್ತಿಯಿದೆ, ಆ ಮೂಲಕ ಬಸವಣ್ಣನವರು ಬದುಕುವ ಕಲೆಯ ಮಹಾಶಿಲ್ಪಿ ಎನಿಸುತ್ತಾರೆ.

ಭೂಮಿಯ ಮೇಲೆ ಅತ್ಯಂತ ಬುದ್ಧಿವಂತ ಪ್ರಾಣಿ ಎಂದರೆ ಮನುಷ್ಯ. ಅನೇಕ ಆವಿಷ್ಕಾರಗಳ ಮುಖಾಂತರ ತನ್ನ ಬದುಕನ್ನು ಸುಖಕರವಾಗಿಸಿಕೊಂಡಿದ್ದಾನೆ. ಪ್ರಕೃತಿಯಲ್ಲಿ ದೊರೆಯುವ ಪ್ರತಿಯೊಂದು ವಸ್ತುವನ್ನು ತನ್ನ ಸೌಖ್ಯಕ್ಕಾಗಿ ಬಳಸಲು ಯತ್ನಿಸುತ್ತಾನೆ. ಸಣ್ಣ ಗಿಳಿಯಿಂದ ಹಿಡಿದು ದೊಡ್ಡ ಆನೆವರೆವಿಗೆ ಪಳಗಿಸುವ ಶಕ್ತಿ ಹಾಗೂ ಯುಕ್ತಿಯನ್ನು ಹೊಂದಿದ್ದಾನೆ. ಭೂಮಿಯ ಮೇಲೆ ಸರ್ವಶಕ್ತ ಎಂಬುದನ್ನು ನಿರೂಪಿಸಿದ್ದಾನೆ. ಆದರೂ ಆತ್ಮಹತ್ಯೆ ಮಾಡಿಕೊಳ್ಳುವ ಏಕೈಕ ಪ್ರಾಣಿ ಮನುಷ್ಯನೇ ಆಗಿದ್ದಾನೆ. ಅದು ಹೇಗೆ ಬುದ್ಧಿವಂತ ಪ್ರಾಣಿ ಆತ್ಮಹತ್ಯೆ ಮಾಡಿಕೊಳ್ಳುತ್ತದೆ ಎಂಬ ಪ್ರಶ್ನೆ ಮೂಡುತ್ತದೆ. ಸಾವಿರಾರು ವರ್ಷಗಳಿಂದ ಯಾವುದೇ ಪ್ರಾಣಿಪಕ್ಷಿ ತಮ್ಮ ಜೀವನಕ್ರಮವನ್ನು ಬದಲಿಸಿಕೊಂಡಿಲ್ಲ. ಆದರೆ ಮನುಷ್ಯ ಪೀಳಿಗೆಯಿಂದ ಪೀಳಿಗೆಗೆ ತನ್ನ ಜೀವನಕ್ರಮವನ್ನು ಬದಲಿಸುತ್ತಲೇ ಇದ್ದಾನೆ. ಅಂದರೆ ಸಹಜ ಬದುಕಿನಿಂದ ದೂರಾಗಿ ಅಸಹಜ ಬದುಕಿಗೆ ಒಗ್ಗಿಕೊಳ್ಳುತ್ತಿದ್ದಾನೆ. ಈ ಅಸಹಜ ಹಾಗೂ ಅಸ್ವಾಭಾವಿಕ ಬದುಕು ಮನುಷ್ಯನಿಗೆ **ಸುಖ** ಒದಗಿಸಿದರೂ **ನೆಮ್ಮದಿ**ಯನ್ನು ನೀಡುತ್ತಿಲ್ಲ. ಆ ಕಾರಣಕ್ಕೆ ನೆಮ್ಮದಿ ಅರಸಿ ಗುಡಿಗೋಪುರಗಳನ್ನು ಸುತ್ತುವುದು, ಜ್ಯೋತಿಷಿ ಬಳಿ ಹೋಗಿ **ಭವಿಷ್ಯದ** ಕುರಿತು ಕೇಳುವುದು ರೂಢಿ ಮಾಡಿಕೊಂಡಿದ್ದಾನೆ. ವ್ಯಕ್ತಿತ್ವ ವಿಕಸನ ಶಿಬಿರ ಅಥವಾ ಬದುಕುವ ಕಲೆಯಂತಹ ಶಿಬಿರಗಳಲ್ಲಿ ಭಾಗಿಯಾಗುತ್ತಾನೆ. ಯಾವ ಪ್ರಾಣಿಪಕ್ಷಿಯು ಶಾಲೆಗೆ ಹೋಗುವುದಿಲ್ಲ. ಅವುಗಳಿಗೆ ಪ್ರಕೃತಿಯ ಮುಕ್ತ ಶಾಲೆ. ಆದರೆ ಶಿಕ್ಷಿತ, ವಿದ್ಯಾವಂತ ಮನುಷ್ಯ ಮಾತ್ರ ಬದುಕುವ ಕಲೆ ಅರಿಯಲು ತರಬೇತಿ ಬಯಸುತ್ತಾನೆ. ಇದು ಸ್ವಯಂಕೃತ, ಅಸಹಜ ಬದುಕನ್ನು ರೂಢಿಸಿಕೊಂಡು ಸಹಜ ಬದುಕಿಗಾಗಿ ಹೋರಾಟವನ್ನೇ ನಡೆಸುತ್ತಿದ್ದಾನೆ. ಮನುಷ್ಯನಿಗೆ ಜೀವಾಮೃತವಾಗಿ ಬಸವಣ್ಣನವರ ವಚನಗಳು ಕಾಣುತ್ತವೆ.

> **ಸಾವಿರಾರು ವರ್ಷಗಳಿಂದ ಯಾವುದೇ ಪ್ರಾಣಿಪಕ್ಷಿ ತಮ್ಮ ಜೀವನಕ್ರಮವನ್ನು ಬದಲಿಸಿಕೊಂಡಿಲ್ಲ. ಆದರೆ ಮನುಷ್ಯ ಪೀಳಿಗೆಯಿಂದ ಪೀಳಿಗೆಗೆ ತನ್ನ ಜೀವನಕ್ರಮವನ್ನು ಬದಲಿಸುತ್ತಲೇ ಇದ್ದಾನೆ. ಅಂದರೆ ಸಹಜ ಬದುಕಿನಿಂದ ದೂರಾಗಿ ಅಸಹಜ ಬದುಕಿಗೆ ಒಗ್ಗಿಕೊಳ್ಳುತ್ತಿದ್ದಾನೆ. ಈ ಅಸಹಜ ಹಾಗೂ ಅಸ್ವಾಭಾವಿಕ ಬದುಕು ಮನುಷ್ಯನಿಗೆ ಸುಖ ಒದಗಿಸಿದರೂ ನೆಮ್ಮದಿಯನ್ನು ನೀಡುತ್ತಿಲ್ಲ. ಆ ಕಾರಣಕ್ಕೆ ನೆಮ್ಮದಿ ಅರಸಿ ಗುಡಿಗೋಪುರಗಳನ್ನು ಸುತ್ತುವುದು, ಜ್ಯೋತಿಷಿ ಬಳಿ ಹೋಗಿ ಭವಿಷ್ಯದ ಕುರಿತು ಕೇಳುವುದು ರೂಢಿ ಮಾಡಿಕೊಂಡಿದ್ದಾನೆ. ವ್ಯಕ್ತಿತ್ವ ವಿಕಸನ ಶಿಬಿರ ಅಥವಾ ಬದುಕುವ ಕಲೆಯಂತಹ ಶಿಬಿರಗಳಲ್ಲಿ ಭಾಗಿಯಾಗುತ್ತಾನೆ. ಯಾವ ಪ್ರಾಣಿಪಕ್ಷಿಯು ಶಾಲೆಗೆ ಹೋಗುವುದಿಲ್ಲ. ಅವುಗಳಿಗೆ ಪ್ರಕೃತಿಯ ಮುಕ್ತ ಶಾಲೆ. ಆದರೆ ಶಿಕ್ಷಿತ, ವಿದ್ಯಾವಂತ ಮನುಷ್ಯ ಮಾತ್ರ ಬದುಕುವ ಕಲೆ ಅರಿಯಲು ತರಬೇತಿ ಬಯಸುತ್ತಾನೆ. ಇದು ಸ್ವಯಂ ಕೃತ, ಅಸಹಜ ಬದುಕನ್ನು ರೂಢಿಸಿಕೊಂಡು ಸಹಜ ಬದುಕಿಗಾಗಿ ಹೋರಾಟವನ್ನೇ ನಡೆಸುತ್ತಿದ್ದಾನೆ. ಅವರಿಗೆ ಜೀವಾಮೃತವಾಗಿ ಬಸವಣ್ಣನವರ ವಚನಗಳು ಕಾಣುತ್ತವೆ.**

ಅನೇಕ ಧಾರ್ಮಿಕ ಗ್ರಂಥಗಳು, ವೇದ–ಉಪನಿಷತ್ತುಗಳು ಮನುಷ್ಯನ ನೆಮ್ಮದಿಯ ಬದುಕಿಗೆ ಸಹಕಾರಿಯಾಗಿವೆ. ಆದರೆ ವಚನಗಳು ಮಾತ್ರ ಬಹಳ ಸರಳ ರೀತಿಯಲ್ಲಿ ಬೋಧಿಸುತ್ತವೆ. ಅನೇಕ ದಾರ್ಶನಿಕರ, ಮಹಾತ್ಮರ, ಜ್ಞಾನಿಗಳ ಪ್ರವಚನದಿಂದ ಮನುಷ್ಯನಿಗೆ ಜಾಗೃತಿ ಮೂಡುತ್ತದೆ. ಅವರುಗಳು ಸಹ ವಚನಗಳನ್ನು ಉಲ್ಲೇಖಿಸುತ್ತಾರೆ. ಉದಾಹರಣೆಗೆ ವಿಶ್ವಗುರು ಎಂದು ಕರೆಯಲ್ಪಡುವ ಬಸವಣ್ಣನವರ ಈ ಒಂದು ವಚನ ಮಹಾಗ್ರಂಥವೊಂದರ ಅಧ್ಯಯನಕ್ಕೆ ಸಮ ಎಂದರೆ ತಪ್ಪಾಗಲಾರದು.

**"ಕಳಬೇಡ, ಕೊಲಬೇಡ
ಹುಸಿಯ ನುಡಿಯಲು ಬೇಡ, ಮುನಿಯಬೇಡ
ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ
ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮನೊಲಿಸುವ ಪರಿ"**

ಇದೊಂದು ವಚನವು ಬದುಕುವ ಕಲೆಗೆ ದೊಡ್ಡ ಬುನಾದಿ. ಪ್ರತಿಯೊಂದು ಪದವೂ ಮೌಲ್ಯಯುತವಾಗಿದೆ. ಈ ವಚನವು ಓದಿದವರಿಗೆ, ಕೇಳಿದವರಿಗೆ ರೋಮಾಂಚನವನ್ನುಂಟುಮಾಡುತ್ತದೆ. ದೇಶದ ಇಂದಿನ ಪ್ರಧಾನಿಗಳೇ ಬಸವೇಶ್ವರರ ವಚನಗಳ ಉಲ್ಲೇಖವನ್ನು ತಮ್ಮ ಭಾಷಣದಲ್ಲಿ ಮಾಡುತ್ತಾರೆ ಎಂದರೆ ಬಸವೇಶ್ವರರ ವಚನಗಳ ಮೌಲ್ಯ ಎಂತದ್ದು ಎಂಬ ಅರಿವಾಗುತ್ತದೆ. ಈ ವಚನದಂತೆ ಬದುಕಿನಲ್ಲಿ ನಡೆದರೆ ಅದಕ್ಕಿಂತ ಶಿಕ್ಷಣ ಬೇಕಿಲ್ಲ ಎಂದು ಹೇಳಬಹುದು. ಬಸವಣ್ಣನವರು ಮನುಷ್ಯನಲ್ಲಿ ಮನುಷ್ಯತ್ವವನ್ನು ಜಾಗೃತಗೊಳಿಸಲು ಅನೇಕ ವಚನಗಳನ್ನು ರಚಿಸಿದ್ದಾರೆ. ಅವುಗಳು ಮನುಷ್ಯನನ್ನು ಎಚ್ಚರಿಸುತ್ತಾ, ಸರಿದಾರಿಯಲ್ಲಿ ನಡೆಯಲು ಸರಳ ಮಾರ್ಗ ಎನಿಸುತ್ತವೆ. ಮನುಷ್ಯ ಅನೇಕ ಧರ್ಮಗಳನ್ನು ಅನುಸರಣೆ ಮಾಡಿದರೂ ಮಾನವ ಧರ್ಮವನ್ನೇ ಮರೆಯುತ್ತಿದ್ದಾನೆ ಎಂಬುದನ್ನು ಮನಗಂಡು ಮಾನವ ಧರ್ಮದ ತತ್ವವಾಗಿ ದಯೆಯ ಪ್ರಾಮುಖ್ಯತೆಯನ್ನು ಸಾರಿ ಹೇಳಿದ್ದಾರೆ.

**"ದಯವಿಲ್ಲದ ಧರ್ಮವಾವುದಯ್ಯಾ?
ದಯವೇ ಬೇಕು ಸಕಲ ಪ್ರಾಣಿಗಳಲ್ಲಿಯೂ
ದಯವೇ ಧರ್ಮದ ಮೂಲವಯ್ಯಾ?
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ"**

ಎಂದು ಈ ವಚನದಲ್ಲಿ ದಯೆಯ ಮಹತ್ವವನ್ನು ಎತ್ತಿಹಿಡಿದಿದ್ದಾರೆ. ಮನುಷ್ಯನಲ್ಲಿ ಕ್ರೂರತೆಯನ್ನು ತಗ್ಗಿಸಿ ಸೌಮ್ಯತೆಯನ್ನು ಹೆಚ್ಚಿಸುವಲ್ಲಿ ಈ ವಚನವು ಸಹಕಾರಿಯಾಗಿದೆ.

'ಮಾತೃ ದೇವೋಭವ, ಪಿತೃ ದೇವೋಭವ, ಆಚಾರ್ಯ ದೇವೋಭವ, ಅತಿಥಿ ದೇವೋಭವ' ಎಂದು ಹೇಳುವ ಮೂಲಕ ಅತಿಥಿಗಳನ್ನು ದೇವರಂತೆ ಕಾಣುವುದು ನಮ್ಮ ದೇಶದ ಸಂಸ್ಕೃತಿಯಾಗಿದೆ. ಆದರೆ ಇಂದು ಅತಿಥಿಗಳನ್ನು ಆಪತ್ಕಾಲದಲ್ಲಿ ನೆನೆಯುವ ಸ್ವಾರ್ಥ ಮನುಷ್ಯನಲ್ಲಿ ಮನೆ ಮಾಡಿದೆ. ಮನೆಗೆ ಬಂದ ಅತಿಥಿಗಳನ್ನು ಸತ್ಕರಿಸುವಲ್ಲಿ ಅನೇಕರು ಬಿಗುಮಾನ ತೋರುತ್ತಾರೆ. ಸ್ಥಾನಮಾನದ ಲೆಕ್ಕಾಚಾರದಲ್ಲಿ ಮನೆಗೆ ಬಂದ ಅತಿಥಿಗಳನ್ನು ಕಡೆಗಣಿಸುವ ಅನೇಕರಿದ್ದಾರೆ. ಅವರಿಗೆ ತಮ್ಮ ಈ ವಚನದ ಮೂಲಕ ಬಸವಣ್ಣನವರು ಚಾಟಿ ಬೀಸಿದ್ದಾರೆ.

**"ಏನ ಬಂದಿರಿ ಹದುಳವಿದ್ದಿರಿ ಎಂದರೆ
ನಿಮ್ಮ ಮೈಸಿರಿ ಹಾರಿ ಹೋಹುದೇ?
ಕುಳ್ಳಿರೆಂದರೆ ನೆಲ ಕುಳಿಹೋಹುದೇ?
ಒಡನೆ ನುಡಿದರೆ ಶಿರ–ಹೊಟ್ಟೆ ಒಡೆಹುದೆ
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿದ್ದರೆ
ಕೆಡಹಿ ಮೂಗ ಕೊಯ್ವುದೆ ಮಾಣ್ಬನೆ ಕೂಡಲಸಂಗಮದೇವನು?"**

ಈ ವಚನದಲ್ಲಿ ಬಸವಣ್ಣನವರು ಮನುಷ್ಯನಿಗೆ ಇರಬೇಕಾದ ಆತಿಥ್ಯದ ಗುಣಲಕ್ಷಣಗಳನ್ನು ವಿವರಿಸುತ್ತಾರೆ. ಮನೆಗೆ ಬಂದ ಅತಿಥಿಗಳನ್ನು ಸೌಜನ್ಯದಿಂದ ಮಾತನಾಡಿಸಿ ಅವರ ಯೋಗಕ್ಷೇಮ ವಿಚಾರಿಸಿದರೆ ನಿಮ್ಮ ಸಿರಿತನ ಹಾರಿ ಹೋಗುತ್ತದೆಯೇ ಎಂದು ಕಟುವಾಗಿ ಪ್ರಶ್ನಿಸುತ್ತಾರೆ. ಕುಳಿತು ಕೊಳ್ಳಲು ಹೇಳಿದರೆ ನೆಲ ಕುಳಿ ಬೀಳುವುದೇ ? ಎಂದು ಮಾರ್ಮಿಕವಾಗಿ ಪ್ರಶ್ನಿಸುವ ಮೂಲಕ ಬುದ್ಧಿ ಹೇಳುವ ಕೆಲಸವನ್ನು ಮಾಡಿದ್ದಾರೆ. ಮನೆಗೆ ಬಂದ ಅತಿಥಿಗಳನ್ನು ಆತ್ಮೀಯತೆಯಿಂದ ಮಾತನಾಡಿಸುವುದು ಸೌಜನ್ಯದ ಲಕ್ಷಣ, ಹಾಗೆ ಮಾಡದಿರುವುದು, ಕಷ್ಟದಲ್ಲಿರುವವರಿಗೆ ಸಹಾಯ ಮಾಡದೆ ಇರುವುದು ಸಜ್ಜನರ ಲಕ್ಷಣವಲ್ಲ ಎಂಬುದು ಬಸವಣ್ಣನವರ ಅಂಬೋಣ.

ಮನುಷ್ಯ ದೇವರ ಹೆಸರಿನಲ್ಲಿ ಪಾಲಿಸುವ ಮೌಢ್ಯತೆಯನ್ನು ಬಸವಣ್ಣನವರು ನೇರವಾಗಿ ಟೀಕಿಸುತ್ತಾರೆ. ಮನುಷ್ಯನ ಅರ್ಥವಿಲ್ಲದ ಆಚರಣೆಗಳನ್ನು ಕೆನ್ನೆಗೆ ಬಾರಿಸಿದಂತೆ ಪ್ರಶ್ನಿಸುತ್ತಾರೆ. ತನುವಿನಂತೆ ಮನವನ್ನು ಶುದ್ಧವಾಗಿರಿಸಿಕೊಳ್ಳಲು, ಜನಸೇವೆಯೇ ಜನಾರ್ಧನ ಸೇವೆ ಎಂದು ತಿಳಿಯುವ ವಿಚಾರಗಳನ್ನು ಅನೇಕ ವಚನಗಳಲ್ಲಿ ಉಲ್ಲೇಖಿಸಿದ್ದಾರೆ. ಅವುಗಳಲ್ಲಿ ಒಂದು ಜನಪ್ರಿಯ ವಚನ ಹೀಗಿದೆ.

**"ಕಲ್ಲ ನಾಗರ ಕಂಡರೆ ಹಾಲನೆರೆ ಎಂಬರು
ದಿಟದ ನಾಗರ ಕಂಡರೆ ಕೊಲ್ಲು ಕೊಲ್ಲೆಂಬರಯ್ಯಾ!
ಉಂಬ ಜಂಗಮ ಬಂದರೆ ನಡೆ ಎಂಬರು
ಉಣ್ಣದ ಲಿಂಗಕ್ಕೆ ಬೋನವ ಹಿಡಿವರಯ್ಯಾ !"**

ಎಂದು ಹೇಳುವ ಮೂಲಕ ಮನುಷ್ಯನಲ್ಲಿನ ಎರಡು ಬಗೆಯ ವ್ಯಕ್ತಿತ್ವವನ್ನು ಅನಾವರಣಗೊಳಿಸಿದ್ದಾರೆ. ನಿರ್ಜೀವ ವಸ್ತುವಾದ ಕಲ್ಲಿನ ಹಾವಿನ ವಿಗ್ರಹಕ್ಕೆ ಭಕ್ತಿಯಿಂದ ಹಾಲನ್ನು ಎರೆಯುವ ಜನರು, ನಿಜವಾದ ಹಾವನ್ನು ಕಂಡಾಗ ನಿರ್ದಾಕ್ಷಿಣ್ಯವಾಗಿ ಕೊಂದುಬಿಡುತ್ತಾರೆ. ಅದೇ ರೀತಿ ಉಣ್ಣುವ ಜಂಗಮ ಹಸಿದು ಮನೆಯ ಮುಂದೆ ಬಂದರೆ ಅನ್ನ ನೀಡದೆ ಮುಂದೆ ಕಳುಹಿಸುತ್ತಾರೆ, ಏನನ್ನೂ ತಿನ್ನದ ಲಿಂಗಕ್ಕೆ ನೈವೇದ್ಯ ನೀಡುತ್ತಾರೆ. ಹಸಿದವರಿಗೆ ಅನ್ನ ನೀಡದ, ದಯೆ ಇಲ್ಲದೆ ಮೂಕ ಪ್ರಾಣಿಯನ್ನು ಕೊಲ್ಲುವ ಮನುಷ್ಯನ ಮನೋಭಾವವನ್ನು ಟೀಕಿಸುವ ಮೂಲಕ ಮನುಷ್ಯನನ್ನು ಎಚ್ಚರಿಸುವ ಕೆಲಸ ಮಾಡಿದ್ದಾರೆ.

ಅನೇಕರು ತಮ್ಮ ಬದುಕನ್ನು ಸನ್ಮಾರ್ಗದಲ್ಲಿ ನಡೆಸದಿದ್ದರೂ, ಅನ್ಯರಿಗೆ ಇನ್ನಿಲ್ಲದಂತೆ ಬುದ್ಧಿ ಹೇಳುವ ದೊಡ್ಡತನ ತೋರುತ್ತಾರೆ. ತಮ್ಮ ವ್ಯಕ್ತಿತ್ವವನ್ನೇ ಸರಿಪಡಿಸಿಕೊಳ್ಳದಿದ್ದರೂ ಅನ್ಯರ ವ್ಯಕ್ತಿತ್ವದ ಕುರಿತು ಅನೇಕ ಸಲಹೆ ಸೂಚನೆಗಳನ್ನು ನೀಡುತ್ತಾರೆ. ಅಂತಹವರನ್ನು ಕಂಡು ಬರೆದ ವಚನ ಇದಾಗಿದೆ.

**"ಲೋಕದ ಡೊಂಕ ನೀವೇಕೆ ತಿದ್ದುವಿರಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ನಮ್ಮ ಕೂಡಲ ಸಂಗಮದೇವಾ"**

ಎನ್ನುವ ಮೂಲಕ ಮನುಷ್ಯನಲ್ಲಿನ ಬೇರೆಯವರಲ್ಲಿ ತಪ್ಪು ಕಂಡು ಹಿಡಿಯುವ ಮನೋಭಾವವನ್ನು ಪ್ರಶ್ನಿಸಿದ್ದಾರೆ. ತನ್ನ ಬದುಕಿನಲ್ಲಿ ತಿದ್ದಿಕೊಳ್ಳಲು ಅನೇಕ ಸಂಗತಿಗಳಿದ್ದರೂ, ಅನ್ಯರ ತಪ್ಪನ್ನು ತಿದ್ದಲು ಮುಂದಾಗುವ ಮಂದಿ ಅನೇಕರಿದ್ದಾರೆ. ಅವರಿಗೆ ಮೊದಲು ನಿಮ್ಮ ತನುಮನವನ್ನು ಸರಿಪಡಿಸಿಕೊಳ್ಳಿ ಎಂಬ ಬುದ್ಧಿ ಮಾತನ್ನು ಈ ವಚನದಲ್ಲಿ ಹೇಳಿದ್ದಾರೆ. ಮನುಷ್ಯ ಎದುರಿಸುವ ಅನೇಕ ತೊಂದರೆಗಳಿಗೆ ಅವನಲ್ಲಿ ಸದಾ ಪುಟಿಯುವ ಆಸೆಯೇ ಕಾರಣ ಎಂದು ಈ ವಚನವನ್ನು ರಚಿಸಿದ್ದಾರೆ ಎನಿಸುತ್ತದೆ.

**"ಛಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲ ಬೇಕು ಶರಣಂಗೆ ಪರದೈವವನೊಲ್ಲೆನೆಂಬ ...."**

ಅನ್ಯರಿಗೆ ಸೇರಿದ ವಸ್ತುವಿಷಯಗಳನ್ನು ಬಯಸುವುದರಿಂದ ಮನುಷ್ಯ ಇಲ್ಲಸಲ್ಲದ ಇಕ್ಕಟ್ಟಿಗೆ ಸಿಲುಕಿ ತನ್ನ ಬದುಕನ್ನು ಹೈರಾಣ ಮಾಡಿಕೊಳ್ಳುವುದನ್ನು ಮನಗಂಡು ಈ ವಚನದಲ್ಲಿ ಶರಣನಿಗೆ ಇರಬೇಕಾದ ಛಲಗಳ ಕುರಿತು ಬಣ್ಣಿಸಿದ್ದಾರೆ.


ಬಸವಣ್ಣನವರು 12ನೇ ಶತಮಾನದಲ್ಲಿ ಮನುಷ್ಯನ ಬದುಕನ್ನು ಚೆನ್ನಾಗಿ ಅರಿತು, ಅವನನ್ನು ತಿದ್ದಿತೀಡಿ ನಿಜಮನುಷ್ಯನನ್ನಾಗಿ ಮಾಡಲು ವಚನಗಳ ಮೂಲಕ ಪ್ರಯತ್ನಿಸಿದ್ದಾರೆ. ಸ್ವಾರ್ಥಿಯಾದ ಮನುಷ್ಯ ತನ್ನ ಗುರಿಸಾಧನೆಗಾಗಿ ಏನನ್ನೂ ಬೇಕಾದರೂ ಮಾಡುತ್ತಾನೆ. ತನ್ನ ಆಸೆಯ ಈಡೇರಿಕೆಗಾಗಿ ಯಾರ ಹಿತಾಸಕ್ತಿಯನ್ನು ಕಾಯುವುದಿಲ್ಲ. ಕ್ರೂರಮೃಗವೂ ಮಾಡಲಾಗದ ಕೃತ್ಯಗಳನ್ನು ಮನುಷ್ಯ ಎಸಗಿಬಿಡುತ್ತಾನೆ. ಆದ್ದರಿಂದ ಮನುಷ್ಯ ಸಮತೋಲನ ಜೀವನವನ್ನು ಕಂಡುಕೊಳ್ಳಲು ಬಸವಣ್ಣನವರ ವಚನಗಳು ನಿಜಕ್ಕೂ ಸಹಕಾರಿಯಾಗಿವೆ.

ಸತ್ಯ, ನ್ಯಾಯ, ಧರ್ಮ ಮಾರ್ಗದಲ್ಲಿ ಮನುಷ್ಯ ಸಾರ್ಥಕ ಜೀವನವನ್ನು ಕಂಡುಕೊಳ್ಳಬಹುದು. ಅಸತ್ಯ, ಅನ್ಯಾಯ, ಅಧರ್ಮದಿಂದ ಮನುಷ್ಯನ ಬದುಕು ಭೂಮಿಯ ಮೇಲೆ ನರಕ ಸದೃಶ ಜೀವನವಾಗಿಬಿಡುವ ಸಂಭವವಿರುತ್ತದೆ. ಸ್ವರ್ಗಸ್ವರೂಪವಾದ ಜೀವನವನ್ನು ರೂಪಿಸಿಕೊಳ್ಳಲು ಬಸವಣ್ಣನವರ ವಚನಗಳು ಉಪಕಾರಿಯಾಗಿವೆ. ಏನಂತೀರಿ?

ಬೆಳ್ಳಿ ಕಿರಣ : ತಿದ್ದಿ ನಡೆದರೆ ಮಾನವ ಗುದ್ದಿ ನಡೆದರೆ ದಾನವ !

ಮೈಸೂರಲ್ಲಿ ಡಾ.ಶಿವಕುಮಾರ ಸ್ವಾಮೀಜಿಗಳಿಗೆ ಗುರುವಂದನಾ ಕಾರ್ಯಕ್ರಮ

ಕಾಯಕಯೋಗಿಗೆ ಗಣ್ಯರ ನಮನ



ಮೈಸೂರು, ಮೇ 2(ಎಸ್‌ಬಿಡಿ)– ತುಮಕೂರು ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಅವರ 115ನೇ ಜಯಂತಿ ಹಿನ್ನೆಲೆಯಲ್ಲಿ ಮೈಸೂರಿನ ನಿವೇದಿತಾನಗರದಲ್ಲಿ ಭಾನುವಾರ ಗುರುವಂದನಾ ಕಾರ್ಯಕ್ರಮ ಆಯೋಜಿಸಲಾಗಿತ್ತು.

ವೀರ ವನಿತೆ ರಾಣಿ ಚೆನ್ನಮ್ಮ ಸ್ವಯಂ ಸೇವಾ ಸಂಘ, ರಾಮಕೃಷ್ಣನಗರದ ಶ್ರೀ ಬಸವೇಶ್ವರ ಸೇವಾ ಸಮಿತಿ, ಕುವೆಂಪು ನಗರದ ವೀರಶೈವ ಸ್ನೇಹ ಬಳಗ, ಬೋಗಾದಿಯ ಬಸವ ಬಳಗ ಸೇವಾ ಟ್ರಸ್ಟ್, ಬಿಇಎಂಎಲ್ ಬಸವ ಸಮಿತಿ ಹಾಗೂ ಕದಳಿ ಮಹಿಳಾ ವೇದಿಕೆ ಸಹಯೋಗದಲ್ಲಿ ನಿವೇದಿತಾನಗರದ ಎಸ್.ಆರ್. ಸುಬ್ಬರಾವ್ ಉದ್ಯಾನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಸುತ್ತೂರು ಶ್ರೀಗಳ ಸಾನಿಧ್ಯದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಈ ವೇಳೆ ಜಿಟಿಡಿ ಮಾತನಾಡಿ, ಶ್ರೀ ಶಿವಕುಮಾರ ಸ್ವಾಮೀಜಿ ಗುರುವಿನ ಸ್ಥಾನವನ್ನು ಅತ್ಯಂತ ಎತ್ತರಕ್ಕೆ ಕೊಂಡೊಯ್ದರು. ಕಾಯಕ ದಾಸೋಹ ಹಾಗೂ ಶಿಕ್ಷಣಕ್ಕೆ ಆದ್ಯತೆ ನೀಡುವ ಮೂಲಕ ನಾಡಿಗೆ ನೆರವಾಗಿದ್ದರು. ತಮ್ಮ ಮಠದಲ್ಲಿ ಉಳಿದುಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದ ಮಕ್ಕಳ ದಾಸೋಹಕ್ಕಾಗಿ ಸ್ವತಃ ಸ್ವಾಮೀಜಿ ಅವರೇ ಸೌದೆ ಒಡೆದು, ಅನ್ನ ತಯಾರಿಸುತ್ತಿದ್ದರು. ತಮ್ಮ ಬದುಕಿನ ಅಂತಿಮ ಕ್ಷಣದವರೆಗೂ ಕಾಯಕವನ್ನು ಎಂದೂ ಮರೆಯಲಿಲ್ಲ. ದೈವ ಸಮಾನರಾದ ಗುರುಗಳನ್ನು ಸ್ಮರಿಸಿಕೊಳ್ಳುವುದರಿಂದ ನಮಗೆಲ್ಲಾ ಧನ್ಯತೆ ಪ್ರಾಪ್ತವಾಗುತ್ತದೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಗುರುವಂದನೆ ಸ್ವೀಕರಿಸಿದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಗೌರವ ಸಲಹೆಗಾರ ನಾಡೋಜ ಡಾ.ಗೊ.ರು.ಚನ್ನಬಸಪ್ಪ ಮಾತನಾಡಿ, ಸಮಾಜ ಸುಧಾರಣೆ ಮಾಡುವವರು ಆರೋಪ ಎದುರಿಸುವುದು ಸರ್ವೇ ಸಾಮಾನ್ಯ. ಬಸವಣ್ಣನವರೂ ಆರೋಪಗಳನ್ನು ಮೀರಿ, ಸಮಾಜ ಸುಧಾರಣೆಗೆ ಸೇವೆ ನೀಡಿದರು. ಬಸವಣ್ಣ ಅವರ ತತ್ವ ಆದರ್ಶಗಳನ್ನೇ ಉಸಿರಾಡುತ್ತಿದ್ದ ಶ್ರೀ ಶಿವಕುಮಾರ ಸ್ವಾಮೀಜಿ, ಸಮಾಜ ಸೇವೆಗೆ ಬದುಕನ್ನೇ ಮುಡಿಪಾಗಿಟ್ಟರು. ನಮ್ಮ ನಡುವೆ ಇದ್ದು ಬದುಕಿನ ಮಾರ್ಗದರ್ಶನ ನೀಡಿ ಹೋಗಿರುವ ದಾರ್ಶನಿಕ ಚೇತನ ಶ್ರೀಗಳನ್ನು ಸ್ಮರಿಸುವ ಕಾರ್ಯಕ್ರಮ ಯಾರಿಂದಲೇ ನಡೆದರೂ ಅದು ಸಾರ್ವಜನಿಕ ಮಹತ್ವ ಪಡೆದುಕೊಳ್ಳುತ್ತದೆ ಎಂದು ಅಭಿಪ್ರಾಯಿಸಿದರು.

ಶಿವಕುಮಾರ ಶ್ರೀಗಳ ಪುತ್ಥಳಿ ಭವ್ಯ ಮೆರವಣಿಗೆ




ಗುರುವಂದನಾ ಕಾರ್ಯಕ್ರಮದ ಮುನ್ನ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರ ಪುತ್ಥಳಿ ಮೆರವಣಿಗೆ ವೈಭವದಿಂದ ನೆರವೇರಿತು. ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಹಾಗೂ ವಸತಿ ಸಚಿವ ವಿ.ಸೋಮಣ್ಣ, ಕುವೆಂಪುನಗರದ ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತದ ಬಳಿ ಮೆರವಣಿಗೆಗೆ ಚಾಲನೆ ನೀಡಿದರು.

ಶಿವಕುಮಾರ ಶ್ರೀಗಳು ಬದುಕಿನುದ್ದಕ್ಕೂ ಶಾಂತಿ, ಸೌಹಾರ್ದತೆಗೆ ಶ್ರಮಿಸಿದರು. ಅವರ ಚಿಂತನೆ ಸಂದೇಶಗಳು ಒಂದು ಧರ್ಮ, ಸಮುದಾಯಕ್ಕೆ ಸೀಮಿತವಾಗದೆ ಸಮಸ್ತ ಮಾನವ ಕುಲಕ್ಕೆ ಅನ್ವಯವಾಗುತ್ತವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಸಿ.ಎಸ್. ನಿರಂಜನ್‌ಕುಮಾರ್, ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್.ಮಂಜುನಾಥ್ ಸ್ವಾಮಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಡಾ.ಡಿ.ಬಿ.ನಟೇಶ್, ತಹಸೀಲ್ದಾರ್ ಬಿ.ಎನ್.ಗಿರೀಶ್, ನಗರ ಪಾಲಿಕೆ ಸದಸ್ಯೆ ನಿರ್ಮಲಾ ಹರೀಶ್, ಮಾಜಿ ಸದಸ್ಯರಾದ ಕೆ.ವಿ.ಮಲ್ಲೇಶ್, ಜೆ.ಎಸ್. ಜಗದೀಶ್, ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಮಿತಿ ಸದಸ್ಯ ವಸಂತ್ ಕುಮಾರ್, ವೀರ ವನಿತೆ ರಾಣಿ ಚೆನ್ನಮ್ಮ ಸ್ವಯಂ ಸೇವಾ ಸಂಘದ ಅಧ್ಯಕ್ಷ ಎಲ್.ವಿ. ಲೋಕೇಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ಎ.ಪಿ.ವಿರೂಪಾಕ್ಷ ಕಾನ್ಯ ಶಿವಮೂರ್ತಿ, ಡಾ.ಲೋಕೇಶಪ್ಪ, ಹೆಚ್.ಜಿ.ಪರಶಿವಪ್ಪ, ಎಂ.ಶಿವಣ್ಣ, ಕೆ.ವಿ.ನಾಗರಾಜು, ನಂದೀಶ್ ಬೆಳ್ಳಯ್ಯ, ದೇವರಾಜಪ್ಪ, ಚನ್ನಬಸವ, ಶಾರದಾ ಶಿವಲಿಂಗಸ್ವಾಮಿ, ವಿಮಲಾ ಮೂರ್ತಿ, ಬಿ.ಬಸವರಾಜು, ಎಂ.ನಾಗಭೂಷಣ್ ಮತ್ತಿತರ ಮುಖಂಡರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಸಂಸ್ಕೃತ ವಿದ್ವಾಂಸ ಹೆಚ್.ವಿ.ನಾಗರಾಜರಾವ್ ರಚಿತ ಕೃತಿಗಳು ಸುತ್ತೂರು ಶ್ರೀಗಳಿಂದ ಬಿಡುಗಡೆ



ಮೈಸೂರು, ಮೇ 2(ಎಂಕೆ)– ಸಂಸ್ಕೃತ ವಿದ್ವಾಂಸ ಹೆಚ್.ವಿ.ನಾಗರಾಜರಾವ್ ರಚಿತ 'ಶತಾಲಂಕಾರಕೃಷ್ಣಶತಕ ಮತ್ತು ಶಾರ್ದೂಲ ವಿಕ್ರೀಡಿತಶತಕ ಸ್ತೋತ್ರ' ಹಾಗೂ ಲೇಖಕಿ ಡಿ.ಶೀಲಾ ಕುಮಾರಿ ಅವರ 'ಐದು ನಾಟಕಗಳು' ಕೃತಿಗಳನ್ನು ಸೋಮವಾರ ಲೋಕಾರ್ಪಣೆಗೊಳಿಸಲಾಯಿತು.

ಮೈಸೂರಿನ ಹೊರವರ್ತುಲ ರಸ್ತೆಯಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮತ್ತು ಇತರೆ ಬ್ಯಾಂಕ್ ನೌಕರರ ಕ್ಷೇಮಾಭಿವೃದ್ಧಿ ಸಂಘದ ಬಡಾವಣೆಯಲ್ಲಿ ಚಾರು ಸಾಂಸ್ಕೃತಿಕ ಪ್ರತಿಷ್ಠಾನದ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಕೃತಿಗಳನ್ನು ಬಿಡುಗಡೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ಅಕ್ಷಯ ತೃತೀಯದಂದು ನಮ್ಮಲ್ಲಿನ ಚಿನ್ನ–ಬೆಳ್ಳಿ ಅಕ್ಷಯವಾಗುವುದಕ್ಕೂ ಮುಖ್ಯವಾಗಿ ಜ್ಞಾನ, ಸಂಸ್ಕೃತಿ ಅಕ್ಷಯವಾಗಬೇಕು. ಭಾರತೀಯ ಕಲೆ–ಸಂಸ್ಕೃತಿಯನ್ನು ಬೆಳೆಸುವ ನಿಟ್ಟಿನಲ್ಲಿ ಚಾರು ಸಾಂಸ್ಕೃತಿಕ ಪ್ರತಿಷ್ಠಾನ ಕೆಲಸ ಮಾಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ ಕೆಟ್ಟಗುಣವುಳ್ಳವರಿಂದಾಗಿ ಪ್ರಪಂಚದಲ್ಲಿ ರಷ್ಯಾ–ಉಕ್ರೇನ್ ನಡುವೆ ನಡೆಯುತ್ತಿರುವಂತಹ ಯುದ್ಧಗಳು ನಡೆಯುತ್ತವೆ. ನಮ್ಮ ಹಾಗೂ ನಮ್ಮವರ ನಡುವೆ ಮಾನವೀಯ ಸಂಬಂಧಗಳು ಗಟ್ಟಿಯಾಗಬೇಕು ಎಂದು ಹೇಳಿದರು.

ಕೃತಿ ಕುರಿತು ಕಾಲೇಜು ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಪ್ರೊ.ಟಿ.ಎನ್.ಪ್ರಭಾಕರ ಮಾತನಾಡಿ, ರಾಷ್ಟ್ರಮಟ್ಟದಲ್ಲಿ ಖ್ಯಾತರಾದ ವಿದ್ವಾಂಸ ಹೆಚ್.ವಿ.ನಾಗರಾಜರಾವ್ ಅವರು ಸಂಸ್ಕೃತ ಶ್ಲೋಕಗಳನ್ನು ಕನ್ನಡದಲ್ಲಿ ವ್ಯಾಖ್ಯಾನಿಸುವ ಮೂಲಕ ಎಲ್ಲರೂ ಓದಿ ಅರ್ಥಮಾಡಿಕೊಳ್ಳುವಂತೆ ಕೃತಿ ರಚನೆ ಮಾಡಿದ್ದಾರೆ. ಸದಾ ಬರೆಯುವುದೇ ಕವಿಗಳ ದಿನಚರಿಯಾಗಿರುತ್ತದೆ. ಸತ್ವದ ಸಾಹಿತ್ಯವನ್ನು ಜನರಿಗೆ ನೀಡುವುದು ಅವರ ಜವಾಬ್ದಾರಿಯಾಗಿರುತ್ತದೆ ಎಂದು ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತಕುಮಾರ್ ಮಾತನಾಡಿ, 'ಐದು ನಾಟಕಗಳು' ಕೃತಿಯಲ್ಲಿ ಮಹಾಭಾರತದಿಂದ ಎರಡು ಹಾಗೂ ಇನ್ನುಳಿದ ಮೂರು ನಾಟಕಗಳು ಪ್ರಸ್ತುತ ವಿದ್ಯಮಾನಗಳನ್ನು ಒಳಗೊಂಡಿದೆ. ವರ್ತಮಾನದ ಸಂಗತಿಗಳನ್ನು ಚರ್ಚಿಸಿದ್ದು, ಓದುವುದಕ್ಕೆ ಪ್ರೇರಣೆ ನೀಡುತ್ತವೆ. ಯುದ್ಧದಲ್ಲಿ ಗೆದ್ದವರು–ಸೋತವರು ಬದುಕಿನಲ್ಲಿ ಸೋಲುತ್ತಾರೆ ಎಂಬುದನ್ನು ತಿಳಿಸುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ ಎಂದು ತಿಳಿಸಿದರು.

ಬಳಿಕ ಹಿರಿಯ ಸಂಗೀತ ನಿರ್ದೇಶಕ ಶ್ರೀನಿವಾಸ್ ಭಟ್(ಚೀನಿ) ನೇತೃತ್ವದಲ್ಲಿ ರಂಗಗೀತೆ ಕಾರ್ಯಕ್ರಮ ನಡೆಯಿತು. ಚಾಮರಾಜನಗರ ದೀನಬಂಧು ಟ್ರಸ್ಟ್ ಸಂಸ್ಥಾಪಕ ಪ್ರೊ.ಜಿ.ಎಸ್.ಜಯದೇವ್, ಲೇಖಕಿ ಡಿ.ಶೀಲಾ ಕುಮಾರಿ, ಚಾರು ಸಾಂಸ್ಕೃತಿಕ ಪ್ರತಿಷ್ಠಾನದ ಟ್ರಸ್ಟಿ ಡಾ.ಎ.ಬಿ.ನಂಜಪ್ಪ, ರೂಪಶ್ರೀ, ಲಕ್ಷ್ಮಿ ಕಾರಂತ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ರಂಜಾನ್

ಮೈಸೂರು, ಮೇ 2(ಎಂಕೆ)– ಕೊರೊನಾ ಹಿನ್ನೆಲೆ ಕಳೆದೆರಡು ವರ್ಷದ ಬಳಿಕ ಮೈಸೂರಿನಲ್ಲಿ ಈದ್ ಉಲ್ ಫಿತ್ರ್ (ರಂಜಾನ್) ಆಚರಣೆ ಸಂಭ್ರಮ ಕಳೆಗಟ್ಟಿದೆ.

ಭಾನುವಾರ ಚಂದ್ರ ದರ್ಶನವಾಗದ ಹಿನ್ನೆಲೆ ನಾಳೆ(ಮೇ 3) ರಂಜಾನ್ ಆಚರಣೆಗೆ ಮೂನ್ ಕಮಿಟಿ ನಿರ್ಧರಿಸಿದ್ದು, ಬೆಳಿಗ್ಗೆ 10.30ಕ್ಕೆ ತಿಲಕ್‌ನಗರದ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯಲಿದೆ.

ಎರಡು ವರ್ಷದ ಬಳಿಕ ಸಾಮೂಹಿಕ ಪ್ರಾರ್ಥನೆ

ಕೊರೊನಾ ಸೋಂಕು ಹೆಚ್ಚಳದಿಂದಾಗಿ ರಂಜಾನ್ ಸಾಮೂಹಿಕ ಪ್ರಾರ್ಥನೆಗೆ ಕಳೆದು 2 ವರ್ಷ ಅವಕಾಶ ನೀಡಿರಲಿಲ್ಲ. ಬದಲಿಗೆ ತಮ್ಮ ತಮ್ಮ ಮನೆಯಲ್ಲಿಯೇ ಮುಸ್ಲಿಂ ಭಾಂದವರು ಪರಸ್ಪರ ಶುಭಾಷಯ ಕೋರುವ ಮೂಲಕ ಹಬ್ಬ ಆಚರಿಸುವಂತೆ ಸೂಚಿಸಲಾಗಿತ್ತು. ಸದ್ಯ ಕೊರೊನಾ ಸೋಂಕು ಕಡಿಮೆಯಾಗಿದ್ದು, ರಂಜಾನ್ ಸಡಗರ ಇಮ್ಮಡಿಗೊಂಡಿದೆ.

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಸುಶೀಲ
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ
ದುಃಖತಪ್ತರು:
ಕುಟುಂಬವರ್ಗದವರು ಶ್ರೀರಾಂಪುರ ಮೈಸೂರು.

8ನೇ ವರ್ಷದ ಸವಿನೆನಪು



ಎಂ.ಬಿ.ಆನಂದಕುಮಾರ್
ಎಸ್.ಬಿ.ಎಂ. (ನೌಕರ)
ನೀನು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದರೂ ಸದಾ ನಿಮ್ಮನಪಿನಲ್ಲಿರುವ
ತಂದೆ, ತಾಯಿ ಮತ್ತು ಕುಟುಂಬವರ್ಗದರು

ಚಿರಸ್ಮರಣೆ



ಪ್ರೀತಿಯ ಮಗನೆ ನೀನು ನಮ್ಮನ್ನು ಅಗಲಿ ಇಂದಿಗೆ 16 ವರ್ಷಗಳಾಯಿತು ಭಗವಂತನು ನಿನ್ನ ಆತ್ಮಕ್ಕೆ ಶಾಂತಿಯನ್ನು ಕರುಣಿಸಲೆಂದು ಹಾರೈಸುತ್ತಾ ಸದಾ ನಿನ್ನ ನೆನಪಿನಲ್ಲಿ ಇರುವ
ದುಃಖತಪ್ತರು: H.R.ನಂಜಪ್ಪ, ತಾಯಿ ಶ್ರೀಮತಿ ಸುಶೀಲಮಣಿ, ತಂಗಿ ಜಯಲಕ್ಷ್ಮಿ ಕುಮಾರಿ, ಬಾವ ಮಲ್ಲಿಕಾರ್ಜುನ, ತಂಗಿ ಮಗಳು ಗಾನವಿ, ತಂಗಿ ಮಗ ಚಿರಾಗ್ ಹಾಗೂ ಮಾವಂದಿರು, ಅಜ್ಜಿಯಂದಿರು, ತಾತಯಿರು.
ಲೋಕೇಶ್ ನಂಜಪ್ಪ
ಜನನ: 13.06.1977
ಮರಣ: 03.05.2006

3ನೇ ವರ್ಷದ ಚಿರಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ಇಂತಿ ದುಃಖತಪ್ತರು
ಪತ್ನಿ: ಶ್ರೀಮತಿ ದೇವೀರಮ್ಮ ಮತ್ತು ಮಗ – ಸೊಸೆ, ಮೊಮ್ಮಕ್ಕಳು – ಎಂ. ರಾಜೇಶ್ವರಿ, ಎಂ. ದಿವ್ಯಾ ಹಾಗೂ ಬಂಧುಮಿತ್ರರು
ಬಿ.ಪಿ. ಬೀರೇಗೌಡರು

1ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 1 ವರ್ಷವಾದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತ: ಪತ್ನಿ, ಮಕ್ಕಳು, ಅಳಿಯಂದಿರು ಹಾಗೂ ಮೊಮ್ಮಕ್ಕಳು
ಬಿ.ಎಸ್. ನಾಗರಾಜು
ಬಸವಾಪುರ

1ನೇ ವರ್ಷದ ಪುಣ್ಯಸ್ಮರಣೆ




ದಿನಾಂಕ 4.5.2022
ಸ್ಥಳ: ಕೊಡಿಪುರಂ, ತಾಳವಾಡಿ ಫಿರ್ಕಾ ಸತ್ಯಮಂಗಲ ತಾ|| ತಮಿಳುನಾಡು. ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು:
ಹೆಚ್.ಎಸ್. ಪ್ರೇಮನಾಥ, ಶ್ರೀಮತಿ ಪ್ರೇಮ, ನಿವೃತ್ತ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ. ಡಿ.ಎಸ್. ಶಿವರುದ್ರಸ್ವಾಮಿ ಶ್ರೀ ಆನಂದ ಶ್ರೀಮತಿ ಮಂಜುಳ ಶ್ರೀ ಕೃಷ್ಣಾಮೂರ್ತಿ ಪ್ರಮೀಳಾ ಶ್ರೀ ಶಿವಮ್ಮ ಚಿಕ್ಕೀರಪ್ಪ ಶ್ರೀಮತಿ ರಾಜಮ್ಮ, ಶ್ರೀ ಶಿವಣ್ಣ ಎನ್.
ಶ್ರೀಮತಿ ಪುಟ್ಟಮ್ಮ ಲಿಂಗಯ್ಯ

1ನೇ ವರ್ಷದ ಸವಿನೆನಪು



ನಿಮ್ಮ ಅಗಲಿಕೆ ನಮ್ಮನ್ನು ಬಾಧಿಸುತ್ತಿದೆ. ನಿಮ್ಮ ನಡೆ, ನುಡಿ, ಆದರ್ಶ ನಮಗೆ ದಾರಿದೀಪವಾಗಿದೆ. ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ,
ದುಃಖತಪ್ತರು:
ಶ್ರೀಮತಿ ರಮ್ಯಾ, ಮಗಳಾದ ಗಾನವಿ ಮತ್ತು ಬಾಮೈದ ರವಿ ಹಾಗೂ ಕುಟುಂಬವರ್ಗದವರು.
ನಂದೀಶ್



ಸಾರ್ವಜನಿಕ ಪ್ರಕಟಣೆ

ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ಕುಂಬಾರಕೊಪ್ಪಲ್, ಹಳೇ ಬಡಾವಣೆ, ಹೊಸ ಬೀದಿ, 95/1 ನೇ ನಂಬರು ಪೂರ್ವ ಪಶ್ಚಿಮ 50 ಐವತ್ತು ಅಡಿ, ದಕ್ಷಿಣೋತ್ತರ 60 ಅರವತ್ತು ಅಡಿ ನಿವೇಶನ ಶ್ರೀ ಕೆ.ಎಲ್. ಲೋಕೇಶ್ ರವರು ಮಾರಾಟ ಮಾಡಲು ಇಚ್ಛೆಪಟ್ಟಿರುತ್ತಾರೆ.

ಸದರಿ ಸ್ವತ್ತಿನ ಮೂಲ ದಾಖಲೆ ಪತ್ರಗಳಾದ ಪುಟ್ಟಲಕ್ಷ್ಮಮ್ಮ ಹೆಸರಿನ ಮಂಜೂರಾತಿ ಪತ್ರ, ಸ್ವಾಧೀನಪತ್ರ, ಖಾತಾ ಎಂಡಾರ್ಸ್‌ಮೆಂಟ್, ರಿಜಿಸ್ಟರ್ಡ್ ಟೈಟಲ್‌ಡೀಡ್ ಅಸಲು ದಾಖಲೆಗಳು ಕಳೆದುಹೋಗಿರುತ್ತದೆ. ಸದರಿ ಅಸಲು ಪತ್ರ ಬ್ಯಾಂಕಿನಲ್ಲಿ ಅಥವಾ ಖಾಸಗಿ ವ್ಯಕ್ತಿಗಳಲ್ಲಿ ಒತ್ತೆ ಇಟ್ಟು ಸಾಲ ಪಡೆದಿರುವುದಿಲ್ಲ ಈ ಸ್ವತ್ತು ಮೈಸೂರು ಸಿಟಿ, ಅಶೋಕ ರಸ್ತೆ, 210ನೇ ನಂಬರು ಮನೆಯಲ್ಲಿರುವ (1) ಶ್ರೀ ಅನಿಲ್ ಟಿ. ಸಿಂಘ್ವಿ ಮತ್ತು ಮೈಸೂರು ಸಿಟಿ, ಚಿಕ್ಕವಕ್ಕಲಗೇರಿ, 1758ನೇ ನಂಬರು ಮನೆಯಲ್ಲಿರುವ (2) ಶ್ರೀಮತಿ ನಾಗಮ್ಮ ರವರು ಇಂದಿನ ಮಾರುಕಟ್ಟೆ ಬೆಲೆಯಲ್ಲಿ ಕ್ರಯಕ್ಕೆ ಪಡೆಯುತ್ತಿದ್ದಾರೆ. ಈ ಆಸ್ತಿಗೆ ಬೇರೆ ಹಕ್ಕುದಾರರು ಯಾರಾದರೂ ಇದ್ದಲ್ಲಿ 7 ದಿನಗಳೊಳಗಾಗಿ ದಾಖಲೆ ಸಹಿತ ಈ ಕೆಳಕಂಡ ವಿಳಾಸಕ್ಕೆ ಲಿಖಿತ ರೂಪದಲ್ಲಿ ಖುದ್ದಾಗಿ ತಕರಾರು ಸಲ್ಲಿಸುವುದು. ನಂತರ ಬಂದ ಅರ್ಜಿಗಳಿಗೆ ಮಾನ್ಯತೆ ಇರುವುದಿಲ್ಲ.

ಸಹಿ/– H.S. Kullappa, Advocate
KAR-3387/04
#1400 / 1401, 1st Floor, N.T. Street,
V.V. Road, K.R. Mohalla, Mysore
Mob: 9902442023

ಮೈಸೂರು
ದಿನಾಂಕ: 18.3.22

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)
(ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಬಿನಿ ನಾಲೆಗಳ ವಿಭಾಗ, ನಂಜನಗೂಡು, ಮೈಸೂರು ಜಿಲ್ಲೆ
ದೂರವಾಣಿ / ಫ್ಯಾಕ್ಸ್ ಸಂಖ್ಯೆ 08221–226261 ; email: kcdngd@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 02/2022–23 ದಿನಾಂಕ: 29.04.2022


ರೂ. 25.00 ಹಾಗೂ ರೂ. 35.00 ಲಕ್ಷದ, ಎರಡು ಕಾಮಗಾರಿಗಳಿಗೆ (ನಾಲೆ ಹಾಗೂ ಪಿಕಪ್ ಅಭಿವೃದ್ಧಿ ಹಾಗೂ ಗೇಟ್‌ಗಳನ್ನು ಅಳವಡಿಸುವ) ಐಟಂವಾರು ಟೆಂಡರ್ ಅನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಕಾವೇರಿ ನೀರಾವರಿ ನಿಗಮ ನಿಯಮಿತದಲ್ಲಿ ಕಡ್ಡಾಯವಾಗಿ ಹೆಸರು ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಇ.ಎಂ.ಡಿ. ಮೊತ್ತ ಹಾಗೂ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಟೆಂಡರ್ ಅನ್ನು ತೆರೆಯುವ ದಿನಾಂಕ ಹಾಗೂ ಇತರೆ ವಿವರಗಳಲ್ಲಿ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ: www.eproc.karnataka.gov.in ರಲ್ಲಿ ಪಡೆಯಬಹುದು. ಆರ್ಥಿಕ ಬಿಡ್ ಅನ್ನು ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕಬಿನಿ ನಾಲೆಗಳ ವಿಭಾಗ, ನಂಜನಗೂಡು.







ಯುವಕರಿಗೆ ಡಾ.ಅಂಬೇಡ್ಕರ್ ಅರಿವು ಅಗತ್ಯ



ಪಾಂಡವಪುರ, ಮೇ 2– ಯುವಕರು ಡಾ.ಬಿ.ಆರ್.ಅಂಬೇಡ್ಕರ್ ಅವರ ಅರಿವು ಮೂಡಿಸಿಕೊಳ್ಳುವ ಅಗತ್ಯವಿದೆ ಎಂದು ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗ ಮೋಹನ್ ದಾಸ್ ಹೇಳಿದರು.

ಪಟ್ಟಣದ ಟಿಎಪಿಸಿಎಂಎಸ್ ಸಭಾಂಗಣ ದಲ್ಲಿ ದಸಂಸ ಒಕ್ಕೂಟ ಏರ್ಪಡಿಸಿದ್ದ ಅಂಬೇಡ್ಕರ್ ಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ರಾಷ್ಟ್ರದಲ್ಲಿ ಕೋಮುವಾದ, ಭ್ರಷ್ಟಾಚಾರ, ನಿರುದ್ಯೋಗ, ಸ್ವಜನ ಪಕ್ಷಪಾತ ಹೆಚ್ಚಾಗಿದೆ. ದಲಿತರು, ಅಲ್ಪಸಂಖ್ಯಾತರು ಹಾಗೂ ತಳ ಸಮುದಾಯ ತೀವ್ರ ಸಂಕಷ್ಟದಲ್ಲಿ ಸಿಲುಕಿದೆ. ಇಂತಹ ಸವಾಲುಗಳನ್ನು ಎದುರಿಸಲು ನಾವು ಒಗ್ಗೂಡ ಬೇಕಿದೆ ಎಂದರು.

ಭಾರತದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಉನ್ನತಿಗೆ ತಮ್ಮದೇ ಆದ ಕೊಡುಗೆ ನೀಡಿರುವ ಡಾ.ಅಂಬೇಡ್ಕರ್ ಕೇವಲ ಒಂದು ಸಮುದಾಯದ ನಾಯಕರಲ್ಲ. ಅವರು 140 ಕೋಟಿ ಭಾರತೀಯರ ನಾಯಕರು. ಮಹಿಳೆಯರ ಸಬಲೀಕರಣಕ್ಕೆ ಶ್ರಮಿಸಿದ ಅವರು, ಕಾರ್ಮಿಕರಿಗೆ ಹಲವಾರು ಯೋಜನೆಗಳನ್ನು ನೀಡಿದ ಮಹಾನ್ ಮಾನವತಾವಾದಿ ಎಂದರು.

ದಸಂಸ ರಾಜ್ಯ ಸಂಚಾಲಕ ಕೆರೆಗೋಡು ಗುರುಪ್ರಸಾದ್ ಮಾತನಾಡಿ, ಅಂಬೇಡ್ಕರ್ ಹಬ್ಬ ಎಂದರೆ ಅಂಬೇಡ್ಕರ್ ವಿಚಾರಧಾರೆಗಳನ್ನು ಅರ್ಥೈಸಿಕೊಂಡು ಅನುಕರಣೆ ಮಾಡಿಕೊಳ್ಳೋದು ಅಂಬೇಡ್ಕರ್ ಹಬ್ಬ ಎಂದರು.

ಅದ್ದೂರಿ ಮೆರವಣಿಗೆ : ಅಂಬೇಡ್ಕರ್ ಹಬ್ಬದ ಪ್ರಯುಕ್ತ ಪಟ್ಟಣದಲ್ಲಿ ಭವ್ಯವಾದ ಮೆರವಣಿಗೆ ಮೂಲಕ ನೂರಾರು ಯುವಕರು ವೇದಿಕೆಗೆ ಆಗಮಿಸಿದರು.

ಅಂಬೇಡ್ಕರ್ ಆಶಯ ಗೀತೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಗಣ್ಯರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು. ದಸಂಸ ರಾಜ್ಯ ಮುಖಂಡರಾದ ಮಾವಳ್ಳಿ ಶಂಕರ್, ಡಿವೈಎಸ್‌ಪಿ ಸಂದೇಶ್ ಕುಮಾರ್, ದಸಂಸ ರಾಜ್ಯ ಸಂಘಟನಾ ಸಂಚಾಲಕ ಎನ್.ವೆಂಕಟೇಶ್, ದೊಡ್ಡ ಮಸೀದಿ ಅಧ್ಯಕ್ಷ ಮೊಹಮ್ಮದ್ ಹನೀಫ್, ಎಸ್‌ಎಫ್‌ಐ ಯಶವಂತ್, ಹಾರೋಹಳ್ಳಿ ಪ್ರಕಾಶ್, ಸೋಮಶೇಖರ್, ಬ್ಯಾಡರಹಳ್ಳಿ ಪ್ರಕಾಶ್, ವಿಶ್ವನಾಥ್, ಗೋವಿಂದರಾಜು, ಕಣಿವೆ ಯೋಗೇಶ್, ರಾಜೇಂದ್ರಸಿಂಗ್ ಬಾಬು, ಬೊಮ್ಮರಾಜು, ಜಿ.ಬಿ.ಸುರೇಶ್, ಎಸ್.ಟಿ.ದೊಡ್ಡವೆಂಕಟಯ್ಯ, ಲೋಕರಕ್ಷಕ, ಆನುವಾಳು ಸುರೇಶ್ ಸೇರಿದಂತೆ ಹಲವರು ಇದ್ದರು.

ನಾಳೆ ರಾಮಾನುಜಾಚಾರ್ಯರ ಮಹಾರಥೋತ್ಸವ



ಮೇಲುಕೋಟೆ,ಮೇ 2– ರಾಮಾನುಜಾಚಾರ್ಯರ 1005ನೇ ಜಯಂತ್ಯುತ್ಸವದ ಅಂಗವಾಗಿ ಮೇ 4ರ ಬುಧವಾರ ಆಚಾರ್ಯರಿಗೆ ಮಹಾರಥೋತ್ಸವ ನಡೆಯಲಿದೆ.

ತಿರುಮಲ ತಿರುಪತಿ ದೇವಾಲಯದ ಪೆರಿಯ ಜೀಯರ್ ಚೆಲುವನಾರಾಯಣ ಸ್ವಾಮಿಗೆ ಸಮರ್ಪಿಸಿರುವ ಬೃಹತ್ ರಥದಲ್ಲಿ ರಾಮಾನುಜಾ ಚಾರ್ಯರ ರಥೋತ್ಸವ ನಡೆಯಲಿದ್ದು, ತಮಿಳುನಾಡು, ಆಂಧ್ರಪ್ರದೇಶ ಹಾಗೂ ನಾಡಿನ ವಿವಿಧ ಭಾಗಗಳಿಂದ ಭಕ್ತರು ಆಗಮಿಸಿದ್ದಾರೆ.

ರಥೋತ್ಸವದ ನಿಮಿತ್ತ ದೇವಾಲಯದ ಪೂಜಾಕೈಂಕರ್ಯಗಳು ಬೆಳಗಿನ 5 ಗಂಟೆಗೆ ಆರಂಭವಾಗಲಿದ್ದು, 6–30 ರ ವೇಳೆಗೆ ಯಾತ್ರಾದಾನ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಚೆಲ್ವತಿರುನಾರಾಯಣ ಸ್ವಾಮಿಯ ಮಾಲೆ ಮರ್ಯಾದೆಯ ನಂತರ ಆಚಾರ್ಯ ರಾಮಾನುಜರ ಉತ್ಸವ ನಡೆದ ನಂತರ ಮೂರು ಸಲ ರಥಮಂಟಪ ಪ್ರದಕ್ಷಿಣೆ, ಮುಹೂರ್ತ ಪಠಣದ ನಂತರ ವೇದಘೋಷ, ದಿವ್ಯಪ್ರಬಂಧ ಪಾರಾಯಣ, ಮಂಗಳವಾದ್ಯದೊಂದಿಗೆ ರಥಾರೋಹಣ ನಡೆಯಲಿದೆ ಬೆಳಿಗ್ಗೆ 9 ಗಂಟೆಗೆ ಮಹಾರಥ ಚತುರ್ವೀದಿಗಳಲ್ಲಿ ಚಲಿಸಲಿದ್ದು, ನಂತರ ರಾಮಾನುಜರಿಗೆ ಯದುಗಿರಿ ಯತಿರಾಜಮಠದಲ್ಲಿ ಅಭಿಷೇಕ ನಡೆಯಲಿದೆ. ಸ್ಥಾನಾಚಾರ್ಯ ಶ್ರೀನಿವಾಸನರಸಿಂಹನ್ ಗುರೂಜಿ ಯತಿರಾಜದಾಸರ್ ಗುರುಪೀಠದಿಂದ ಭಿಕ್ಷಾಕೈಂಕರ್ಯ ಸೇವೆ ನಡೆಯಲಿದೆ.

ಮೇ 5ರಂದು ಗುರುವಾರ ರಾಮಾನುಜಾಚಾರ್ಯರ 1005ನೇ ತಿರುನಕ್ಷತ್ರ ಮಹೋತ್ಸವ ನಡೆಯಲಿದ್ದು ಬೆಳಿಗ್ಗೆ 6–30ಕ್ಕೆ ಆಚಾರ್ಯರಿಗೆ ಸಮರಭೂಪಾಲ ವಾಹನೋತ್ಸವ, 9 ರಿಂದ ದ್ವಾದಶಾರಾಧನೆಯೊಂದಿಗೆ ಮಹಾಭಿಷೇಕ, ಯತಿರಾಜರ ಸಿಂಹಾಸನಾರೋಹಣ, ಶಾತ್ತುಮೊರೈ, ಸಂಜೆ ಗಂಧದ ಅಲಂಕಾರದಲ್ಲಿ ಬೆಳ್ಳಿಪಲ್ಲಕ್ಕಿಯ ಉತ್ಸವ, ರಾತ್ರಿ 10 ಗಂಟೆಗೆ ಚೆಲುವನಾರಾಯಣಸ್ವಾಮಿಗೆ ದಶಾವತಾರ ಉತ್ಸವ ನಡೆಯಲಿದೆ.

ಗಾಳಿ–ಮಳೆಗೆ ಧರೆಗುರುಳಿದ ಮರ

ಕೂದಲೆಳೆ ಅಂತರದಲ್ಲಿ ಪಾರಾದ ಬಸ್



ಶ್ರೀರಂಗಪಟ್ಟಣ,ಮೇ 2(ವಿನಯ್ ಕಾರೇಕುರ)–ತಾಲೂಕಿನ ಪಂಪ್‌ಹೌಸ್–ಕೆಆರ್‌ಎಸ್ ರಸ್ತೆ ಹೊಸ ಆನಂದೂರು ಗ್ರಾಮದ ಬಳಿ ಗಾಳಿ ಮಳೆಗೆ ಮರಗಳು ಹಾಗೂ ವಿದ್ಯುತ್ ಕಂಬ ಧರೆಗುರುಳಿದ್ದು ಕೂದಲೆಳೆ ಅಂತರದಲ್ಲಿ ಸಾರಿಗೆ ಬಸ್ ಪಾರಾದ ಘಟನೆ ಶನಿವಾರ ತಡರಾತ್ರಿ ನಡೆದಿದೆ.

ಬಸ್‌ನಲ್ಲಿದ್ದ ಪ್ರಯಾಣಿಕರು ಯಾವುದೇ ಅಪಾಯವಿಲ್ಲದೆ ನಿಟ್ಟುಸಿರು ಬಿಟ್ಟಿದ್ದಾರೆ. ಶನಿವಾರ ಬಾರಿ ಗಾಳಿ ಬೀಸಿ ಕೆಆರ್‌ಎಸ್ ರಸ್ತೆಯಲ್ಲಿನ ಮರಗಳು ವಿದ್ಯುತ್ ಕಂಬ ಬಿದ್ದು, ಜಖಂಗೊಂಡಿವೆ. ಈ ಮಧ್ಯೆ ಮೈಸೂರಿನಿಂದ ಕೆಆರ್‌ಎಸ್ ಮಾರ್ಗವಾಗಿ ಬರುತ್ತಿದ್ದ ಸಾರಿಗೆ ಬಸ್ ಮರ, ವಿದ್ಯುತ್ ಕಂಬಗಳ ನಡುವೆ ಸಿಲುಕಿದೆ. ಅದೃಷ್ಟವಶಾತ್ ಮರ ಬಸ್ ಮುಂಭಾಗ ಹಾಗೂ ಹಿಂಬದಿ ಬಿದ್ದು ಬಸ್‌ಗೆ ಯಾವುದೇ ಹಾನಿಯಾಗದೆ ರೆಂಬೆಗಳ ಮಧ್ಯೆ ಸಿಲುಕಿತ್ತು. ಆ ಸಂದರ್ಭದಲ್ಲಿ ವಿದ್ಯುತ್ ಕಂಬಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದರಿಂದ ಯಾವುದೇ ಅನಾಹುತವಾಗಿಲ್ಲ.

20 ವಿದ್ಯುತ್ ಕಂಬಗಳು ಹಾಗೂ 10 ಕ್ಕೂ ಹೆಚ್ಚು ಮರಗಳು ಧರೆಗುರುಳಿದರಿಂದ ಭಾನುವಾರ ಸಂಜೆವರೆಗೂ ಈ ರಸ್ತೆಯಲ್ಲಿ ಸಂಚಾರ ಸಂಪೂರ್ಣ ಬಂದ್ ಮಾಡಿ, ಅರಣ್ಯ ಇಲಾಖೆ ಮರಗಳನ್ನು ತೆರವುಗೊಳಿಸಿದ ನಂತರ ವಿದ್ಯುತ್ ಕಂಬಗಳ ದುರಸ್ತಿ ಕಾರ್ಯ ನಡೆಯಿತು. ಸಂಚಾರ ಬಂದ್‌ನಿಂದಾಗಿ ಪ್ರವಾಸಿಗರು ಹಾಗೂ ಸ್ಥಳೀಯರಿಗೆ ಕಿರಿಕಿರಿ ಉಂಟಾಯಿತು.

ಪೊಲೀಸರು ಸ್ಥಳಕ್ಕೆ ಆಗಮಿಸಿ, ಕೆಆರ್‌ಎಸ್ ಪಂಪ್‌ಹೌಸ್ ಮಾರ್ಗದಲ್ಲಿ ವಾಹನಗಳ ಸಂಚಾರಕ್ಕೆ ಪರ್ಯಾಯ ಮಾರ್ಗ ಕಲ್ಪಿಸಿದ್ದರು.

ನಾಗಮಂಗಲ ಬಳಿ ಟೊಮೆಟೋ ಬೆಳೆ ನಾಶ

ಹತ್ತು ಮಂದಿ ವಿರುದ್ಧ ದೂರು ದಾಖಲು

ನಾಗಮಂಗಲ, ಮೇ 2– ಜಮೀನು ನಮಗೆ ಸೇರಬೇಕೆಂದು ದಬ್ಬಾಳಿಕೆಯಿಂದ ತೋಟಕ್ಕೆ ನುಗ್ಗಿದ ಕಿಡಿಗೇಡಿಗಳ ಗುಂಪು ಕಟಾವಿಗೆ ಬಂದಿದ್ದ 8 ಲಕ್ಷಕ್ಕೂ ಹೆಚ್ಚು ಮೌಲ್ಯದ ಟೊಮೆಟೋ ಬೆಳೆ ಹಾಗೂ ಹನಿ ನೀರಾವರಿ ಪೈಪ್‌ಗಳನ್ನು ನಾಶಮಾಡಿರುವ ಘಟನೆ ತಾಲೂಕಿನ ಹೊಣಕೆರೆ ಹೋಬಳಿಯ ಹೊನ್ನಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.



ಗ್ರಾಮದ ಹೆಚ್.ಕೆ.ಸ್ವಾಮಿ ಮತ್ತು ಸುಶ್ಮಿತ ಎಂಬ ರೈತ ದಂಪತಿಗೆ ಸೇರಿದ ಜಮೀನಿನಲ್ಲಿ ಕಟಾವಿಗೆ ಬಂದಿದ್ದ ಲಕ್ಷಾಂತರ ಮೌಲ್ಯದ ಟೊಮೆಟೋ ಬೆಳೆ ಮತ್ತು ಹನಿ ನೀರಾವರಿ ಪೈಪ್‌ಗಳು ನಾಶವಾಗಿದ್ದು, ಚಿಣ್ಯ ಗ್ರಾಮದ ಕೃಷ್ಣಯ್ಯನ ಮಗ ಸಿ.ಕೆ.ಶಿವರಾಮು, ಈತನ ಮಗ ನವೀನ, ಸೊಸೆಯಂದಿರಾದ ಶಿಲ್ಪ, ಭವ್ಯ ಸೇರಿದಂತೆ ಹತ್ತು ಮಂದಿ ಈ ಕೃತ್ಯ ಎಸಗಿದ್ದಾರೆಂದು ಸಂಕಷ್ಟಕ್ಕೀಡಾಗಿರುವ ರೈತ ದಂಪತಿ ಆರೋಪಿಸಿದ್ದಾರೆ. ಕಳೆದ ಐದು ವರ್ಷಗಳ ಹಿಂದೆ ತಾಲೂಕಿನ ಖರಡ್ಯ ಗ್ರಾಮದ ಗೋವಿಂದೇಗೌಡ ಪುತ್ರ ನರಸಿಂಹೇಗೌಡ ಎಂಬವರಿಂದ ಕಾನೂನಾತ್ಮಕವಾಗಿ ಶುದ್ಧ ಕ್ರಯಕ್ಕೆ ಖರೀದಿಸಿರುವ ಸೋಮಹಳ್ಳಿ ಸರ್ವೆ ನಂ.18/9ರ 0.25 ಗುಂಟೆ ಜಮೀನು ಸೇರಿದಂತೆ ನಮ್ಮ ಪಿತ್ರಾರ್ಜಿತ 0.20 ಗುಂಟೆ ಜಮೀನಿನಲ್ಲಿ ಟೊಮೆಟೋ ಬೆಳೆ ಬೆಳೆದಿದ್ದೆವು.

ನಮ್ಮ ಏಳ್ಗೆಯನ್ನು ಸಹಿಸದ ಚಿಣ್ಯ ಗ್ರಾಮದ ಕೃಷ್ಣಯ್ಯನ ಮಗ ಸಿ.ಕೆ.ಶಿವರಾಮು ಕುಟುಂಬಸ್ಥರು ಈ ಜಮೀನು ನಮಗೆ ಸೇರಬೇಕೆಂದು ದಬ್ಬಾಳಿಕೆಯಿಂದ ಮಚ್ಚು ದೊಣ್ಣೆಗಳೊಂದಿಗೆ ಗುಂಪು ಕಟ್ಟಿಕೊಂಡು ಬಂದು ನನ್ನ ನಡೆಸಿ ಟೊಮೆಟೋ ಬೆಳೆಯನ್ನು ಸಂಪೂರ್ಣ ನಾಶಪಡಿಸಿದ್ದಾರೆ ಎಂದು ಹೆಚ್.ಕೆ.ಸ್ವಾಮಿ ಪತ್ನಿ ಸುಶ್ಮಿತ ದೂರಿದ್ದಾರೆ.

ಅಲ್ಲದೆ ಗ್ರಾಮದ ಹೊರ ವಲಯದಲ್ಲಿರುವ ಜಮೀನಿನ ಒಂಟಿ ಮನೆಯಲ್ಲಿ ನಮಗೆ ಜೀವಭಯ ಶುರುವಾಗಿದೆ. ಆದ್ದರಿಂದ ಸೂಕ್ತ ರಕ್ಷಣೆ ನೀಡಬೇಕೆಂದು ನಾಗಮಂಗಲ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ.

ರೈತ ಹೆಚ್.ಕೆ.ಸ್ವಾಮಿ, ಪತ್ನಿ ಸುಶ್ಮಿತ ನೀಡಿರುವ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕಾನೂನು ಕ್ರಮವಹಿಸಿದ್ದಾರೆ.

ಜೆಡಿಎಸ್ ಅಭ್ಯರ್ಥಿ ರಾಮು ಗೆಲುವು ಖಚಿತ

ಮದ್ದೂರು,ಮೇ 2–ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಅವರನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸಬೇಕೆಂದು ಶಾಸಕ ಡಿ.ಸಿ. ತಮ್ಮಣ್ಣ ಮನವಿ ಮಾಡಿದರು.



ಮದ್ದೂರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಪದವೀಧರರ, ಸರ್ಕಾರಿ ನೌಕರರ ಹಾಗೂ ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ರಾಮು ಸತತ 4 ಬಾರಿ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಸರ್ಕಾರಿ ನೌಕರರ ಹಾಗೂ ಸಮಸ್ಯೆಗಳ ವಿರುದ್ಧ ನಿರಂತರ ಹೋರಾಟ ಮಾಡುವ ಮೂಲಕ ನ್ಯಾಯ ಕೊಡಿಸಿದ್ದಾರೆ ಎಂದರು.

ರಾಮು ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಗೊಂಡರೆ ಸದನದ ಒಳಗೆ ಹಾಗೂ ಹೊರಗೆ ಹೋರಾಟ ಮಾಡುವ ಮೂಲಕ ಪದವೀಧರರ ಹಾಗೂ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡಲಿದ್ದಾರೆ. ಜೆಡಿಎಸ್ ಅಭ್ಯರ್ಥಿ ಗೆಲುವು ಖಚಿತವಾಗಿದ್ದು, ರಾಮು ಅವರನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸುವ ಮೂಲಕ ಜೆಡಿಎಸ್ ಪಕ್ಷ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಕೈ ಬಲಪಡಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಅಭ್ಯರ್ಥಿ ರಾಮು, ವಿಧಾನಪರಿಷತ್ ಸದಸ್ಯ ಕೆ.ಟಿ. ಶ್ರೀಕಂಠೇಗೌಡ, ಮಾಜಿ ಶಾಸಕಿ ಕಲ್ಪನಾ ಸಿದ್ದರಾಜು, ಚಿಕ್ಕತಿಮ್ಮೇಗೌಡ, ದಾಸೇಗೌಡ, ದೇವರಹಳ್ಳಿ ವೆಂಕಟೇಶ್ ಮುಖಂಡರಾದ ಸುಶೀಲ್ ಕುಮಾರ್, ಕೂಳಗೆರೆ ಶೇಖರ್, ಅರವಿಂದ್, ರವೀಂದ್ರ ಮೂರ್ತಿ ಯೋಗೇಶ್, ಮಹೇಶ್ ಗುಂಡ ಹಾಗೂ ಇತರರು ಇದ್ದರು.

ಸಿಡಿಲು ಬಡಿದು ದನದ ಕೊಟ್ಟಿಗೆಗೆ ಬೆಂಕಿ: ಲಕ್ಷಾಂತರ ರೂ. ನಷ್ಟ

ನಾಗಮಂಗಲ, ಮೇ 2(ಮಹೇಶ)– ಸಿಡಿಲು ಬಡಿದ ಪರಿಣಾಮ ದನದ ಕೊಟ್ಟಿಗೆಗೆ ಬೆಂಕಿ ಬಿದ್ದು, ಪಕ್ಕದಲ್ಲೇ ಇದ್ದ ಕೊಬ್ಬರಿ ದಾಸ್ತಾನು ಮಳಿಗೆಗೂ ವ್ಯಾಪಿಸಿ ಲಕ್ಷಾಂತರ ಮೌಲ್ಯದ ಕೊಬ್ಬರಿ ಬೆಂಕಿಗೆ ಆಹುತಿಯಾದ ಘಟನೆ ತಾಲೂಕಿನ ಬಿಂಡಿಗನವಿಲೆ ಹೋಬಳಿಯ ತಿಟ್ಟನಹೊಸಹಳ್ಳಿ ಗ್ರಾಮದಲ್ಲಿ ನಡೆದಿದೆ.

ಶನಿವಾರ ಸಂಜೆ ಏಳು ಗಂಟೆಯ ಸಮಯದಲ್ಲಿ ಬಿರುಗಾಳಿ ಸಹಿತ ಮಳೆಯಾಗುತ್ತಿದ್ದಂತೆ ಸಿಡಿಲು ಬಡಿದು ಶಿವರಾಮೇಗೌಡ ಎಂಬವರ ಕೊಟ್ಟಿಗೆಗೆ ಬೆಂಕಿ ಬಿದ್ದಿದೆ. ನೋಡು ನೋಡುತ್ತಿದ್ದಂತೆ ಪಕ್ಕದಲ್ಲಿಯೇ ಇದ್ದ ಕೊಬ್ಬರಿ ದಾಸ್ತಾನು ಮಾಡಿದ್ದ ಸ್ಥಳಕ್ಕೂ ಬೆಂಕಿ ತಗುಲಿ ಸುಮಾರು ಐದು ಸಾವಿರಕ್ಕೂ ಹೆಚ್ಚು ಮೌಲ್ಯದ ಕೊಬ್ಬರಿ ಬೆಂಕಿಗಾಹುತಿಯಾಗಿದೆ. ವಿಷಯ ತಿಳಿಯುತ್ತಿದ್ದಂತೆ ನಾಗಮಂಗಲದ ಅಗ್ನಿ ಶಾಮಕ ದಳದ ಸಿಬ್ಬಂದಿ ಎರಡು ಗಂಟೆಗಳ ಕಾರ್ಯಾಚರಣೆ ನಡೆಸಿದರಾದರೂ ಅಷ್ಟೊತ್ತಿಗಾಗಲೇ ಸುಮಾರು ಒಂದೂವರೆ ಲಕ್ಷ ರೂ.ಗಳಿಗೂ ಹೆಚ್ಚು ಮೌಲ್ಯದ ಕೊಬ್ಬರಿ, ಕೊಟ್ಟಿಗೆ ಭಸ್ಮವಾಗಿತ್ತು. ವಿಷಯ ತಿಳಿಯುತ್ತಿದ್ದಂತೆ ಶಾಸಕ ಸುರೇಶ್ ಗೌಡ ಭೇಟಿ ನೀಡಿ ವೈಯಕ್ತಿಕವಾಗಿ ಇಪ್ಪತ್ತು ಸಾವಿರ ರೂಪಾಯಿಗಳ ನೆರವು ನೀಡಿದರು.



ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮೈಸೂರಿನ ಕುವೆಂಪುನಗರದ ಅಂಬೇಡ್ಕರ್ ಉದ್ಯಾನವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕನ್ನಡ ಪುಸ್ತಕ ಪ್ರೇಮಿ ಸೈಯದ್ ಇಸಾಕ್ ಅವರನ್ನು ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಸನ್ಮಾನಿಸಿದರು. ಈ ವೇಳೆ ಎಸ್‌ಎಂ ಕೃಷ್ಣ ಅಭಿಮಾನಿ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಪಾಲಿಕೆ ಸದಸ್ಯರಾದ ಎಂ.ಸಿ.ರಮೇಶ್, ಕೊಪ್ಪಲ್ ಶಿವಕುಮಾರ್, ಮಾಜಿ ಮೇಯರ್ ಬಿ.ಕೆ. ಪ್ರಕಾಶ್, ಮುಖಂಡರಾದ ಆರ್.ಬಸಪ್ಪ, ಪೈ.ಬಸಪ್ಪ, ಟಿ.ರವಿಗೌಡ, ಲಯನ್ ಕೃಷ್ಣೇಗೌಡ, ಉದ್ಯಮಿಗಳಾದ ಸಂಜಯ್ ಶೆಟ್ಟಿ, ಅರುಣ್, ದೇವು, ರಾಕೇಶ್‌ಗೌಡ, ನಾಗರಾಜಪ್ಪ, ಡಿಪೋ ರಾಜಣ್ಣ, ಕಾಳ ಬೋರಪ್ಪ, ರಾಜಣ್ಣ, ಮಾದೇವ್, ಒಕ್ಕಲಿಗರ ಸಂಘದ ನಿರ್ದೇಶಕ ರವಿ, ಡಾ.ಲೋಕೇಶ್, ಹೊಂಬೇಗೌಡ, ಪ್ರೊ.ಪಾಟೀಲ್ ಇನ್ನಿತರರು ಉಪಸ್ಥಿತರಿದ್ದರು.



ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನೂತನ ಅಧ್ಯಕ್ಷ ಸಿ.ರೇವಣ್ಣ ಅವರನ್ನು ಶಾಸಕ ಎಲ್.ನಾಗೇಂದ್ರ ಅಭಿನಂದಿಸಿದರು. ಈ ವೇಳೆ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ಎಸ್.ಸೋಮಣ್ಣ, ಉಪಾಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಹೆಚ್.ಹರೀಶ್‌ಕುಮಾರ್ ಉಪಸ್ಥಿತರಿದ್ದರು.



ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ನೂತನ ಅಧ್ಯಕ್ಷ ಲಿಂಗರಾಜು ಅವರನ್ನು ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ ಸನ್ಮಾನಿಸಿದರು. ಈ ವೇಳೆ ಪಾಲಿಕೆ ಸದಸ್ಯ ಪೈ. ಶ್ರೀನಿವಾಸ್, ಸಂಸ್ಥೆ ಮಾಜಿ ಕಾರ್ಯದರ್ಶಿ ರಾಮಣ್ಣ, ಡೆಲ್ಲಿ ರವಿ, ಜೆ.ಯೋಗೇಶ್, ಒಂಟಿಕೊಪ್ಪಲ್ ಗುರುರಾಜ್, ಮಹದೇಶ್, ಹರೀಶ್ ಇತರರಿದ್ದಾರೆ.



ಮೈಸೂರು ನಗರ ಪಾಲಿಕೆಯಲ್ಲಿ ಸತತ 2ನೇ ಬಾರಿಗೆ ಬಜೆಟ್ ಮಂಡಿಸಿದ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷೆ ಶೋಭಾ ಮೋಹನ್ ಅವರನ್ನು ಮುಖಂಡರಾದ ಕ್ಯಾತಮಾರನಹಳ್ಳಿ ಜೆ.ವೆಂಕಟೇಶ್, ಟೆನ್ನಿಸ್ ಗೋಪಿ, ರಮ್ಮನಹಳ್ಳಿ ಸೋಮಣ್ಣ, ಹಳೇಬೀಡು ಹರೀಶ್ ನಾಯಕ್, ಪಾಲಾಕ್ಷ ಬಿಳಿಕೆರೆ, ಡಾ. ನಂಜುಂಡಸ್ವಾಮಿ ಹರದನಹಳ್ಳಿ ಅಭಿನಂದಿಸಿದರು.

ಸಮ ಸಮಾಜ ನಿರ್ಮಾಣಕ್ಕೆ ಮುಂದಾದ ಬಸವಣ್ಣ

ಶ್ರೀ ಮುರುಘ ರಾಜೇಂದ್ರ ಸ್ವಾಮೀಜಿ ಅಭಿಮತ

ಮೈಸೂರು,ಮೇ 2(ಎಂಟಿವೈ)– ಸ್ವಾತಂತ್ರ್ಯ ಮತ್ತು ಸ್ವಾಭಿಮಾನದ ಸಂಕೇತವಾಗಿರುವ ಬಸವಣ್ಣ ಶೋಷಿತ ಸಮುದಾಯಗಳು ಎದುರಿಸುತ್ತಿದ್ದ ಅಸ್ಪೃಶ್ಯತೆಯನ್ನು ಹೋಗಲಾಡಿಸಿ, ಸಮ ಸಮಾಜ ನಿರ್ಮಾಣಕ್ಕೆ ಮುಂದಾಗಿದ್ದರು ಎಂದು ಚಿತ್ರದುರ್ಗ ಬ್ರಹನ್ಮಠದ ಮುರುಘ ರಾಜೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.



ಮೈಸೂರಿನ ಹೊಸಮಠದ ಆವರಣದಲ್ಲಿ ಜಾಗತಿಕ ಲಿಂಗಾಯತ ಮಹಾ ಸಭಾ, ರಾಷ್ಟ್ರೀಯ ಬಸವ ದಳ, ಬಸವ ಕೇಂದ್ರ, ಶರಣ ಮಂಡಳಿ, ಲಿಂಗಾಯತ ಗೌಡ ಮಹಾಸಭಾ, ಕಬ್ಬು ಬೆಳೆಗಾರರ ಸಂಘ ಹಾಗೂ ಶ್ರೀ ಹೊಸಮಠ ಸಂಯುಕ್ತಾಶ್ರಯದಲ್ಲಿ ಸೋಮವಾರ ನಡೆದ ಶರಣೆ ಅಕ್ಕಮಹದೇವಿ ಹಾಗೂ ಬಸವ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಬ್ರಿಟಿಷರಿಂದ ದೇಶಕ್ಕೆ 1947ರಲ್ಲಿ ಸ್ವಾತಂತ್ರ್ಯ ಬಂದಿದೆ. ಆದರೆ, ಬಸವಣ್ಣನವರು 900 ವರ್ಷಗಳ ಹಿಂದೆಯೇ ದೀನದಲಿತರಿಗೆ ಸ್ವಾತಂತ್ರ್ಯ ದೊರಕಿಸಿಕೊಟ್ಟರು. ಅಸ್ಪೃಶ್ಯತೆ ತಾಂಡವವಾಡುತ್ತಿದ್ದ ಸಂದರ್ಭದಲ್ಲಿ ಸಮಾನತೆಯ ಸಂದೇಶ ರವಾನಿಸಿದರು. ಇದರಿಂದ ಸಮಾಜದಲ್ಲಿ ಸುಧಾರಣೆ ತರುವ ಪ್ರಯತ್ನ ಮಾಡಿ, ಯಶಸ್ಸನ್ನು ಕಂಡಿದ್ದರು. ಬಸವಣ್ಣನವರು ಹಾಕಿಕೊಟ್ಟ ಮಾರ್ಗ ಎಂದೆಂದಿಗೂ ಪ್ರಸ್ತುತ ಎಂದರು.

ಬಸವಣ್ಣನವರು ಸಮಾಜದಲ್ಲಿ ಧರ್ಮ, ತತ್ವ, ಸಿದ್ಧಾಂತ, ಮಾನವೀಯ ಮೌಲ್ಯಗಳನ್ನು ಕಟ್ಟಿಕೊಟ್ಟರು. ದೇಶಕ್ಕೆ ಸಂವಿಧಾನ ಮುಖ್ಯವಾದರೆ, ನಮಗೆ ವಚನಗಳೇ ಸಂವಿಧಾನ. ಅನುಭವ ಮಂಟಪದ ಮೂಲಕ ಶಿವಶರಣರು ನಮ್ಮ ಬದುಕಿಗೆ ಪೂರಕವಾದ ಅತ್ಯುತ್ತಮ ಸಂದೇಶಗಳನ್ನು ನೀಡಿದರು. ಮಹಿಳೆಯರಿಗೆ ಸಮಾನತೆ, ಸ್ವಾತಂತ್ರ್ಯ ಹಾಗೂ ಹಕ್ಕುಗಳನ್ನು ನೀಡುವ ಉದ್ದೇಶದಿಂದ ಮನೆ ಬಿಟ್ಟು ಹೊರ ಬಂದಿದ್ದರು. ಅಡಿಗೆ ಮನೆ ಹಾಗೂ ಹೆರಿಗೆ ಮನೆಗೆ ಸೀಮಿತವಾಗಿದ್ದ ಮಹಿಳೆಯರನ್ನು ಅನುಭವ ಮಂಟಪಕ್ಕೆ ಕರೆ ತಂದರು. ಹೀಗಾಗಿ ಮಹಿಳೆಯರು ಬಸವಣ್ಣವನರನ್ನು ನೆನೆಯಬೇಕು ಎಂದು ಹೇಳಿದರು.

ಚಿಂತನೆ ಹಾಗೂ ಅದರ ಮಂಡನೆ ನಡೆದದ್ದು ಅನುಭವ ಮಂಟಪದಲ್ಲಿ. ಬರೆಯುವ ಪ್ರಶ್ನಿಸುವ ಅವಕಾಶವನ್ನು ಅಂದಿನ ಕಾಲದಲ್ಲಿಯೇ ನೀಡಲಾಗಿತ್ತು. ಸಂವಾದಕ್ಕೆ ಅವಕಾಶವೇ ಇಲ್ಲದಿದ್ದ ದಿನಗಳಲ್ಲಿ ಸಂವಾದ, ವಾದಗಳಿಗೆ ತೆರೆದುಕೊಂಡಿದ್ದು ಅನುಭವ ಮಂಟಪ ಎಂದರು.

ಬಸವಣ್ಣನವರ ಚಿಂತನೆ ವರ್ಷಕ್ಕೆ ಒಂದು ದಿನ ಮಾತ್ರ ಸೀಮಿತಗೊಳಿಸಬಾರದು. ವರ್ಷದ 365 ದಿನವೂ ಅನುಸರಿಸಬೇಕು. ಆಗ ಮಾತ್ರ 21ನೇ ಶತಮಾನದಲ್ಲೂ ಕಾಯಕ ಸಮಾಜ ಕಟ್ಟಲು ಸಾಧ್ಯ ಎಂದರು. ಬಸವೇಶ್ವರರು ಮಾನವ ಸಂಬಂಧ ಬೆಳೆಸಿದರು. ಆದರೆ ಇಂದಿನ ರಾಜಕಾರಣಿಗಳು ಜಾತಿ, ಜಾತಿಗಳಿಗೆ ಮಾತ್ರ ಸೀಮಿತಗೊಳ್ಳುತ್ತಿದ್ದಾರೆ ಎಂದು ವಿಷಾದಿಸಿದರು.

ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕಾಟೂರು ರತ್ನಮ್ಮ, ಮಲ್ಲೇಶ್ ಕಪ್ಪಸೋಗೆ, ಬಿ. ಕೆಂಡಗಣ್ಣಸ್ವಾಮಿ ಧನಗಳ್ಳಿ, ನಾಗರಾಜು ಕಣನೂರು, ಶಿವಕುಮಾರ್ ಜೀಮಾರಹಳ್ಳಿ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ರಾವಂದೂರು ಮುರುಘಾ ಮಠದ ಮೋಕ್ಷಪತಿ ಸ್ವಾಮೀಜಿ, ಹೊಸ ಮಠದ ಚಿದಾನಂದ ಸ್ವಾಮೀಜಿ, ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್.ಮಂಜುನಾಥಸ್ವಾಮಿ, ಚಿಂತಕ ಡಾ. ಜೆ.ಎಸ್.ಪಾಟೀಲ್, ಇನ್ನಿತರರು ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಕಾರ್ಯಕ್ರಮವನ್ನು ಭವಾನಿ ಲೋಕೇಶ್ ನಿರೂಪಿಸಿದರು.

> “ಬಸವ ಜಯಂತಿಗೆ ಉಜ್ವಲ ಪರಂಪರೆಯಿದೆ. ಆದರೆ ಹಲವು ಸಂಸ್ಥೆಗಳು ಬಸವ ಜಯಂತಿ ಆಚರಿಸುವ ವೇಳೆ 500ನೇ ಜಯಂತಿ, 600ನೇ ಜಯಂತಿ ಎಂದು ಆಹ್ವಾನ ಪತ್ರಿಕೆಯಲ್ಲಿ ಪ್ರಕಟಿಸುತ್ತಾರೆ. ಅದು ಸರಿಯಲ್ಲ. ಇದು ಕೃತಿ ಚೌರ್ಯ ಮಾಡಿದಂತೆ. ಜನರಿಗೆ ಸುಳ್ಳು ಹೇಳಿದಂತಾಗುತ್ತದೆ. ಹರ್ಡೇಕರ್ ಮಂಜಪ್ಪ ಅವರು ಬಸವ ಜಯಂತಿ ಆಚರಿಸಲು ಮುಂದಾಗಿ ಈ ವರ್ಷಕ್ಕೆ 110 ವರ್ಷವಾಗಿದೆ. ಇನ್ನು ಮುಂದೆ ಬಸವ ಜಯಂತಿಯನ್ನು ಆಚರಿಸುವಾಗ 110ನೇ ವರ್ಷದ ಜಯಂತಿ ಎಂದು ಹೇಳಬೇಕು. ಆದರೆ ಬಸವ ಧರ್ಮಕ್ಕೆ, ಬಸವ ತತ್ವಕ್ಕೆ, ಶರಣ ಸಂಸ್ಕೃತಿಗೆ 900 ವರ್ಷ ಆಗಿದೆ ಎಂದು ಹೇಳಬಹುದು. ನಾವು ಹೇಳುವುದೇ ಸರಿ ಎಂದು ಭಾವಿಸಬಾರದು. ಮಾಡಿದ ತಪ್ಪನ್ನು ಒಪ್ಪಿಕೊಳ್ಳಬೇಕಾಗುವುದು ನಮ್ಮ ಧರ್ಮ. **–ಮುರುಘ ರಾಜೇಂದ್ರ ಸ್ವಾಮೀಜಿ, ಚಿತ್ರದುರ್ಗ ಬ್ರಹನ್ಮಠ**




ಮೈಸೂರು ತಾಲೂಕಿನ ಹೊಸಕಾಮನಕೊಪ್ಪಲು ಗ್ರಾಮದಲ್ಲಿ ಕನಕ ಸಮುದಾಯ ಭವನ ನಿರ್ಮಾಣಕ್ಕೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಗುದ್ದಲಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ನಾಗವಾಲ ಗ್ರಾಪಂ ಅಧ್ಯಕ್ಷ ಸಿ.ನರೇಂದ್ರ, ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಸದಸ್ಯರಾದ ಭಾಗ್ಯ ರಮೇಶ್, ನಾಗವಾಲ ಮಹೇಶ್, ಸೀಗಳ್ಳಿ ಹೆಚ್.ಜೆ.ಕುಮಾರ್, ಸೋಮಣ್ಣ, ರವಿ, ಜಯರಾಮ್, ಹುಯಿಲಾಳು ಶ್ರೀಧರ್, ಬಸವನಾಯಕ, ಕೃಷ್ಣ ಇನ್ನಿತರರು ಉಪಸ್ಥಿತರಿದ್ದರು.

ಲಲಿತಾದ್ರಿಪುರದಿಂದ ವ್ಯಕ್ತಿ ನಾಪತ್ತೆ

ಮೈಸೂರು,ಮೇ 2–ಮೈಸೂರು ತಾಲೂಕಿನ ಲಲಿತಾದ್ರಿಪುರದ 45 ವರ್ಷದ ಪ್ರಕಾಶ್ ಎಂಬುವವರು ಏ.25ರಂದು ಕಾಣೆಯಾಗಿದ್ದು, ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಎಸ್ಪಿ ಅವರ ದೂ.ಸಂ: 2520040, ಮೈಸೂರು ನಗರ ನಿಸ್ತಂತು ಕೊಠಡಿ ದೂ.ಸಂ: 0821–2444800, ಹಾಗೂ ಮೈಸೂರು ಸೌತ್ ಪೊಲೀಸ್ ಠಾಣೆಯ ದೂ. ಸಂ:0821–2444955 ಸಂಪರ್ಕಿಸಿ ಎಂದು ಮೈಸೂರು ದಕ್ಷಿಣ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆ ಮತ್ತೆ ಹೆಚ್ಚಳ




ನವದೆಹಲಿ: ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ ಮತ್ತೆ ಹೆಚ್ಚಳವಾಗಿದೆ ಮೇ1ರಂದು 19 ಕೆಜಿಯ ವಾಣಿಜ್ಯ ಬಳಕೆಯ ಸಿಲಿಂಡರ್ ಬೆಲೆ 2,355 ರೂ. 50 ಪೈಸೆಗೆ ಏರಿಕೆಯಾಗಿದೆ. ಈ ಹಿಂದೆ 2,253 ರೂ. ಇದ್ದ ಸಿಲಿಂಡರ್ ಬೆಲೆ 102 ರೂ. 50 ಪೈಸೆ ಹೆಚ್ಚಳವಾಗಿದೆ. 5 ಕೆಜಿ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆ ಈಗ 655 ರೂ. ಆಗಿದೆ. ಮನೆ ಬಳಕೆ ಸಿಲಿಂಡರ್ ಬೆಲೆ ಬದಲಾಗಿಲ್ಲ. ಈ ಹಿಂದೆ 2 ಬಾರಿ ಎಲ್‌ಪಿಜಿ ಸಿಲಿಂಡರ್ ಬೆಲೆ ಹೆಚ್ಚಳವಾಗಿತ್ತು.

ಪುಸ್ತಕಗಳನ್ನು ಹೆಚ್ಚಾಗಿ ಓದಿ, ಜ್ಞಾನ ವೃದ್ಧಿಸಿಕೊಳ್ಳಿ

ಎಂಎಲ್‌ಸಿ ಸಿ.ಎನ್.ಮಂಜೇಗೌಡ ಸಲಹೆ

ಮೈಸೂರು, ಮೇ 2– ಪುಸ್ತಕಗಳನ್ನು ಹೆಚ್ಚಾಗಿ ಓದುವುದರೊಂದಿಗೆ ಜ್ಞಾನವನ್ನು ವೃದ್ಧಿಸಿಕೊಳ್ಳಿರಿ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಿಮಾಲಯ ಪ್ರತಿಷ್ಠಾನ ಹಾಗೂ ಕನ್ನಡ ಸಾಹಿತ್ಯ ಕಲಾಕೂಟದ ಸಂಯುಕ್ತಾಶ್ರಯದಲ್ಲಿ ಕಿರಣ್ ಸಿಡ್ಲೇಹಳ್ಳಿಯವರ ‘ನಂಬಿಕೆಯ ಕೂಡ’ ಮತ್ತು ‘ಪೂಜಾರಿಯ ಕಾಟದಲ್ಲಿ ಬಡವಾದ ದೇವರು’ ಕೃತಿಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಮನೆಯಲ್ಲಿ ಬಡತನ ವಿದ್ದರೂ ಕೂಡ ಛಲಬಿಡದೆ ಓದಿದ ಅಂಬೇಡ್ಕರ್ ಭಾರತದ ಸಂವಿಧಾನ ಬರೆದು ಮಹಾನಾಯಕರಾದರು. ಡಾ. ಬಾಬು ಜಗಜೀವನರಾಂ, ಎ.ಪಿ.ಜೆ. ಅಬ್ದುಲ್ ಕಲಾಂ, ನರೇಂದ್ರ ಮೋದಿ, ಹೆಚ್.ಡಿ.ದೇವೇಗೌಡ, ಯಡಿಯೂರಪ್ಪ, ಸಿದ್ದರಾಮಯ್ಯ ನವರು ಸಹ ಬಡತನದಿಂದ ಬಂದು ಪುಸ್ತಕಗಳನ್ನು ಓದುವುದರೊಂದಿಗೆ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಂಡು ಉನ್ನತ ಸ್ಥಾನಕ್ಕೇರಿದರು. ನಮ್ಮಲ್ಲಿರುವ ಜ್ಞಾನವನ್ನು ಬೇರೆಯವರಿಗೆ ಹಂಚಿದರೆ ನಮ್ಮ ಜ್ಞಾನವೂ ಬೆಳೆಯುತ್ತದೆ. ಸಮಾಜದಲ್ಲಿ ಮನುಷ್ಯನ ಜ್ಞಾನ ಬೆಳೆದಂತೆ ತನ್ನನ್ನು ತಾನು ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಆದ್ದರಿಂದ ಜನರು ಟಿವಿ, ಮೊಬೈಲ್‌ಗಳನ್ನು ಬಿಟ್ಟು ಪುಸ್ತಕಗಳನ್ನು ಕೊಂಡು ಓದಿರಿ ಎಂದು ಕರೆ ನೀಡಿದರು. ಸಮಾರಂಭದಲ್ಲಿ ಎಂ.ಚಂದ್ರಶೇಖರ್, ಎಂ.ಮುತ್ತುಸ್ವಾಮಿ, ಡಾ. ಲೀಲಾ ಪ್ರಕಾಶ್, ಎಸ್. ನಟರಾಜ್, ಡಾ.ಎಸ್.ಪಿ.ಯೋಗಣ್ಣ, ಎನ್.ಅನಂತ, ರಾಮ್‌ಪ್ರಸಾದ್, ಕನ್ನಡ ಪ್ರಮೋದ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಿಮಾಲಯ ಪ್ರತಿಷ್ಠಾನ ಹಾಗೂ ಕನ್ನಡ ಸಾಹಿತ್ಯ ಕಲಾಕೂಟದ ಸಂಯುಕ್ತಾಶ್ರಯದಲ್ಲಿ ಕಿರಣ್ ಸಿಡ್ಲೇಹಳ್ಳಿಯವರ ‘ನಂಬಿಕೆಯ ಕೂಡ’ ಮತ್ತು ‘ಪೂಜಾರಿಯ ಕಾಟದಲ್ಲಿ ಬಡವಾದ ದೇವರು’ ಕೃತಿಗಳನ್ನು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಬಿಡುಗಡೆ ಮಾಡಿದರು.

ಚಾಮರಾಜನಗರ ಆಕ್ಸಿಜನ್ ದುರಂತಕ್ಕೆ ವರ್ಷ

● ದುರಂತದಲ್ಲಿ ಮೃತಪಟ್ಟವರು 36 ಮಂದಿ ● ಸರ್ಕಾರದಿಂದ 24 ಕುಟುಂಬಕ್ಕೆ ಅಲ್ಪ ಪರಿಹಾರ ● ತಪ್ಪಿತಸ್ಥರಿಗೆ ಇನ್ನೂ ಆಗದ ಶಿಕ್ಷೆ

ಚಾಮರಾಜನಗರ, ಮೇ 2(ಎಸ್‌ಎಸ್)– ಕೊರೊನಾ 2ನೇ ಅಲೆಯ ಸಂದರ್ಭದಲ್ಲಿ ನಗರದ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ರೋಗಿಗಳು ಮೃತಪಟ್ಟ ಘಟನೆ ನಡೆದು ಸೋಮವಾರಕ್ಕೆ ವರ್ಷ ತುಂಬಿದ್ದು, ಸಂತ್ರಸ್ತರ ಕುಟುಂಬಗಳಿಗೆ ಇದುವರೆಗೂ ನ್ಯಾಯ ದೊರಕಿಲ್ಲ.

ದುರಂತದಲ್ಲಿ ಮೃತಪಟ್ಟವರು 36 ಮಂದಿ. ಆದರೆ, ಸರ್ಕಾರ ಮಾತ್ರ 24 ಮಂದಿಯಷ್ಟೇ ದುರಂತದಿಂದ ಮೃತಪಟ್ಟಿದ್ದು, ಎಂದು ಹೇಳಿ ಆ ಕುಟುಂಬಗಳಿಗೆ ಅಲ್ಪ ಪರಿಹಾರ ನೀಡಿ ಕೈ ತೊಳೆದುಕೊಂಡಿದೆ. ಆದರೆ ಉಳಿದ 12 ಕುಟುಂಬಗಳಿಗೆ ಈವರೆಗೂ ನಯಾ ಪೈಸೆ ಪರಿಹಾರ ಸಿಕ್ಕಿಲ್ಲ. ದುಡಿಯುವ ಕೈ ಕಳೆದುಕೊಂಡ ಕುಟುಂಬಗಳು ಮಾತ್ರ ಸಂಕಷ್ಟಕ್ಕೆ ಸಿಲುಕಿಕೊಂಡಿವೆ.

ಘಟನೆಯ ಕುರಿತು ದೇಶಾದ್ಯಂತ ವ್ಯಾಪಕ ಖಂಡನೆ ವ್ಯಕ್ತವಾಯಿತು. ಇದಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂಬ ಒತ್ತಾಯ ಕೇಳಿಬಂದಿತ್ತು. ಆದರೆ, ದುರಂತಕ್ಕೆ ರಾಜ್ಯ ಸರ್ಕಾರ ಯಾರನ್ನೂ ಹೊಣೆ ಮಾಡಲಿಲ್ಲ. ದುರಂತ ಸಂಬಂಧ ಯಾರ ಮೇಲೂ ಕ್ರಮಕೈಗೊಂಡಿಲ್ಲ. ಪ್ರಕರಣ ಹೈಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿದ್ದು, ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದ ಬೇಸತ್ತಿರುವ ಸಂತ್ರಸ್ತ ಕುಟುಂಬಗಳು ಸರ್ಕಾರಕ್ಕೆ ಹಿಡಿಶಾಪ ಹಾಕುತ್ತಿವೆ.


ಹೈಕೋರ್ಟ್‌ನ ಸೂಚನೆ ನೀಡಿದ ಬಳಿಕ ದುರಂತದಲ್ಲಿ ಮೃತಪಟ್ಟ 24 ಮಂದಿಯ ಕುಟುಂಬಗಳಿಗೆ ತಲಾ 2 ಲಕ್ಷ ಹಾಗೂ ಅವರ ಪೈಕಿ ಆಗಸ್ಟ್ ಎರಡನೇ ವಾರದಲ್ಲಿ 13 ಮಂದಿಯ ಕುಟುಂಬಗಳಿಗೆ ಮಾತ್ರ ಹೆಚ್ಚುವರಿಯಾಗಿ ತಲಾ 3 ಲಕ್ಷವನ್ನು ತಾತ್ಕಾಲಿಕ ಪರಿಹಾರವಾಗಿ ನೀಡಲಾಯಿತು. ದುರಂತದಲ್ಲಿ ಕೋವಿಡ್ ರೋಗಿಗಳು ಮಾತ್ರವಲ್ಲದೇ, ಕೋವಿಡ್ ಲಕ್ಷಣ ಇದ್ದರೂ ಸೋಂಕು ದೃಢಪಡದ ಹಲವು ಮಂದಿ ಮೃತಪಟ್ಟಿದ್ದರು. ಅವರ ಕುಟುಂಬಗಳಿಗೆ ಸರ್ಕಾರ ಪರಿಹಾರ ಘೋಷಿಸಲಿಲ್ಲ. ದುರಂತದಲ್ಲಿ ಮೃತಪಟ್ಟ ಎಲ್ಲಾ 36 ಕುಟುಂಬಗಳಿಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಪ್ರತಿನಿಧಿಗಳು ತಲಾ 1 ಲಕ್ಷ ಪರಿಹಾರ ನೀಡಿದರು.

ರಾಜ್ಯ ಸರ್ಕಾರದಿಂದ ನ್ಯಾ.ಬಿ.ಎ.ಪಾಟೀಲ ಆಯೋಗ ನೇಮಕ

ಘಟನೆ ಬಗ್ಗೆ ನ್ಯಾಯಾಂಗ ತನಿಖೆಗಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ.ಎ.ಪಾಟೀಲ ಅವರ ನೇತೃತ್ವದ ಆಯೋಗವನ್ನು ನೇಮಿಸಿತ್ತು. ಈ ಆಯೋಗ ಮೈಸೂರಿನ ಜಲದರ್ಶಿನಿಯಲ್ಲಿ ವಿಚಾರಣೆ ನಡೆಸಿತ್ತು.

ಅಂದು ಏನಾಯಿತು?: ಘಟನೆ ನಡೆದ ಸಂದರ್ಭದಲ್ಲಿ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ 150 ಕೋವಿಡ್ ಹಾಸಿಗೆಗಳಿದ್ದು, ಇದರಲ್ಲಿ 100 ಹಾಸಿಗೆಗಳು ಆಮ್ಲಜನಕ ಪೂರೈಕೆ ವ್ಯವಸ್ಥೆ ಹೊಂದಿದ್ದವು. ಮೇ 2ರ ಭಾನುವಾರ ರಾತ್ರಿ 10.30ರಲ್ಲಿ ಸಿಲಿಂಡರ್ ಮುಗಿಯುತ್ತಾ ಬರುವ ಮುನ್ಸೂಚನೆ ವೈದ್ಯರಿಗೆ ದೊರಕಿತು. ಇನ್ನೊಂದು ಗಂಟೆಯಲ್ಲಿ ಆಮ್ಲಜನಕ ಪೂರೈಕೆ ನಿಂತು ಹೋಗುವ ವಿಷಯ ತಿಳಿದು ವೈದ್ಯರು ಕಂಗಾಲಾಗಿದ್ದರು. ರಾತ್ರಿ 11.15ರ ವೇಳೆಗೆ ರೋಗಿಗಳಿಗೆ ನೀಡಿದ್ದ ಆಮ್ಲಜನಕ ಪೂರೈಕೆ ಸ್ಥಗಿತವಾಯಿತು. ಈ ಸಮಯದಲ್ಲಿ ಆಮ್ಲಜನಕ ಅವಲಂಬಿತರಾಗಿದ್ದ ರೋಗಿಗಳು ತೀವ್ರ ತೊಂದರೆ ಅನುಭವಿಸಿದರು. ಉಸಿರಾಡಲು ಕಷ್ಟವಾಯಿತು. ರೋಗಿಗಳ ಬಂಧುಗಳು ಆತಂಕಗೊಂಡು ಆರ್ತನಾದ ಮಾಡುತ್ತಿದ್ದ ದೃಶ್ಯ ಮನಕಲಕುವಂತಿತ್ತು. ಆಮ್ಲಜನಕ ಪೂರೈಕೆ ನಿಂತಿದ್ದ ಅವಧಿಯಲ್ಲಿ ಹಾಗೂ ಮತ್ತೆ ಆಮ್ಲಜನಕ ನೀಡಿದ ನಂತರವೂ ಚೇತರಿಸಿಕೊಳ್ಳಲಾಗದೇ 36 ಮಂದಿ ಮೃತಪಟ್ಟರು.

ಹೋರಾಟ ನಡೆಸಿದ್ದು ಎಸ್‌ಡಿಪಿಐ ಮಾತ್ರ: ಈ ಘಟನೆಯಲ್ಲಿ ಸಂತ್ರಸ್ತರ ಪರವಾಗಿ ಹೋರಾಟ ನಡೆಸಿದ್ದು ಎಸ್‌ಡಿಪಿಐ ಪಕ್ಷ ಮಾತ್ರ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ, ಸಂತ್ರಸ್ತರಿಗೆ ಪರಿಹಾರ ನೀಡಬೇಕೆಂದು ಎಸ್‌ಡಿಪಿಐ ಹಲವಾರು ಬಾರಿ ಪ್ರತಿಭಟನೆ ಮಾಡಿತು. ಸಂತ್ರಸ್ತರನ್ನು ರಾಜ್ಯಪಾಲರ ಬಳಿಗೆ ಕರೆದೊಯ್ಯಿತು. ನ್ಯಾಯ ದೊರಕಿಸುವಂತೆ ಮನವಿ ಮಾಡಿತು. ಆದರೆ ಇದುವರೆಗೂ ಸರ್ಕಾರ ಸ್ಪಂದಿಸಿಲ್ಲ. ಈ ಬಗ್ಗೆ ಎಸ್‌ಡಿಪಿಐ ನಗರ ಸಭಾ ಸದಸ್ಯ ಎಂ.ಮಹೇಶ್ ಮಾತನಾಡಿ, ಆಕ್ಸಿಜನ್ ದುರಂತ ಸಂಭವಿಸಿ ವರ್ಷ ಕಳೆದಿದೆ. ಸಂತ್ರಸ್ತರ ಕುಟುಂಬಗಳಿಗೆ ಸೂಕ್ತ ಪರಿಹಾರವೂ ಸಿಕ್ಕಿಲ್ಲ. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಯಾವುದೇ ಕಾನೂನು ಕ್ರಮವೂ ಆಗಿಲ್ಲ. ಈ ಬಗ್ಗೆ ನಮ್ಮ ಎಸ್‌ಡಿಪಿಐಯಿಂದ ಹೋರಾಟ ಮಾಡುತ್ತಿದ್ದೇವೆ. ಆದರೂ ನ್ಯಾಯ ಮಾತ್ರ ಮರಿಚಿಕೆಯಾಗಿದೆ. ನ್ಯಾಯ ಸಿಗುವವರೆಗೂ ಹೋರಾಟ ಮುಂದುವರಿಯಲಿದೆ ಎಂದರು.



ಸಂತ್ರಸ್ತರಾದವರಿಗೆ ದೊರೆತಿಲ್ಲ ನ್ಯಾಯಯುತ ಪರಿಹಾರ

ಘಟನೆಯಿಂದ 36ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಆದರೆ, ಸರ್ಕಾರದ ಪ್ರಕಾರ ಸತ್ತವರು 24 ಮಂದಿ. ಕೋಮು ಗಲಭೆಯಲ್ಲಿ ಮೃತಪಟ್ಟವರಿಗೆ 25ಲಕ್ಷ ರೂ. ಪರಿಹಾರ ನೀಡಿರುವ ರಾಜ್ಯ ಸರ್ಕಾರ, ಈ ಘಟನೆಯಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಸರಿಯಾದ ಪರಿಹಾರವನ್ನೇ ನೀಡಿಲ್ಲ. ಘಟನೆಗೆ ಸರ್ಕಾರದ ನಿರ್ಲಕ್ಷ್ಯವೇ ಕಾರಣವಾಗಿದ್ದರೂ ಸರ್ಕಾರದಿಂದ ಸಂತ್ರಸ್ತರ ಕುಟುಂಬಕ್ಕೆ ನ್ಯಾಯಯುತ ಪರಿಹಾರ ದೊರೆತಿಲ್ಲ.

ಪತಿಯೂ ಇಲ್ಲ, ಪರಿಹಾರವೂ ಸಿಗಲಿಲ್ಲ...

ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬಗಳಲ್ಲಿ ಒಬ್ಬೊಬ್ಬರದೂ ಒಂದೊಂದು ವ್ಯಥೆಯ ಕಥೆ. ಇವರಲ್ಲಿ ಬಿಸಲವಾಡಿ ಗ್ರಾಮದ ಆಟೋ ಚಾಲಕ ಸಿದ್ದನಾಯಕ ಅವರ ಕುಟುಂಬಕ್ಕೆ ಸರ್ಕಾರ ಒಂದು ನಯಾಪೈಸೆ ಪರಿಹಾರ ನೀಡಿಲ್ಲ.

ಸಿದ್ದನಾಯಕ ಅವರ ಪತ್ನಿ ಜ್ಯೋತಿ ಅವರು ಹೇಳುವಂತೆ: ಚಾಮರಾಜನಗರದ ಸರ್ಕಾರಿ ಕೋವಿಡ್ ಆಸ್ಪತ್ರೆಯಲ್ಲಿ ಮೇ 2ರ ರಾತ್ರಿ 10 ಗಂಟೆಯವರೆಗೂ ಆಕ್ಸಿಜನ್ ಸರಬರಾಜು ಇತ್ತು. ನಾನು ಆ ವಾರ್ಡಿನಲ್ಲೇ ನನ್ನ ಪತಿಗೆ ಸಹಾಯಕಳಾಗಿ ಇದ್ದೆ. ನನ್ನ ಪತಿ ಸಿದ್ದನಾಯಕ ಅವರು ನಮ್ಮ ಜೊತೆ ಚೆನ್ನಾಗೇ ಮಾತನಾಡಿದರು. ಇನ್ನು ಎರಡು ದಿನಗಳಲ್ಲಿ ಡಿಸ್ಚಾರ್ಜ್ ಮಾಡುತ್ತಾರೆ. ನಾನು ಮನೆಗೆ ಬಂದುಬಿಡುತ್ತೇನೆ ಎಂದು ಸಂತೋಷದಿಂದ ಇದ್ದರು. ರಾತ್ರಿ 10.30ರಲ್ಲಿ ನನಗೆ ಗಾಳಿ (ಆಕ್ಸಿಜನ್) ಬರುತ್ತಿಲ್ಲ. ಉಸಿರಾಡಲು ಆಗುತ್ತಿಲ್ಲ ಎಂದರು. ಆಗ ಅಕ್ಕಪಕ್ಕದ ಎಲ್ಲಾ ರೋಗಿಗಳೂ ನಮಗೂ ಗಾಳಿ ಬರುತ್ತಿಲ್ಲ ಎಂದು ಸಂಕಟಪಡಲಾರಂಭಿಸಿದರು. ಇಡೀ ವಾರ್ಡಿನಲ್ಲಿ ಒಂಥರಾ ಆತಂಕ ನಿರ್ಮಾಣವಾಯಿತು. ರಾತ್ರಿ 11.15ರಲ್ಲಿ ನನ್ನ ಪತಿ ನನ್ನ ಕಣ್ಣೆದುರೇ ಮೃತರಾದರು. ಆಸ್ಪತ್ರೆಯವರು ಸ್ವಲ್ಪ ಹೊತ್ತಿಗೇ ಬಾಡಿ ತೆಗೆದುಕೊಂಡು ಹೋಗಿ ಎಂದು ಬಲವಂತ ಮಾಡಿದರು.

ಘಟನೆ ನಡೆದ ಬಳಿಕ ಸರ್ಕಾರದಿಂದ ಏನೂ ಪರಿಹಾರ ಕೊಟ್ಟಿಲ್ಲ. ಇನ್ನೊಂದು ಲಿಸ್ಟ್‌ನಲ್ಲಿದೆ. ಕಳುಹಿಸಿದ್ದೇವೆ ಎನ್ನುತ್ತಿದ್ದಾರೆ. ಒಂದು ರೂ. ಪರಿಹಾರ ನೀಡಿಲ್ಲ.

ಮಗ ಯೋಗೇಶ್ 10ನೇ ತರಗತಿ, ಮಗಳು ದಾಕಾಯಣಿ 8ನೇ ತರಗತಿ ಓದುತ್ತಿದ್ದಾರೆ. ಸುತ್ತೂರಿನ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಸುತ್ತೂರು ಶ್ರೀಗಳ ಕೃಪೆಯಿಂದ ಅದೊಂದು ಸಹಾಯ ನಮಗೆ ಸಿಕ್ಕಿದೆ. ನಾನು ಈಗ ಕೂಲಿನಾಲಿ ಮಾಡಿ ಕುಟುಂಬ ಸಾಕುತ್ತಿದ್ದೇನೆ ಎಂದರು.

ಇಂದು ಬಸವ ಜಯಂತಿ ಆಚರಣೆ

ಚಾಮರಾಜನಗರ, ಮೇ 1– ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಹಾನ್ ಮಾನವತಾವಾದಿ, ಸಮಾಜ ಸುಧಾರಕರಾದ ಜಗಜ್ಯೋತಿ ಶ್ರೀಬಸವೇಶ್ವರರ ಜಯಂತಿ ಕಾರ್ಯಕ್ರಮವನ್ನು ಮೇ 3ರಂದು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಬೆಳಗ್ಗೆ 10 ಗಂಟೆಗೆ ನಗರದ ಪ್ರವಾಸಿ ಮಂದಿರದಲ್ಲಿ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ನಡೆಯಲಿರುವ ಜಗಜ್ಯೋತಿ ಶ್ರೀ ಬಸವೇಶ್ವರರ ಭಾವಚಿತ್ರದ ಮೆರವಣಿಗೆಗೆ ಚಾಲನೆ ನೀಡಲಾಗುತ್ತದೆ. ಬಳಿಕ ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಸಾಗಿ ಜೈ ಭುವನೇಶ್ವರಿ ವೃತ್ತ (ಪಚ್ಚಪ್ಪ ವೃತ್ತ) ಮೂಲಕ ಸಮಾರಂಭ ನಡೆಯುವ ಪೇಟೆ ಪ್ರೈಮರಿ ಶಾಲೆ ಆವರಣದಲ್ಲಿ ಮುಕ್ತಾಯಗೊಳ್ಳಲಿದೆ.

11 ಗಂಟೆಗೆ ನಗರದ ಪೇಟೆ ಪ್ರೈಮರಿ ಶಾಲಾ ಆವರಣದಲ್ಲಿ ವೇದಿಕೆ ಸಮಾರಂಭ ನಡೆಯಲಿದೆ. ನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠಾಧ್ಯಕ್ಷ ಚೆನ್ನಬಸವ ಸ್ವಾಮೀಜಿ ದಿವ್ಯಸಾನ್ನಿಧ್ಯ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಸಮಾರಂಭ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ವಿ.ಶ್ರೀನಿವಾಸ ಪ್ರಸಾದ್ ಘನಉಪಸ್ಥಿತಿ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಕನಕಗಿರಿಯ ಬಾಹುಬಲಿ ಮೂರ್ತಿಗೆ ಮಹಾಮಜ್ಜನ



ಚಾಮರಾಜನಗರ, ಮೇ 2– ತಾಲೂಕಿನ ಮಲೆಯೂರು ಸಮೀಪದ ಕನಕಗಿರಿಯಲ್ಲಿ ಬಾಹುಬಲಿಸ್ವಾಮಿ ಮೂರ್ತಿಗೆ 2ನೇ ಮಹಾ ಮಸ್ತಕಾಭಿಷೇಕ ಮಹೋತ್ಸವ ಸಹಸ್ರಾರು ಮಂದಿ ಭಕ್ತರ ಸಮ್ಮುಖದಲ್ಲಿ ಶ್ರದ್ಧಾ, ಭಕ್ತಿಯಿಂದ ಭಾನುವಾರ ನೆರವೇರಿತು.

ಕನಕಗಿರಿಯಲ್ಲಿ 2017ರಲ್ಲಿ ಪ್ರತಿಷ್ಠಾಪಿಸಲಾದ 18 ಅಡಿಯ ಆಕರ್ಷಕ ಗೊಮ್ಮಟನಿಗೆ ಇದು ಎರಡನೇ ಮಸ್ತಕಾಭಿಷೇಕ. ಪ್ರತಿಷ್ಠಾಪನೆಗೊಂಡ ಸಂದರ್ಭದಲ್ಲೇ ನಡೆದ ಪ್ರಥಮ ಮಸ್ತಕಾಭಿಷೇಕವೂ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲಾಗಿತ್ತು. ಇದೀಗ 6 ವರ್ಷದ ಬಳಿಕ ಎರಡನೇ ಮಹಾಮಸ್ತಕಾಭಿಷೇಕವನ್ನು ಕಣ್ತುಂಬಿಕೊಳ್ಳಲು ರಾಜ್ಯ ಹಾಗೂ ದೇಶದ ನಾನಾ ಭಾಗಗಳಿಂದ ಸಾವಿರಾರು ಮಂದಿ ಭಕ್ತರು ನೆರೆದಿದ್ದರು.

ಬಣ್ಣಗಳಿಂದ ಕಂಗೊಳಿಸಿದ ಮೂರ್ತಿ: ಕಳಶದ ಅಭಿಷೇಕ ಮುಗಿದ ನಂತರ ಶುದ್ಧ ಜಲಾಭಿಷೇಕ, ಎಳನೀರು, ಕ್ಷೀರಾಭಿಷೇಕ, ಇಕ್ಷುರಸ, ಸರ್ವ ಔಷಧ, ಕಲ್ಕಚೂರ್ಣ, ಅರಿಶಿನ, ಚತುಷ್ಕೋನ ಕಳಸ, ಶ್ರೀಗಂಧ, ಕೆಂಪು ಚಂದನದ ಅಭಿಷೇಕಗಳು ನಡೆದವು. ಬಳಿಕ ಪುಷ್ಪವೃಷ್ಟಿ, ಶಾಂತಿದಾರ, ಮಹಾಮಂಗಳಾರತಿ ಹಾಗೂ ಮಹಾ ಹಾರ ಕಾರ್ಯಕ್ರಮಗಳು ನಡೆದವು. ಈ ಅಭಿಷೇಕದ ಸಂದರ್ಭದಲ್ಲಿ ಬಾಹುಬಲಿ ಮೂರ್ತಿಯೂ ನಾನಾ ಬಣ್ಣಗಳಿಂದ ಕಂಗೊಳಿಸುವ ಮೂಲಕ ನೆರೆದಿದ್ದ ಭಕ್ತರನ್ನು ಮೂಕವಿಸ್ಮಿತರನ್ನಾಗಿಸಿತು. ಮಹಾಮಸ್ತಕಾಭಿಷೇಕ ಮಹೋತ್ಸವದ ಉದ್ಘಾಟನೆಯನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರಸ್ವಾಮೀಜಿ ನೆರವೇರಿಸಿದರು. ಈ ಸಂದರ್ಭದಲ್ಲಿ ಜೈನ ಮುನಿಗಳಾದ ಶ್ರೀ ಅಮೋಘಕೀರ್ತಿ ಮುನಿಮಹಾರಾಜರು, ಶ್ರೀಅಮರಕೀರ್ತಿ ಮುನಿ ಮಹಾರಾಜ, ಕನಕಗಿರಿಯ ಶ್ರೀಭುವನಕೀರ್ತಿ ಭಟ್ಟಾರಕ ಸ್ವಾಮೀಜಿ, ಹೊಂಬುಜಾ ಕ್ಷೇತ್ರದ ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮೀಜಿ, ಮಾಜಿ ಸಂಸದ ಆರ್.ಧ್ರುವನಾರಾಯಣ, ಚಾಮುಲ್ ನಿರ್ದೇಶಕ ರವಿಶಂಕರ್, ಮೂರ್ತಿ ಪ್ರದಾತರಾದ ವಿಶಾಲೇಂದ್ರಯ್ಯ ಹಾಗೂ ಜೈನ ಸಮುದಾಯದ ಪ್ರಮುಖರು ಹಾಜರಿದ್ದರು.

ಮೇ 8ರಂದು ಭಗೀರಥ ಜಯಂತಿ

ಯಳಂದೂರು, ಮೇ 2(ವಿ.ನಾಗರಾಜು)– ಪಟ್ಟಣದಲ್ಲಿ ಮೇ 8ರಂದು ಭಗೀರಥ ಜಯಂತಿ ಆಚರಣೆ ನಡೆಸುವ ಸಂಬಂಧ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ತಾಲೂಕಿನ ವಿವಿಧ ಗ್ರಾಮಗಳ ಉಪ್ಪಾರ ಜನಾಂಗದ ಮುಖಂಡರ ಸಭೆ ನಡೆಯಿತು.

ಸಭೆಯಲ್ಲಿ ಜಿಪಂ ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್ ಮಾತನಾಡಿ, ಕೊರೊನಾ ಹಿನ್ನೆಲೆಯಲ್ಲಿ 3 ವರ್ಷಗಳಿಂದಲೂ ಭಗೀರಥ ಜಯಂತಿಯನ್ನು ಸರಳವಾಗಿ ಆಚರಿಸಲಾಗುತ್ತಿತ್ತು. ಈ ಬಾರಿ ಅದ್ಧೂರಿಯಾಗಿ ಆಚರಿಸಲು ಎಲ್ಲಾ ಗ್ರಾಮಗಳ ಮುಖಂಡರು ಒಪ್ಪಿಗೆ ಸೂಚಿಸಿದ್ದಾರೆ ಎಂದರು. ಪಟ್ಟಣದ ಜಹಗೀರ್‌ದಾರ್ ಬಂಗಲೆ ಮುಂಭಾಗ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ತಾಲೂಕಿನ ವಿವಿಧ ಗ್ರಾಮಗಳಿಂದ ಉಪ್ಪಾರ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು. ಅಲ್ಲದೇ ಅಂದು ಪ್ರತಿ ಗ್ರಾಮಗಳಲ್ಲೂ ಭಗೀರಥ ಜಯಂತಿ ಆಚರಿಸಬೇಕು. ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯಬಾರದು ಎಂದರು. ಸಭೆಯಲ್ಲಿ ತಾಲೂಕಿನ ಉಪ್ಪಾರ ಸಮಾಜದ ಯಜಮಾನರು ಇದ್ದರು.

ಬಡವರಿಗೆ ಆಹಾರ ಪದಾರ್ಥಗಳ ಕಿಟ್ ವಿತರಣೆ

ಹನೂರು, ಮೇ 2(ಸೋಮು)–ರಂಜಾನ್ ಪ್ರಯುಕ್ತ ತಾಲೂಕಿನ ಕೌದಳ್ಳಿ ಶಾದಿ ಮಹಲ್ ಸಭಾಂಗಣದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಬಡವರಿಗೆ ಆಹಾರ ಪದಾರ್ಥಗಳ ಕಿಟ್‌ಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಶಾಸಕ ಆರ್.ನರೇಂದ್ರ ಮಾತನಾಡಿ, ರಂಜಾನ್ ಹಬ್ಬದ ಶುಭ ಸಂದರ್ಭದಲ್ಲಿ ಬಡವರಿಗೆ ಆಹಾರ ಪದಾರ್ಥಗಳ ಪಡಿತರ ಕಿಟ್ ವಿತರಿಸುತ್ತಿರುವ ಸೈಯದ್ ಮುಜಾಹಿದ್ ಅವರ ಸಮಾಜಮುಖಿ ಕಾರ್ಯ ಶ್ಲಾಘನೆಯ ವಾದದ್ದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸಮಾಜ ಸೇವಕ ಮುಜಾಹಿದ್ ಮಾತನಾಡಿದರು. ಕೌದಳ್ಳಿ ಭಾಗದ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ನೂರಾರು ಮುಸ್ಲಿಂ ಸಮುದಾಯದ ಜನತೆ ಆಹಾರ ಪಡಿತರ ಕಿಟ್ ಅನ್ನು ಪಡೆದರು. ಈ ಸಂದರ್ಭದಲ್ಲಿ ಕೌದಳ್ಳಿ ಗ್ರಾಪಂ ಸದಸ್ಯ ವಾಜೀಲ್ ಪಾಷಾ, ಮುಖಂಡರಾದ ಚಾಂದ್ ಪಾಷಾ, ನೂರುಲ್ಲಾ, ಮೊಹಮದ್ ಶರೀಫ್, ವಿವಿಧ ಗ್ರಾಮಗಳ ಮುಸ್ಲಿಂ ಸಮುದಾಯದವರು ಇದ್ದರು.



ಮೋದಿಯಿಂದ ವಿಶ್ವದೆಲ್ಲೆಡೆ ಭಾರತಕ್ಕೆ ಗೌರವ

ಮಿಜೋರಾಂನ ಮಾಜಿ ರಾಜ್ಯಪಾಲ ಕುಮ್ಮನಮ್ ರಾಜಶೇಖರನ್ ಅಭಿಮತ



ಗೋಣಿಕೊಪ್ಪಲು, ಮೇ 2–ನರೇಂದ್ರ ಮೋದಿ ಪ್ರಧಾನಿಯಾದ ನಂತರ ವಿಶ್ವದೆಲ್ಲೆಡೆ ಭಾರತದ ಗೌರವವನ್ನು ಹೆಚ್ಚಿಸಿದ್ದಾರೆ. ಉಕ್ರೇನ್, ರಷ್ಯಾ, ಅಮೆರಿಕಾ ಪ್ರಧಾನಿಗಳೂ ಯುದ್ಧದ ಬಗ್ಗೆ ಮೋದಿ ಸಲಹೆ ಕೇಳುತ್ತಿದ್ದಾರೆ. ಮಹಿಳೆಯರು ಹಾಗೂ ಮಕ್ಕಳ ರಕ್ಷಣೆಗೆ ಮೋದಿ ಸರ್ಕಾರ ಕಠಿಣ ಕಾನೂನು ರೂಪಿಸಿದೆ ಎಂದು ಮಿಜೋರಾಂನ ಮಾಜಿ ರಾಜ್ಯಪಾಲ ಕುಮ್ಮನಮ್ ರಾಜಶೇಖರನ್ ತಿಳಿಸಿದರು.

ಗೋಣಿಕೊಪ್ಪಲಿನ ಖಾಸಗಿ ಸಭಾಂಗಣದಲ್ಲಿ ವೀರಾಜಪೇಟೆ ಓಬಿಸಿ ಮೋರ್ಚಾ ಹಾಗೂ ಗೋಣಿಕೊಪ್ಪಲು ಬಿಜೆಪಿ ಶಕ್ತಿ ಕೇಂದ್ರದಿಂದ ನಡೆದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. ಕೇರಳದಲ್ಲಿ ಈ ಹಿಂದಿನ ಕಾಂಗ್ರೆಸ್ ಹಾಗೂ ಈಗಿನ ಕಮ್ಯೂನಿಸ್ಟ್ ಸರ್ಕಾರದಿಂದ ನಿರೀಕ್ಷಿತ ಅಭಿವೃದ್ಧಿ ಆಗುತ್ತಿಲ್ಲ. ಮೋದಿಯ ವಿರುದ್ಧ ಅಸಭ್ಯ ನುಡಿಯಾಡುವ ಕಮ್ಯುನಿಸ್ಟ್ ಸರ್ಕಾರ ಇತ್ತೀಚೆಗೆ ಗುಜರಾತ್ ರಾಜ್ಯದ ಅಭಿವೃದ್ಧಿ ಬಗ್ಗೆ ಅಧ್ಯಯನಕ್ಕಾಗಿ ತನ್ನ ತಂಡವನ್ನು ಕಳುಹಿಸಿಕೊಟ್ಟಿತ್ತು. ಇತರೆ ರಾಜಕೀಯ ಪಕ್ಷಗಳ ನಾಯಕರು ಮೋದಿಯಿಂದ ಕಲಿಯುವುದು ತುಂಬಾ ಇದೆ ಎಂದರು.

ನರೇಂದ್ರ ಮೋದಿ ಅವರು ಇತ್ತೀಚೆಗೆ ನಾರಾಯಣ ಗುರು ಜಯಂತಿ ಆಚರಣೆ ಮಾಡಿದ್ದರು. ನಾರಾಯಣ ಗುರು ಜಾತ್ಯತೀತ ಗುರುಗಳಾಗಿದ್ದು, ಮನುಷ್ಯರಲ್ಲಿರುವುದು ಒಂದೇ ಜಾತಿ, ಒಂದೇ ದೇವರೆಂದು ಪ್ರತಿಪಾದಿಸಿದ್ದರು. ಇವರು ಭಾರತದ ಆಧ್ಯಾತ್ಮಿಕ ಚೈತನ್ಯ ಎಂದ ಅವರು, ಡಾ.ಅಂಬೇಡ್ಕರ್ ಅವರ ಸಾಮಾಜಿಕ ಕಳಕಳಿ ಇಂದು ದೇಶಕ್ಕೇ ಮಾದರಿ. ಭಾರತದ ಹಳ್ಳಿ–ಹಳ್ಳಿಗಳಲ್ಲಿಯೂ ವಿಕಸನವಾಗಲು ಅವರ ಚಿಂತನೆ ಕಾರಣ ಎಂದರು. ಭಾರತ ಆರ್ಥಿಕತೆಯಲ್ಲಿ ಇಂದು ವಿಶ್ವದಲ್ಲಿಯೇ ನಾಲ್ಕನೇ ರಾಷ್ಟ್ರವಾಗಿದೆ. ಭಾರತ ವಿಶ್ವದಲ್ಲಿ ತಲೆ ಎತ್ತಿ ನಿಲ್ಲುವ ಶಕ್ತಿ ತುಂಬಿರುವುದು ಕೇಂದ್ರದ ಬಿಜೆಪಿ ಸರ್ಕಾರ ಎಂದು ಹೇಳಿದ ಅವರು, ಭಾರತೀಯರಿಗೆ ಜಾತ್ಯತೀತವಾಗಿ ಸರ್ಕಾರಿ ಸವಲತ್ತು ಹಾಗೂ ಆರ್ಥಿಕ ಸಬಲೀಕರಣಕ್ಕೆ ಒತ್ತು ನೀಡುತ್ತಿದೆ ಎಂದರು.

ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ಕೇರಳದಲ್ಲಿ ಬಿಜೆಪಿ ಸಂಕಷ್ಟದಲ್ಲಿದ್ದಾಗ ಸಂಘ ಪರಿವಾರವನ್ನು, ಬಿಜೆಪಿ ಪಕ್ಷವನ್ನು ಕಟ್ಟಿ ಬೆಳೆಸಿದವರು ಕುಮ್ಮನುಮ್ ರಾಜಶೇಖರ್ ಅವರು. ಅವರ ಆದರ್ಶವನ್ನು ನಾವು ಪಾಲಿಸಬೇಕಾಗಿದೆ. ಓಬಿಸಿ ಘಟಕದಲ್ಲಿ ಎಲ್ಲಾ ಹಿಂದುಳಿದ ವರ್ಗಗಳ ಪಾತ್ರವೂ ಮಹತ್ವದ್ದು ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ರಾಬಿನ್ ದೇವಯ್ಯ, ವೀರಾಜಪೇಟೆ ವಿಧಾನ ಸಭಾ ಕ್ಷೇತ್ರದ ಅಧ್ಯಕ್ಷ ನೆಲ್ಲೀರ ಚಲನ್, ಕೊಡಗು ಜಿಲ್ಲಾ ಓಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಆನಂದ್ ರಘು ಮಾತನಾಡಿದರು.

ವೀರಾಜಪೇಟೆ ತಾಲೂಕು ಓಬಿಸಿ ಮೋರ್ಚಾ ಅಧ್ಯಕ್ಷ ಕೆ.ರಾಜೇಶ್, ಕರ್ನಾಟಕ ಓಬಿಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಹಾಗೂ ಕೊಡಗು ಉಸ್ತುವಾರಿ ವಿಠಲ ಪೂಜಾರಿ, ಕೊಡಗು ಓಬಿಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಬಿ.ಎಂ.ಗಣೇಶ್, ಓಬಿಸಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಹಾಗೂ ಕೊಡಗು ಎಸ್‌ಎನ್‌ಡಿಪಿ ಜಿಲ್ಲಾಧ್ಯಕ್ಷ ವಿ.ಕೆ.ಲೋಕೇಶ್, ವೀರಾಜಪೇಟೆ ಓಬಿಸಿ ಘಟಕದ ನವೀನ್ ಉತ್ತಯ್ಯ, ಜಿಲ್ಲಾ ಭಾಜಪಾ ಪ್ರಧಾನ ಕಾರ್ಯದರ್ಶಿ ಗುಮ್ಮಟೀರ ಕಿಲನ್‌ಗಣಪತಿ, ಗೋಣಿಕೊಪ್ಪಲು ಶಕ್ತಿ ಕೇಂದ್ರದ ಪ್ರಮುಖ್ ಸುರೇಶ್ ರೈ ಹಾಗೂ ರಂಜಿ, ವೀರಾಜಪೇಟೆ ತಾಲೂಕು ಮಾಜಿ ಓಬಿಸಿ ಮೋರ್ಚಾ ಅಧ್ಯಕ್ಷ ಚಂದ್ರಶೇಖರ್, ಶಿವಂ ದಿವಾಕರನ್ ಇತರರು ಈ ವೇಳೆ ಉಪಸ್ಥಿತರಿದ್ದರು.

ಕೊಡಗಿನಲ್ಲಿ ಭೂ ಪರಿವರ್ತನೆ ಮೇಲಿನ ನಿರ್ಬಂಧ ತೆರವು ಪ್ರಸ್ತಾಪಕ್ಕೆ ಕೊಡಗು ಸಂರಕ್ಷಣಾ ವೇದಿಕೆ ಅಸಮಾಧಾನ



ಮಡಿಕೇರಿ,ಮೇ 2– ಕೊಡಗಿನಲ್ಲಿ ಭೂ ಪರಿವರ್ತನೆಯ ಮೇಲಿನ ನಿರ್ಬಂಧಗಳನ್ನು ತೆಗೆದು ಹಾಕುವ ಪ್ರಸ್ತಾಪ ಖಂಡನೀಯ ಎಂದು ಕೊಡಗು ಸಂರಕ್ಷಣಾ ವೇದಿಕೆ ಅಧ್ಯಕ್ಷ ಕರ್ನಲ್ ಮುತ್ತಣ್ಣ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದಾದ್ಯಂತ ಕೃಷಿ ಭೂಮಿಯ ಭೂ ಪರಿವರ್ತನೆಗೆ ಮೂರು ದಿನಗಳಲ್ಲಿ ಅನುಮೋದನೆ ನೀಡಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ್ ಇತ್ತೀಚೆಗೆ ಘೋಷಿಸಿದ್ದು, ಇದು ಆತಂಕಕಾರಿ ಬೆಳವಣಿಗೆ ಎಂದರು.

ಕೊಡಗು ಕಾವೇರಿ ನದಿಯ ಪ್ರಮುಖ ಜಲಾನಯನ ಪ್ರದೇಶವಾಗಿದೆ. ಅಲ್ಲದೆ ಕರ್ನಾಟಕ ಮತ್ತು ತಮಿಳುನಾಡಿನ ರೈತರು ಸೇರಿದಂತೆ 8 ಕೋಟಿ ಜನರು ನೀರಿಗಾಗಿ ಕಾವೇರಿ ನದಿಯನ್ನು ಅವಲಂಬಿಸಿದ್ದಾರೆ. ಆದರೆ ಕೊಡಗನ್ನು ನಗರೀಕಣ ಮಾಡುವುದರಿಂದ ಕಾವೇರಿ ನದಿ ಹರಿವಿನ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ಮುತ್ತಣ್ಣ ಆತಂಕ ವ್ಯಕ್ತಪಡಿಸಿದರು.

ಕೊಡಗಿನಲ್ಲಿ ದೊಡ್ಡ ಪ್ರಮಾಣದ ಬೇನಾಮಿ ಭೂಮಿ ಹೊಂದಿರುವ ಕೆಲವು ರಾಜಕಾರಣಿಗಳು ಭೂ ಪರಿವರ್ತನೆಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ನಿಯಮಗಳನ್ನು ಬದಲಾಯಿಸುತ್ತಿದ್ದಾರೆ ಎಂದು ಆರೋಪಿಸಿದ ಮುತ್ತಣ್ಣ, ಕೊಡಗಿನ ಶಾಸಕರು, ಸಂಸದರು ಹಾಗೂ ಜನಪ್ರತಿನಿಧಿಗಳು ಭೂ ಪರಿವರ್ತನೆಗೆ ಅವಕಾಶ ಕಲ್ಪಿಸದಂತೆ ಕೊಡಗು ಸಂರಕ್ಷಣಾ ವೇದಿಕೆಗೆ ಬೆಂಬಲ ನೀಡಲು ಮನವಿ ಮಾಡಿದರು. ಮುಂಬೈ ಮಹಿಳಾ ಅಧ್ಯಯನಗಳ ಸಂಶೋಧನಾ ಕೇಂದ್ರದ ನಿವೃತ್ತ ಪ್ರೊಫೆಸರ್ ಹಾಗೂ ನಿರ್ದೇಶಕಿ ವೀಣಾ ರವಿ ಪೂಣಚ್ಚ ಮಾತನಾಡಿ, ಸೈಟ್‌ಗಳು ಮತ್ತು ಲೇಔಟ್‌ಗಳಿಗಾಗಿ ಕೊಡಗಿನಲ್ಲಿ ದೊಡ್ಡ ಪ್ರಮಾಣದ ಭೂ ಪರಿವರ್ತನೆಯಾದರೆ ಕಾವೇರಿ ನದಿಯ ಮೇಲೆ ಪರಿಣಾಮ ಬೀರುತ್ತದೆ. ಜಿಲ್ಲೆಯಲ್ಲಿ ಕೃಷಿಯನ್ನೇ ಅವಲಂಬಿಸಿ ಬದುಕುತ್ತಿರುವ ಸಮುದಾಯಕ್ಕೆ ಸಮಸ್ಯೆ ಎದುರಾಗಲಿದೆ ಎಂದು ಬೇಸರ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ವೇದಿಕೆ ಸದಸ್ಯರಾದ ನಯನ್ ಚಂಗಪ್ಪ, ಶರತ್, ಕಾಫಿ ಬೆಳೆಗಾರ ಯಶ್ವಂತ್ ಕಾಳಪ್ಪ ಉಪಸ್ಥಿತರಿದ್ದರು.

ನಿಂತಿದ್ದ ಕಾರಿಗೆ ಮತ್ತೊಂದು ಕಾರು ಡಿಕ್ಕಿ; ಮಹಿಳೆ ಸಾವು

ಗೋಣಿಕೊಪ್ಪ, ಮೇ 2–ನಿಯಂತ್ರಣ ತಪ್ಪಿದ ಕಾರು, ರಸ್ತೆ ಬದಿಯಲ್ಲಿ ನಿಂತಿದ್ದ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ತಾಯಿ ಸಾವನ್ನಪ್ಪಿದ್ದು, ಪುತ್ರನಿಗೆ ಗಾಯಗಳಾಗಿರುವ ಘಟನೆ ಭಾನುವಾರ ತಡರಾತ್ರಿ ಪಟ್ಟಣದಲ್ಲಿ ನಡೆದಿದೆ. ಕಾನೂರು ಗ್ರಾಮದ ಸುಳ್ಳಿಮಾಡ ಬೋಜಮ್ಮ ಉತ್ತಯ್ಯ (65) ಸಾವಿಗೀಡಾಗಿದ್ದು, ಅವರ ಪುತ್ರ ಭಜನ್ (32)ಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಅಪಾಯದಿಂದ ಪಾರಾಗಿದ್ದಾರೆ.

ಭಾನುವಾರ ತಾಯಿ–ಮಗ ಸಂಬಂಧಿಕರ ಮನೆಗೆ ತೆರಳಿದ್ದರು. ತಡರಾತ್ರಿ ಮನೆಗೆ ಹಿಂದಿರುಗುವಾಗ ಬೋಜಮ್ಮ ಅವರ ಆರೋಗ್ಯದಲ್ಲಿ ಏರುಪೇರಾಗಿದೆ. ಅವರನ್ನು ಗೋಣಿಕೊಪ್ಪ ಆಸ್ಪತ್ರೆಗೆ ದಾಖಲಿಸಲು ಬರುತ್ತಿದ್ದಾಗ ಪಟ್ಟಣದ ಉಮಾಮಹೇಶ್ವರಿ ದೇವಸ್ಥಾನ ಸಮೀಪ ನಿಯಂತ್ರಣ ತಪ್ಪಿದ ಕಾರು, ರಸ್ತೆಬದಿ ನಿಂತಿದ್ದ ಮತ್ತೊಂದು ಕಾರಿಗೆ ಡಿಕ್ಕಿಯಾಗಿದೆ. ಇದರಿಂದ ಸ್ಥಳದಲ್ಲಿಯೇ ಬೋಜಮ್ಮ ಕೊನೆಯುಸಿರುಳೆದಿದ್ದಾರೆ. ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು.

ಕೊಡಗಿನ ಹೋಂ ಸ್ಟೇನಲ್ಲಿ ಪ್ರವಾಸಿಗ ಸಾವು

ಮಡಿಕೇರಿ, ಮೇ 2– ಪ್ರವಾಸಿಗರೊಬ್ಬರು ಶೌಚಾಲಯದಲ್ಲಿ ಕುಸಿದು ಬಿದ್ದು ಸಾವನ್ನಪ್ಪಿರುವ ಘಟನೆ ಹಾರಂಗಿ ಹಿನ್ನೀರು ಭಾಗದ ಹೆರೂರು ಗ್ರಾಮದ ಹೋಂಸ್ಟೇವೊಂದರಲ್ಲಿ ನಡೆದಿದೆ. ಬೆಂಗಳೂರಿನ ನಿವಾಸಿ ಕಾರ್ತಿಕ್(24) ಮೃತಪಟ್ಟವರು. ಕೊಡಗಿನ ಪ್ರವಾಸಿ ತಾಣಗಳನ್ನು ವೀಕ್ಷಿಸಲೆಂದು ತನ್ನ ಸ್ನೇಹಿತರೊಂದಿಗೆ ಬಂದಿದ್ದ ಕಾರ್ತಿಕ್ ಹೋಂಸ್ಟೇಯಲ್ಲಿ ತಂಗಿದ್ದರು. ಭಾನುವಾರ ಬೆಳಗ್ಗೆ ಎದೆನೋವು ಕಾಣಿಸಿಕೊಂಡು ಶೌಚಾಲಯದಲ್ಲಿ ವಾಂತಿ ಮಾಡಿಕೊಂಡು ಕುಸಿದು ಬಿದ್ದರು ಎನ್ನಲಾಗಿದೆ. ಸ್ನೇಹಿತರು ಆಸ್ಪತ್ರೆಗೆ ಕರೆದೊಯ್ದರಾದರೂ ಅಷ್ಟರಲ್ಲಿ ಅವರು ಮೃತಪಟ್ಟಿದ್ದರು ಎಂದು ತಿಳಿದು ಬಂದಿದೆ. ಸುಂಟಿಕೊಪ್ಪ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿ

ಮಹಿಳೆ, ಚಾಲಕನಿಗೆ ಗಾಯ

ಮಡಿಕೇರಿ, ಮೇ 2–ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿಯಾಗಿ ಮಹಿಳೆ ಮತ್ತು ಚಾಲಕ ಗಾಯಗೊಂಡ ಘಟನೆ ಪೆರಾಜೆ ಸಮೀಪ ಪಾಲಡ್ಕದಲ್ಲಿ ಸಂಭವಿಸಿದೆ.

ಸುಂಟಿಕೊಪ್ಪ ಕಡೆಯಿಂದ ಮಂಗಳೂರು ಕಡೆಗೆ ಹೋಗುತ್ತಿದ್ದ ಹುಂಡೈ ಐ20 ಕಾರು ಪಾಲಡ್ಕ ಬಳಿ ನಿಯಂತ್ರಣ ತಪ್ಪಿ ಪಲ್ಟಿಯಾಗಿ, ರಸ್ತೆ ಬದಿಯ ಡಿವೈಡರ್‌ಗೆ ಡಿಕ್ಕಿಯಾಗಿದೆ. ಕಾರಿನಲ್ಲಿ ಮೂವರು ಪ್ರಯಾಣಿಸುತ್ತಿದ್ದು, ಓರ್ವ ಮಹಿಳೆ ಹಾಗೂ ಕಾರು ಚಾಲಕನಿಗೆ ಸಣ್ಣ–ಪುಟ್ಟ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಸ್ಥಳದಲ್ಲಿ ಈ ಹಿಂದೆಯೂ ಅಪಘಾತ ನಡೆದಿದ್ದು, ಇನ್ನಾದರೂ ಸಂಬಂಧಿತ ಅಧಿಕಾರಿಗಳು ಸೂಚನಾ ಫಲಕಗಳನ್ನು ಅಳವಡಿಸಬೇಕು ಎಂದು ಸ್ಥಳೀಯರು ಆಕ್ರೋಶ ಒತ್ತಾಯಿಸಿದ್ದಾರೆ.

ವಿರಾಜಪೇಟೆಯಲ್ಲಿ ವಿಶ್ವ ಕಾರ್ಮಿಕರ ದಿನಾಚರಣೆ



ವಿರಾಜಪೇಟೆ, ಮೇ2–ಕಾರ್ಮಿಕರು ಹಗಲು ರಾತ್ರಿ ಎನ್ನದೆ ದುಡಿಯುತ್ತಿದ್ದರೂ ಸರ್ಕಾರದ ಯೋಜನೆ ಮತ್ತು ಸೌಲಭ್ಯಗಳು ಸರಿಯಾಗಿ ಅವರಿಗೆ ದೊರೆಯುತ್ತಿಲ್ಲ, ಕಟ್ಟಡ ಕಾರ್ಮಿಕರ ಕಲ್ಯಾಣನಿಧಿಯಲ್ಲಿ ಸಾಕಷ್ಟು ಅನುದಾನವಿದ್ದರೂ ಕಾರ್ಮಿಕರಿಗೆ ದೊರಕುತ್ತಿಲ್ಲ ಎಂದು ಸಿಐಟಿಯು ಸಂಘಟನೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಸಿ.ಸಾಬು ಹೇಳಿದರು.

ವಿಶ್ವ ಕಾರ್ಮಿಕರ ದಿನಾಚರಣೆಯ ಅಂಗವಾಗಿ ವಿರಾಜಪೇಟೆ ಪುರಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕಾರ್ಮಿಕರಿಗಾಗಿ ಇರುವಂತ ಕಾನೂನುಗಳನ್ನು ಅನೇಕ ವರ್ಷಗಳಿಂದಲೂ ಹೋರಾಟ ನಡೆಸಿ ಪಡೆದುಕೊಂಡಿದ್ದೇವೆ. ಆದರೂ ಸರ್ಕಾರ ಕಾರ್ಮಿಕರನ್ನು ಕಡೆಗಣಿಸಿ ಬಂಡವಾಳಶಾಹಿಗಳಿಗೆ ಲಾಭವಾಗುವಂತ ಕೆಲಸ ಮಾಡುತ್ತಿದೆ. ಕಾರ್ಮಿಕರಿಗಾಗಿ ಹಲವು ಯೋಜನೆಗಳಿದ್ದರೂ ಅದನ್ನು ತಲುಪಿಸುವಂತ ಕೆಲಸ ಸರ್ಕಾರ ಮಾಡುತ್ತಿಲ್ಲ. ದಿನೇದಿನೆ ವಸ್ತುಗಳ ಬೆಲೆ ಏರಿಕೆ ಮಾಡುತ್ತಿರುವ ಸರ್ಕಾರದ ವಿರುದ್ಧ ದೊಡ್ಡ ರೀತಿಯಲ್ಲಿ ಹೋರಾಟ ನಡೆಸಬೇಕಾಗಿದೆ ಎಂದು ಸಾಬು ತಿಳಿಸಿದರು.

ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷ ಹರಿದಾಸ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಂಘಟನೆಯ ಕೆ.ಎಸ್.ರತೀಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಹಮಾಲಿ ಸಂಘಟನೆಯ ಮುಖಂಡ ಕೆ.ಎಸ್.ರಮೇಶ್, ಜನವಾದಿ ಸಂಘಟನೆಯ ಪದ್ಮಿನಿ, ಹಮೀದ್, ಸುಬ್ರಮಣಿ, ಮಂಗಳಮ್ಮ, ಖಾಸೀಂ ಉಪಸ್ಥಿತರಿದ್ದರು. ತಾಲೂಕಿನ ವಿವಿಧೆಡೆಯ ಕಾರ್ಮಿಕರು ಭಾಗವಹಿಸಿದ್ದರು.

ಕೊಡಗಿನಲ್ಲಿ ಗಾಳಿ–ಮಳೆ; ಅಪಾರ ಹಾನಿ

ಮಡಿಕೇರಿ,ಮೇ 2–ಕೊಡಗು ಜಿಲ್ಲೆಯ ಹಲವೆಡೆ ಭಾನುವಾರ ಸಂಜೆ ಗಾಳಿ ಸಹಿತ ಧಾರಾಕಾರ ಮಳೆಯಾಗಿದ್ದು, ಅಪಾರ ಹಾನಿಯಾಗಿದೆ. ದಕ್ಷಿಣ ಕೊಡಗಿನ ಗೋಣಿಕೊಪ್ಪ, ಸಿದ್ದಾಪುರ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಉತ್ತಮ ಮಳೆಯಾಗಿದೆ. ಗೋಣಿಕೊಪ್ಪದಲ್ಲಿ ಮಳೆಯ ಆರ್ಭಟಕ್ಕೆ ಅಂಗಡಿ–ಮುಂಗಟ್ಟುಗಳ ನಾಮಫಲಕಗಳು ನೆಲಕ್ಕುರುಳಿದ್ದು, ಮಾರಾಟಕ್ಕಿಟ್ಟ ವಸ್ತುಗಳು ರಸ್ತೆ ಪಾಲಾಗಿವೆ. ಮನೆಗಳ ಹೆಂಚು, ಮೇಲ್ಛಾವಣಿ ಹಾರಿ ಹೋಗಿದ್ದು, ನಷ್ಟ ಸಂಭವಿಸಿದೆ. ಸಂತೆ ದಿನವಾದ ಭಾನುವಾರ ದಿಢೀರ್ ಆಗಿ ಗಾಳಿ ಮಳೆಯಾದ ಕಾರಣ ಸಂತೆ–ವ್ಯಾಪಾರಿಗಳು ಅಪಾರ ನಷ್ಟ ಅನುಭವಿಸಿದರು. ಸಿಡಿಲಬ್ಬರಕ್ಕೆ ಜನ ಆತಂಕಗೊಂಡರು. ವಿದ್ಯುತ್ ಕಂಬಗಳು ಕೂಡ ನೆಲಕ್ಕುರುಳಿದ್ದಿದ್ದು, ಪಟ್ಟಣ ಮತ್ತು ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಿದೆ.

ಧರೆಗುರುಳಿದ ಮರಗಳು: ಕೊಡಗಿನ ಗಡಿಭಾಗ ಬೈಲುಕೊಪ್ಪದಲ್ಲಿ ಸುರಿದ ಗಾಳಿ ಮಳೆಗೆ ತೆಂಗಿನ ಮರ ಸೇರಿದಂತೆ ಇತರ ಮರಗಳು ಧರೆಗುರುಳಿವೆ. ಹೆದ್ದಾರಿಯಲ್ಲಿ ಸಂಚರಿಸುತ್ತಿದ್ದ ಲಾರಿಯ ಮೇಲೆ ತೆಂಗಿನಮರ ಬಿದ್ದು ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಯಿತು. ಮರಗಳು ವಿದ್ಯುತ್ ಕಂಬಗಳ ಮೇಲೆ ಬಿದ್ದು ಹಾನಿಯಾಗಿದೆ.



ಮೈಸೂರು ಮಿತ್ರ ಮಂಗಳವಾರ 3 ಮೇ 2022

ಮೂರನೇ ಪುಟದಿಂದ

ಕಾಂಗ್ರೆಸ್ ಗಂಭೀರ ಆರೋಪ

ಎಂಬ ಮಾಹಿತಿ ಇದೆ. ಯಾರು ಕರೆ ಮಾಡಿದರು, ಅವರ ಪಾತ್ರ ಏನು ಎಂಬುದರ ಬಗ್ಗೆ ತನಿಖೆ ನಡೆಸಲಿ ಎಂದರು. ಸಿಐಡಿ ಅಧಿಕಾರಿಗಳು ಪಿಎಸ್ಐ ಪರೀಕ್ಷೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಹಳ್ಳಿಗಳಿಗೆ ಹೋಗಿದ್ದಾರಾ ಎಂದು ಪ್ರಶ್ನಿಸಿದ ಅವರು, ಹಾಗೇ ಅಧಿಕಾರಿಗಳು ಹಳ್ಳಿಗಳಿಗೆ ಹೋಗಿದ್ದರೆ, ಅಭ್ಯರ್ಥಿಗಳು ಎಷ್ಟು ದುಡ್ಡು ಕೊಟ್ಟಿದ್ದಾರೆ ಎಂಬುವನ್ನು ಕಲೆ ಹಾಕಬಹುದಿತ್ತು ಎಂದು ಹೇಳಿದರು.

ಡಿಕೆಶಿ ಅವರ ಈ ಹೇಳಿಕೆ ಸುದ್ದಿವಾಹಿನಿಗಳಲ್ಲಿ ಪ್ರಸಾರವಾಗುತ್ತಲೇ ಅದಕ್ಕೆ ಸಚಿವ ಅಶ್ವತ್ಥನಾರಾಯಣ ತಿರುಗೇಟು ನೀಡಿದಾಗ ಮತ್ತೆ ಸುದ್ದಿಗಾರರ ಜೊತೆ ಮಾತನಾಡಿದ ಡಿಕೆಶಿ, ನಾನು ಯಾವ ಸಚಿವರ ಹೆಸರನ್ನೂ ಹೇಳಿಲ್ಲ. ಹಾಗಿರುವಾಗ ಕುಂಬಳಕಾಯಿ ಕಳ್ಳ ಎಂದರೆ ಇವರು ಯಾಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತಿದ್ದಾರೆ ಎಂದು ಪ್ರಶ್ನಿಸಿದರು. ಮುಖ್ಯಮಂತ್ರಿಗಳ ಮುಂದೆಯೇ ರಾಮನಗರದಲ್ಲಿ ಯಾರು ಗಂಡಸರು ಇದ್ದಾರೆ ಎಂದು ಕೇಳಿದ್ದರು. ನಾವು ಜೋರಾಗಿ ಅಧಿಕಾರ ಚಲಾಯಿಸಿದರೆ ಡಿ.ಕೆ.ಶಿವಕುಮಾರ್ ಉಸಿರು ನಿಂತು ಹೋಗುತ್ತದೆ ಎಂದು ಮುಖ್ಯಮಂತ್ರಿಗಳ ಹೇಳಿದ್ದರೆ, ರಾಮನಗರದಲ್ಲಿ ಅವರೊಬ್ಬರೇ ಗಂಡಸರು. ನಾವೆಲ್ಲಾ ಹೆಂಗಸರು. ನಾನು, ನನ್ನ ತಮ್ಮ ಅನಿತಾ ಕುಮಾರಸ್ವಾಮಿ ಎಲ್ಲರೂ ಅವರ ಗಂಡಸ್ತನ ನೋಡಿ ಗಢಗಢ ನಡುಗುತ್ತಿದ್ದೇವೆ ಎಂದು ಡಿಕೆಶಿ ಹೇಳಿದರು. ಅದೇ ವೇಳೆ ಈ ಹಗರಣದಲ್ಲಿ ಪ್ರಭಾವಿ ಸಚಿವರ ಕುಟುಂಬಸ್ಥರು ಹಾಗೂ ಸಂಬಂಧಿಕರು ಭಾಗಿಯಾಗಿದ್ದಾರೆ. ಸಿಎಂ ಮುಲಾಜಿಲ್ಲದೇ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸಿಐಡಿ ಎದುರು ಮತ್ತಿಬ್ಬರು ಶರಣಾಗತಿ

ಮಂಜುನಾಥ್, ಏಕಾಏಕಿ ಸಿಐಡಿ ಅಧಿಕಾರಿಗಳ ಮುಂದೆ ಹಾಜರಾಗಿದ್ದು ಅಚ್ಚರಿ ಮೂಡಿಸಿದೆ. ಮಂಜುನಾಥ ಸೇರಿದಂತೆ ಮುಖ್ಯಶಿಕ್ಷಕ ಕಾಶಿನಾಥ, ಮಹಿಳಾ ಅಭ್ಯರ್ಥಿ ಶಾಂತಾಬಾಯಿ ಹಾಗೂ ಒಬ್ಬ ಶಿಕ್ಷಕ ವಿರುದ್ಧ ನ್ಯಾಯಾಲಯ ಬಂಧನ ವಾರಂಟ್ ಕೂಡ ಹೊರಡಿಸಿತ್ತು. ಅಲ್ಲದೆ ಪ್ರಕರಣದ ಮತ್ತೊರ್ವ ಪ್ರಮುಖ ಆರೋಪಿ ದಿವ್ಯಾ ಹಾಗರಗಿಯನ್ನು ಕೂಡ ಅಧಿಕಾರಿಗಳು ಬಂಧಿಸಿದ್ದಾರೆ.

ಮತ್ತೊರ್ವ ಆರೋಪಿ ಪೊಲೀಸರಿಗೆ ಶರಣು: ರಾಜ್ಯಾದ್ಯಂತ ವ್ಯಾಪಕ ಸುದ್ದಿಗೆ ಗ್ರಾಸವಾಗಿರುವ ಪಿಎಸ್ಐ ಪರೀಕ್ಷೆಯ ನೇಮಕಾತಿ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊರ್ವ ಪ್ರಮುಖ ಆರೋಪಿಯ ಬಂಧನವಾಗಿದ್ದು, ಅಕ್ರಮ ನಡೆದ ಜ್ಞಾನಜ್ಯೋತಿ ಶಾಲೆಯ ಮುಖ್ಯೋಪಾಧ್ಯಾಯ ಕಾಶಿನಾಥ್ ಸೋಮವಾರ ಪೊಲೀಸರಿಗೆ ಶರಣಾಗಿದ್ದಾರೆ ಎಂದು ತಿಳಿದುಬಂದಿದೆ. ಕಳೆದ 22 ದಿನಗಳಿಂದ ತಲೆಮರೆಸಿಕೊಂಡಿದ್ದ ಕಾಶಿನಾಥ್, ಸೋಮವಾರ ಬೆಳಗ್ಗೆ 8.30ರ ಸುಮಾರಿಗೆ ಸಿಐಡಿ ತಂಡದ ಎದುರಿಗೆ ಶರಣಾಗಿದ್ದು, ಆ ಮೂಲಕ ಶಾಲೆಯಲ್ಲಿನ ಅಕ್ರಮಕ್ಕೆ ಸಂಬಂಧಿಸಿದ ಬಹುತೇಕರು ಈಗ ಬಂಧನವಾದಂತಾಗಿದೆ. ಈ ಮೂಲಕ ಈ ಪಿಎಸ್ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 26ಕ್ಕೆ ಏರಿದಂತಾಗಿದೆ. ಜ್ಞಾನಜ್ಯೋತಿ ಶಾಲೆಯ ಮುಖ್ಯೋಪಾಧ್ಯಾಯ ಕಾಶಿನಾಥ್‌ಮೂಲಗಳ ಪ್ರಕಾರ ಒಎಂಆರ್ ಶೀಟ್ ತಿದ್ದುಪಡಿ ಹಾಗೂ ಬ್ಲೂಟೂತ್ ಬಳಕೆಯಲ್ಲಿ ಶಾಲೆಯ ಮುಖ್ಯೋಪಾಧ್ಯಾಯ ಕಾಶಿನಾಥ್ ಪ್ರಮುಖ ಪಾತ್ರ ವಹಿಸಿದ್ದ ಎನ್ನಲಾಗಿದೆ. ಜ್ಞಾನಜ್ಯೋತಿ ಶಾಲೆಯ ಮುಖ್ಯಸ್ಥೆ ಹಾಗೂ ಬಿಜೆಪಿ ನಾಯಕಿ ದಿವ್ಯಾ ಹಾಗರಗಿ ಅಕ್ರಮದಲ್ಲಿ ಶಾಲೆಯ ಮುಖ್ಯ ಗುರು ಕಾಶಿನಾಥ್ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಸಿಐಡಿ ತಂಡದ ಎದುರು ಹೇಳಿದ್ದರಿಂದ ಕಾಶಿನಾಥ್ ಶರಣಾಗತಿ ಅತ್ಯಂತ ಮಹತ್ವ ಪಾತ್ರ ವಹಿಸಿದೆ.

ಬಂಧಿತರು ಟಾಪ್ 45 ರ್‍ಯಾಂಕ್ ಒಳಗಡೆಯವರು: ಪೊಲೀಸ್ ಇಲಾಖೆಯಲ್ಲಿ ಟಾಪರ್ಸ್‌ಗಳಿಗೆ ಬೇಗ ಬಡ್ತಿ ಸಿಗುತ್ತದೆ. ಈ ಆಸೆಗೆ ಬಿದ್ದು ಪಿಎಸ್ಐ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಅಕ್ರಮ ಎಸಗಿರುವ ಅನುಮಾನ ಬಂದಿದೆ. ಬಂಧಿತ ಆರೋಪಿಗಳೆಲ್ಲರೂ ಪಿಎಸ್ಐ ಪರೀಕ್ಷೆಯಲ್ಲಿ ಟಾಪರ್ಸ್ ಆಗಿದ್ದಾರೆ. ಇಲಾಖೆಯಲ್ಲಿ ಪ್ರಥಮವಾಗಿ 50 ಜನರಿಗೆ ಬಡ್ತಿ ಸಿಗುತ್ತದೆ. ಬಂಧಿತ ಆರೋಪಿಗಳೆಲ್ಲರೂ ಟಾಪ್ 45 ರ್‍ಯಾಂಕ್ ಒಳಗಡೆ ಇದ್ದಾರೆ.

ಬ್ರಿಡ್ಜ್ ಕೋರ್ಸ್‌ಗೆ ಪ್ರವೇಶಾವಕಾಶ

ವಿದ್ಯಾಭ್ಯಾಸ ಬಿಟ್ಟು, ಸ್ವದೇಶಕ್ಕೆ ವಾಪಸ್ಸಾಗಿರುವ ಭಾರತೀಯ ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದೆಂದು ಆರಂಭಿಸಿರುವ ಸೇತುಬಂಧ ಕೋರ್ಸ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಪ್ರಕಟಣೆ ಹೊರ ಬೀಳುತ್ತಿದ್ದಂತೆ ವಿದ್ಯಾರ್ಥಿಗಳು ಕೋರ್ಸ್ ಸೇರ್ಪಡೆಗೆ ಭಾರೀ ಆಸಕ್ತಿ ತೋರುತ್ತಿದ್ದಾರೆ. ದಾಖಲಾದ ವಿದ್ಯಾರ್ಥಿಗಳಿಗೆ ಅವರು ಯಾವ ಸೆಮಿಸ್ಟರ್ ಅಥವಾ ವರ್ಷದ ವೈದ್ಯಕೀನ ಕೋರ್ಸ್ ವ್ಯಾಸಂಗ ಮಾಡುತ್ತಿದ್ದರೋ ಅದರ ಆಧಾರದ ಮೇಲೆ ತರಬೇತಿ ನೀಡಲಾಗುತ್ತದೆ ಎಂದರು.

ಈ ಕೋರ್ಸ್‌ನಲ್ಲಿ ಪ್ರಾಯೋಗಿಕ ಹಾಗೂ ಭೌತಿಕ ತರಗತಿ ನಡೆಸಲಾಗುವುದು. ಕ್ಲಿನಿಕಲ್ ಅಧ್ಯಯನಕ್ಕೂ ಅವಕಾಶ ನೀಡಲಾಗುವುದು. ಆದರೆ, ರೋಗಿಗೆ ಚಿಕಿತ್ಸೆ ನೀಡುವ, ಶಸ್ತ್ರಚಿಕಿತ್ಸೆ ಮಾಡುವ ಅವಕಾಶ ಇರುವುದಿಲ್ಲ. ಸ್ಥಳದಲ್ಲಿ ಇದ್ದು ಪ್ರಕ್ರಿಯೆಗಳನ್ನು ವೀಕ್ಷಿಸಬಹುದಷ್ಟೇ. ಕೋರ್ಸ್ ಸಂಪೂರ್ಣ ಉಚಿತವಾಗಿದೆ. ಆದರೆ, ಊಟ ಮತ್ತು ವಸತಿ ಸೌಕರ್ಯವನ್ನು ವಿದ್ಯಾರ್ಥಿಗಳೇ ಮಾಡಿಕೊಳ್ಳಬೇಕು. ತರಬೇತಿ ಕುರಿತು ಪ್ರಮಾಣಪತ್ರ ನೀಡುವುದಿಲ್ಲ. ಬೇಕೇ ಬೇಕು ಎನ್ನುವವರಿಗೆ ಮಾತ್ರ ಪ್ರಮಾಣಪತ್ರ ನೀಡಲಾಗುವುದು. ಈ ಪತ್ರವನ್ನು ಪರಿಗಣಿಸುವುದು, ಬಿಡುವುದು ಆಯಾ ವಿಶ್ವ ವಿದ್ಯಾನಿಲಯಗಳಿಗೆ ಬಿಟ್ಟ ವಿಚಾರ ಎಂದರು.

ಜೆಎಸ್‌ಎಸ್ ತಾಂತ್ರಿಕ ಮತ್ತು ವಿಜ್ಞಾನ ಕಾಲೇಜಿನ ಕುಲಸಚಿವ ಡಾ.ಬಿ.ಸುರೇಶ್ ಮಾತನಾಡಿ, ವಿದೇಶದ ಕೆಲವೊಂದು ವಿಶ್ವ ವಿದ್ಯಾಲಯಗಳು ಆನ್‌ಲೈನ್ ಮೂಲಕ ಪಾಠ ಮಾಡುತ್ತಿವೆ. ಆದರೆ, ವೈದ್ಯಕೀಯ ಶಿಕ್ಷಣದಲ್ಲಿ ಪ್ರಾಯೋಗಿಕತೆಗೆ ಹೆಚ್ಚಿನ ಆದ್ಯತೆ ಇರುವುದರಿಂದ ಸೇತುಬಂಧ ಕೋರ್ಸ್ ಆರಂಭಿಸಲಾಗಿದೆ. ಕರ್ನಾಟಕ ಮಾತ್ರವಲ್ಲದೆ ದೇಶದ ಎಲ್ಲಾ ರಾಜ್ಯದ ವಿದ್ಯಾರ್ಥಿಗಳಿಗೂ ಈ ಸೌಲಭ್ಯ ನೀಡಲಾಗುವುದು. ಪ್ರತ್ಯೇಕ ತರಗತಿ ನಡೆಸಲಾಗುವುದು. ಇದು ನಮಗೆ ದೊಡ್ಡ ಸವಾಲಿನ ಜೊತೆಗೆ ಕಷ್ಟದ ಕೆಲಸವೂ ಆಗಿದೆ. ಆದರೂ ನಾವು ಹೆಚ್ಚಿನ ಜವಾಬ್ದಾರಿಯಿಂದ ಈ ಸೌಲಭ್ಯ ಕಲ್ಪಿಸುತ್ತೇವೆ. ನಮ್ಮ ದೇಶದಲ್ಲೇ ಅವರು ಶಿಕ್ಷಣ ಮುಂದುವರಿಸುವ ಕುರಿತು ಸರ್ಕಾರ ಸೂಕ್ತ ತೀರ್ಮಾನ ಕೈಗೊಳ್ಳಬೇಕಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಕುಲಪತಿ ಡಾ.ಸುರೇಂದ್ರ ಸಿಂಗ್, ಜೆಎಸ್‌ಎಸ್ ಎಎಚ್‌ಇಆರ್ ಕುಲಸಚಿವ ಡಾ.ಬಿ. ಮಂಜುನಾಥ್, ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಬಸವನಗೌಡಪ್ಪ, ಕಾರ್ಯಕ್ರಮದ ನೋಡಲ್ ಅಧಿಕಾರಿ ಡಾ.ಡಿ.ಸುನೀಲ್‌ಕುಮಾರ್ ಉಪಸ್ಥಿತರಿದ್ದರು.

ನಾಯಕತ್ವ ಬದಲಾವಣೆ ಇಲ್ಲ

ಆಗಮಿಸುತ್ತಿದ್ದಾರೆ. ನಾನು ಅವರನ್ನು ಭೇಟಿ ಮಾಡುತ್ತೇನೆ, ಅವರು ರಾಜ್ಯದ ರಾಜಕೀಯ ಪರಿಸ್ಥಿತಿಯ ಬಗ್ಗೆ ತಿಳಿದುಕೊಳ್ಳಲಿದ್ದಾರೆ. ಮುಂದೆ ವಿಧಾನಸಭೆ ಚುನಾವಣೆ ಇರುವ ಕಾರಣ, ಪ್ರಧಾನಿ ಮತ್ತು ಅಮಿತ್ ಶಾ ಅವರು ಕರ್ನಾಟಕಕ್ಕೆ ಹೆಚ್ಚಿನ ಆದ್ಯತೆ ನೀಡಲು ನಿರ್ಧರಿಸಿದ್ದಾರೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ನಾವು ನಿಗದಿಪಡಿಸಿರುವ 150 ಸ್ಥಾನಗಳ ಗುರಿ ತಲುಪಲು ಸಲಹೆ ನೀಡಲಿದ್ದಾರೆ ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ. ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಊಹಾಪೋಹಗಳ ಕುರಿತು ವರದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮಾಜಿ ಸಿಎಂ, ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉತ್ತಮ ಕೆಲಸ ಮಾಡುತ್ತಿದ್ದು, ನನ್ನ ಪ್ರಕಾರ ನಾಯಕತ್ವ ಬದಲಾವಣೆ ಆಗುವುದಿಲ್ಲ ಎಂದು ಯಡಿಯೂರಪ್ಪ ಹೇಳಿದರು.

ಸೆಮಿಕಂಡಕ್ಟರ್ ಘಟಕ ಸ್ಥಾಪನೆ

ನಿಲ್ದಾಣದ ವಿಸ್ತರಣೆ, ಮೈಸೂರು-ಬೆಂಗಳೂರು ದಶಪಥ ಹೆದ್ದಾರಿ ನಿರ್ಮಾಣ, ಜೋಡಿ ರೈಲು ಹಳಿ ಮಾರ್ಗದಂತಹ ಉತ್ತಮ ಸಂಪರ್ಕ ವ್ಯವಸ್ಥೆಯು ಇಲ್ಲಿನ ಕೈಗಾರಿಕೋದ್ಯಮದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.

ಕೈಗಾರಿಕಾ ಚಿತ್ರಣವೇ ಬದಲು: ಸೆಮಿಕಂಡಕ್ಟರ್ ಫ್ಯಾಬ್ ಯೂನಿಟ್ ಬರುತ್ತಿರುವುದರಿಂದ ಮೈಸೂರಿನ ಉದ್ಯಮ ಕ್ಷೇತ್ರದ ರೂಪುರೇಷೆಯೇ ಬದಲಾಗಲಿದೆ ಎಂದು ಸಿಐಐಎಲ್ ರಾಜ್ಯ ಘಟಕದ ಅಧ್ಯಕ್ಷ ಅರ್ಜುನ್ ರಂಗ ಅಭಿಪ್ರಾಯಿಸಿದ್ದಾರೆ. ಪ್ರಧಾನಿ ಮೋದಿ ಹಾಗೂ ಮುಖ್ಯಮಂತ್ರಿ ಬೊಮ್ಮಾಯಿ ನೇತೃತ್ವದಲ್ಲಿ ಮೈಸೂರಿಗೆ ಇಂತಹ ದೊಂದು ಬೃಹತ್ ಫ್ಯಾಬ್ ಕಂಪನಿ ಬರುತ್ತಿರುವುದು ಉತ್ತಮ ಬೆಳವಣಿಗೆಯಾಗಿದ್ದು, ಇಲ್ಲಿನ ಸಮಗ್ರ ಅಭಿವೃದ್ಧಿಯಾಗಲಿದೆ. ಕೆಲವೇ ದೇಶಗಳು ಮಾತ್ರ ಇಂತಹ ಬೃಹತ್ ಪ್ರಮಾಣದ ಸೆಮಿಕಂಡಕ್ಟರ್ ಉತ್ಪಾದನಾ ಘಟಕ ಹೊಂದಿದ್ದು, ಮೈಸೂರಲ್ಲೇ ಈ ಘಟಕ ಸ್ಥಾಪಿಸುತ್ತಿರುವುದು ಉದ್ಯೋಗ ಸೃಷ್ಟಿ ಮತ್ತು ಕೈಗಾರಿಕೋದ್ಯಮಕ್ಕೆ ಅನುಕೂಲ ವಾಗಲಿದೆ ಎಂದರು.

ಮೈಸೂರು ಕೈಗಾರಿಕಾ ಹಬ್: ಪ್ರಧಾನಮಂತ್ರಿಗಳ ಆತ್ಮ ನಿರ್ಭರ ಭಾರತದ ಕನಸಿನ ಯೋಜನೆಯಲ್ಲಿ ಒಂದಾದ ಸೆಮಿ ಕಂಡಕ್ಟರ್ ಪ್ಲಾಂಟ್, ಮೈಸೂರು ಕೈಗಾರಿಕೆಗಳ ಹಬ್ ಎಂಬುದಕ್ಕೆ ಸಾಕ್ಷಿಯಾಗಲಿದೆ ಎಂದು ಸಿಐಐ ಮೈಸೂರು ವಲಯದ ಅಧ್ಯಕ್ಷ ಸುಪ್ರಿಯಾ ಸಾಲಿಯಾನ್ ಅಭಿಪ್ರಾಯ ಪಟ್ಟಿದ್ದಾರೆ. ಕರ್ನಾಟಕ ಡಿಜಿಟಲ್ ಎಕಾನಮಿ ಮತ್ತು ಬಿಯಾಂಡ್ ಬೆಂಗಳೂರು ಯೋಜನೆ ಆರಂಭಿಸಿರುವ ರಾಜ್ಯ ಸರ್ಕಾರವು ಮೈಸೂರಿನ ಕೈಗಾರಿಕಾಭಿವೃದ್ಧಿಗೆ ಪೂರಕವಾಗಿ ಸ್ಪಂದಿಸುತ್ತಿರುವುದರಿಂದ ಬಂಡವಾಳ ಹೂಡಲು ಹೊರಗಿನ ಕೈಗಾರಿಕೋದ್ಯಮಿಗಳು ರಾಜ್ಯಕ್ಕೆ ಬರುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದು ನುಡಿದರು.

ಆರ್ಥಿಕ ಅಭಿವೃದ್ಧಿ: ಮೈಸೂರಿಗೆ ಐಎಸ್‌ಎಂಸಿ ಸೆಮಿಕಂಡಕ್ಟರ್ ಫ್ಯಾಬ್ ತರುತ್ತಿರುವುದು ಸಂತಸ ತಂದಿದೆ. ಅದರಿಂದ ಇಲ್ಲಿನ ಆರ್ಥಿಕ ಅಭಿವೃದ್ಧಿಯಾಗಲಿದೆ ಎಂದು ಮೈಸೂರಿನ ರಾಜ ವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ.

ಅಪಾರ ಕೈಗಾರಿಕಾ ಪರಂಪರೆಯನ್ನು ಹೊಂದಿರುವ ಮೈಸೂರಿನಲ್ಲಿ ಇಂತಹ ಘಟಕ ಸ್ಥಾಪಿಸುತ್ತಿರುವುದರಿಂದ ಮೈಸೂರಿನ ಸಮಗ್ರ ಆರ್ಥಿಕ ಅಭಿವೃದ್ಧಿ ಜೊತೆಗೆ ರಾಜ್ಯ ಮತ್ತು ರಾಷ್ಟ್ರದ ಸಮಗ್ರ ಅಭಿವೃದ್ಧಿಗೂ ನೆರವಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಉದ್ಯೋಗ ಸೃಷ್ಟಿ: ಸೆಮಿಕಂಡಕ್ಟರ್ ಉತ್ಪಾದನಾ ಘಟಕದಿಂದಾಗಿ ಉದ್ಯೋಗ ಸೃಷ್ಟಿಯ ಜೊತೆಗೆ ಅಪಾರ ಪ್ರಮಾಣದ ತೆರಿಗೆಯೂ ಸಂಗ್ರಹವಾಗುತ್ತದೆ ಎಂದು ಮೈಸೂರು ಕೈಗಾರಿಕೆಗಳ ಘಟಕದ ಸಂಘಟನಾ ಕಾರ್ಯದರ್ಶಿ ಸುರೇಶ್‌ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಸ್ವರೂಪವೇ ಬದಲು: ಸುಮಾರು 22,900 ಕೋಟಿ ರೂ. ಬಂಡವಾಳದೊಂದಿಗೆ ಈ ಉದ್ಯಮ ಸ್ಥಾಪನೆಯಾದಲ್ಲಿ ಮೈಸೂರು ಭಾಗದ ಕೈಗಾರಿಕಾ ಸ್ವರೂಪವೇ ಬದಲಾಗಲಿದೆ. ಈ ಹಿಂದೆಯೇ ಈ ಪ್ರಸ್ತಾವನೆ ಇತ್ತು. ಈಗ ಅದು ಸಾಕಾರಗೊಳ್ಳುತ್ತಿರುವುದು ಸಂತಸದ ವಿಷಯ ಎಂದು ಎಂಸಿಸಿಐ ಅಧ್ಯಕ್ಷ ಕೆ.ಬಿ.ಲಿಂಗರಾಜು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಲ್ಲಿ ಕಾರ್ಮಿಕರ ದಿನಾಚರಣೆ

ಕೇಂದ್ರ ಸರ್ಕಾರ ಕಾರ್ಮಿಕ ಹಕ್ಕುಗಳನ್ನು ಮೊಟಕುಗೊಳಿಸುತ್ತಿದೆ

ಲೇಖಕ ನಾ. ದಿವಾಕರ್ ಆರೋಪ



ಮೈಸೂರು,ಮೇ 2(ಎಂಟಿವೈ)- ಕೇಂದ್ರ ಸರ್ಕಾರ ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸಿ, ಅವರನ್ನು ಹತ್ತಿಕ್ಕುವ ನಿಯಮಗಳನ್ನು ಜಾರಿಗೊಳಿಸುವುದರೊಂದಿಗೆ ಬಂಡವಾಳ ಶಾಹಿಗಳಿಗಷ್ಟೇ ಮಣೆ ಹಾಕುತ್ತಿದೆ ಎಂದು ಲೇಖಕ ನಾ. ದಿವಾಕರ್ ಆರೋಪಿಸಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಭಾನುವಾರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ಆಯೋಜಿಸಿದ್ದ ಕಾರ್ಮಿಕ ದಿನಾಚರಣೆಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಕಾರ್ಮಿಕರ ಹಿತ ಕಾಯುವ ನೀತಿ, ನಿಯಮ ಜಾರಿಗೊಳಿಸಲು ಸಂಪೂರ್ಣವಾಗಿ ವಿಫಲವಾಗಿದೆ. ಕಳೆದ 8 ವರ್ಷಗಳಿಂದಲೂ ಕಾರ್ಮಿಕರ ಹಿತ ಬಯಸುವ ಒಂದೇ ನಿಯಮವನ್ನು ಜಾರಿಗೊಳಿಸಿಲ್ಲ. ಕಾರ್ಮಿಕ ವಿರೋಧಿ ನೀತಿಗಳಿಗೆ ಹೆಚ್ಚು ಮಹತ್ವ ನೀಡಿ ಕಾರ್ಮಿಕರನ್ನು ಮತ್ತಷ್ಟು ಶೋಷಣೆ ಮಾಡುತ್ತಿದೆ. ಕೇಂದ್ರ ಸರ್ಕಾರ ಜಾರಿಗೆ ತರುತ್ತಿರುವ ಹೊಸ ಕಾನೂನು, ಯೋಜನೆ ಹಾಗೂ ನಿಯಮಗಳು ಬಂಡವಾಳಶಾಹಿಗಳ ಹಿತ ಕಾಯುವುದಕ್ಕೆ ಸೀಮಿತವಾಗಿದೆ. ಕೇಂದ್ರ ಸರ್ಕಾರ ಜಾರಿ ಮಾಡುತ್ತಿರುವ ಹೊಸ ನೀತಿ ಮತ್ತು ಯೋಜನೆಗಳಿಂದ ಇಂದು ಬ್ಯಾಂಕಿಂಗ್, ಕೃಷಿ, ರೈಲ್ವೆ, ಶಿಕ್ಷಣ ಸೇರಿದಂತೆ ಎಲ್ಲಾ ಕ್ಷೇತ್ರಗಳೂ ಖಾಸಗೀಕರಣದತ್ತ ದೂಡುವ ಹುನ್ನಾರದಿಂದ ಕೂಡಿವೆ. ಇದರಿಂದ ಕಾರ್ಮಿಕರು ಮತ್ತಷ್ಟು ಶೋಷಣೆ ಅನುಭವಿಸಬೇಕಾಗುತ್ತದೆ ಎಂದು ವಿಷಾದಿಸಿದರು.

ಈಗಾಗಲೇ ಸರ್ಕಾರಿ ಶಾಲಾ-ಕಾಲೇಜುಗಳಲ್ಲಿ ಅತಿಥಿ ಶಿಕ್ಷಕ, ಅತಿಥಿ ಉಪನ್ಯಾಸಕರ ಹೆಸರಿನಲ್ಲಿ ಶೋಷಣೆ ಮಾಡಲಾಗುತ್ತಿದೆ. ಹೊಸ ಶಿಕ್ಷಣ ನೀತಿ ಜಾರಿಯಿಂದ ಈ ಪದ್ಧತಿ ಶೈಕ್ಷಣಿಕ ಕ್ಷೇತ್ರದಲ್ಲಿ ವ್ಯಾಪಕವಾಗಲಿದೆ. ಇದರಿಂದ ಶಿಕ್ಷಕರು ಮತ್ತು ಉಪನ್ಯಾಸಕರು ಹೊಸ ಬಗೆಯ ಶೋಷಣೆಯನ್ನು ಅನುಭವಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಎಲ್ಲರೂ ಸಂಘಟಿತರಾಗಿ ಒಟ್ಟಾಗಿ ಹೋರಾಟ ನಡೆಸಬೇಕು. ಕಾರ್ಮಿಕ ದಿನಾಚರಣೆಯನ್ನು ಮೇ 1ಕ್ಕೆ ಸೀಮಿತಗೊಳಿಸದೇ ನಿತ್ಯ ಹೋರಾಟ ನಡೆಸುವ ಮೂಲಕ ಸಮ ಸಮಾಜ ನಿರ್ಮಾಣ ಮಾಡುವತ್ತ ಹೆಜ್ಜೆ ಇಡಬೇಕು ಎಂದು ಸಲಹೆ ನೀಡಿದರು.

ಎಐಯುಟಿಯುಸಿ ರಾಜ್ಯಾಧ್ಯಕ್ಷ ಕೆ. ಸೋಮಶೇಖರ್ ಮಾತನಾಡಿ, ದೇಶದ ಎಲ್ಲಾ ರಾಜಕೀಯ ಪಕ್ಷಗಳು ಬಂಡವಾಳಶಾಹಿಗಳ ಪರವಾಗಿವೆ. ಸರ್ಕಾರಗಳಿಗೆ ಬಂಡವಾಳ ಶಾಹಿಗಳ ಹಿತಾಸಕ್ತಿ ಮುಖ್ಯವೇ ಹೊರತು ಕಾರ್ಮಿಕರ ಹಕ್ಕುಗಳಲ್ಲ. ಸಂಘಟಿತ ಮತ್ತು ಗುತ್ತಿಗೆ ಕಾರ್ಮಿಕರ ಸ್ಥಿತಿ ಇಂದು ಹೀನಾಯವಾಗಿದೆ ಇದರ ವಿರುದ್ಧ ಎಲ್ಲರೂ ಒಟ್ಟುಗೂಡಿ ದನಿ ಎತ್ತಬೇಕು ಎಂದು ಸೂಚಿಸಿದರು.

ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್.ಆರ್. ಶೇಷಾದ್ರಿ ಮಾತನಾಡಿ, ದುಡಿಯುವ ವರ್ಗದಿಂದ ಮಾತ್ರ ಶೋಷಣೆ ಮುಕ್ತ ಸಮಾಜ ನಿರ್ಮಾಣ ಮಾಡಲು ಸಾಧ್ಯವೇ ಹೊರತು ಬಂಡವಾಳಶಾಹಿ ವ್ಯವಸ್ಥೆಯಿಂದ ಅಲ್ಲ. ಈ ನಿಟ್ಟಿನಲ್ಲಿ ಸಮಾಜವಾದಿ ಸಮಾಜ ನಿರ್ಮಾಣಕ್ಕೆ ಕಾರ್ಮಿಕ ವರ್ಗ ಶ್ರಮಪಡಬೇಕು. ಗುತ್ತಿಗೆ ನೌಕರರು, ವಲಸಿಗ ಕಾರ್ಮಿಕರು ಹೆಚ್ಚಾಗುತ್ತಿದ್ದು, ಖಾಯಂ ನೌಕರರ ಸಂಖ್ಯೆ ಕ್ಷೀಣಿಸುತ್ತಿದೆ. ಇತ್ತ ಕಾರ್ಮಿಕ ಸಂಘಟನೆಗಳು ಖಾಯಂ ನೌಕರರ ಕಡೆಗೆ ಮಾತ್ರ ಹೆಚ್ಚು ಒತ್ತು ನೀಡುತ್ತಿದ್ದು, ಗುತ್ತಿಗೆ ನೌಕರರನ್ನು ನಿರ್ಲಕ್ಷ್ಯ ಮಾಡುತ್ತಿದೆ. ಇದು ಕಾರ್ಮಿಕರ ಸಂಘಟನೆಗೆ ಕಷ್ಟವಾಗಲಿದೆ. ಕೇಂದ್ರದಲ್ಲಿ ಕಾರ್ಪೊರೇಟ್ ಸರ್ಕಾರ ಅಸ್ತಿತ್ವದಲ್ಲಿದ್ದು, ಅದಾನಿಯ 11 ಸಾವಿರ ಕೋಟಿ ರೂ. ಸಾಲವನ್ನು ಮನ್ನಾ ಮಾಡಿತು. ಆದರೆ ಕಾರ್ಮಿಕರ ಸಾಲವನ್ನು ಮನ್ನಾ ಮಾಡಲಿಲ್ಲ. ನಿತ್ಯ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಿದೆ. ಬೇಳೆ ಕಾಳು ಶೇ.56ರಷ್ಟು, ಅಡುಗೆ ಎಣ್ಣೆ ಶೇ.49ರಷ್ಟು ಹಾಗೂ ವಿದ್ಯುತ್ ಶೇ.66 ರಷ್ಟು ಹೆಚ್ಚಿದೆ. ಕಲ್ಲಿದ್ದಲು ಕೊರತೆಯಿಂದ ಅನೇಕ ರಾಜ್ಯಗಳಲ್ಲಿ 8ರಿಂದ 14 ಗಂಟೆ ವಿದ್ಯುತ್ ಕಡಿತವಾಗಲಿದೆ. ಇದರ ಪರಿಣಾಮ ನೇರ ಕಾರ್ಮಿಕರ ಮೇಲಾಗಲಿದೆ. ಇದಕ್ಕೆ ಉತ್ತರ ಕೊಡುವವರು ಯಾರು? ಎಂದು ಕಿಡಿಕಾರಿದರು.

ಸಭೆಯಲ್ಲಿ ಎಐಯುಟಿಯುಸಿ ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ ಮೇಟಿ, ಜೆಸಿಟಿಯು ಸಚಾಲಕ ದೇವದಾಸ್, ಸಿಟಿಯು ಸಂಚಾಲಕ ಬಾಲಾಜಿ, ಸಂಚಾಲಕರಾದ ಜಯಚಂದ್ರ, ಅನೀಲ್ ಕುಮಾರ್, ಬಾಲಕೃಷ್ಣ ಇದ್ದರು.

ಇದಕ್ಕೂ ಮುನ್ನ ನಗರದ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನದಿಂದ ವಿವಿಧ ಕಾರ್ಮಿಕ ಸಂಘಟನೆಗಳ ಸದಸ್ಯರು ಮಹಾರಾಜ ಕಾಲೇಜು ಆವರಣದವರೆಗೆ ಮೆರವಣಿಗೆ ನಡೆಸಿದರು. ಕಾರ್ಯಕ್ರಮದಲ್ಲಿ ಕಾರ್ಲ್ ಮಾರ್ಕ್ಸ್, ಲೆನಿನ್, ಸ್ಟಾಲಿನ್, ಮಾವೊ, ಭಗತ್ ಸಿಂಗ್ ಸೇರಿದಂತೆ ಅನೇಕರ 33ಕ್ಕೂ ಹೆಚ್ಚು ಸೂಕ್ತಿ ಛಾಯಾಚಿತ್ರ ಪ್ರದರ್ಶನ ಆಯೋಜಿಸಲಾಗಿತ್ತು.

ಮೈಸೂರಲ್ಲಿ ಗೋ ಗ್ರೀನ್, ಗೋ ಕ್ಲೀನ್ ಓಟ



ಮೈಸೂರು,ಮೇ 2(ಎಂಟಿವೈ)- ಕಾರ್ಮಿಕ ದಿನ ಹಾಗೂ ಪವರ್ ಸ್ಟಾರ್ ಡಾ.ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಮೈಸೂರಲ್ಲಿ ಭಾನುವಾರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯೋಜಿಸಿದ್ದ 'ಗೋ ಗ್ರೀನ್ ಗೋ ಕ್ಲೀನ್' ರಸ್ತೆ ಓಟದ ಸ್ಪರ್ಧೆಯಲ್ಲಿ ನೂರಾರು ಮಂದಿ ಪಾಲ್ಗೊಂಡು ಕ್ರೀಡಾಸ್ಫೂರ್ತಿ ಪ್ರದರ್ಶಿಸಿದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಕ್ರೀಡಾಂಗಣದ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಾನವ್ ಫೌಂಡೇಷನ್ ಮತ್ತು ಡೆಕಥ್ಲಾನ್ ಸಹಯೋಗದಲ್ಲಿ ಕಾರ್ಮಿಕ ದಿನಾಚರಣೆಯ ಅಂಗವಾಗಿ ದಿವಂಗತ ಡಾ. ಪುನೀತ್ ರಾಜ್‌ಕುಮಾರ್ ಅವರ ಸ್ಮರಣಾರ್ಥವಾಗಿ ಆಯೋಜಿಸಿದ್ದ 'ಗೋ ಗ್ರೀನ್ ಗೋ ಕ್ಲೀನ್' ರಸ್ತೆ ಓಟದ ಸ್ಪರ್ಧೆಗೆ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಚಾಲನೆ ನೀಡಿದ ಬಳಿಕ ಮಾತನಾಡಿ, ಸರ್ಕಾರ ಕ್ರೀಡೆಗೆ ಹೆಚ್ಚು ಉತ್ತೇಜನ ನೀಡುತ್ತಿರುವುದು ಒಳ್ಳೆ ಬೆಳವಣಿಗೆ. ಇತ್ತೀಚಿನ ದಿನಗಳಲ್ಲಿ ಕ್ರೀಡೆ ಬಹಳ ಮುಖ್ಯ ಪಾತ್ರ ವಹಿಸುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರೀಡೆಯ ಮಹತ್ವ ಅರಿತು ಅದನ್ನು ಉತ್ತೇಜಿಸುವ ನಿಟ್ಟಿನಲ್ಲಿ ಕ್ರೀಡೆಯಲ್ಲಿ ಸಾಧನೆ ಮಾಡಿರುವವರಿಗೆ ಗೌರವಯುತವಾದ ಉದ್ಯೋಗ ನೀಡುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ ಮುಂಬರುವ ದಿನಗಳಲ್ಲಿ ಕ್ರೀಡಾ ಚಟುವಟಿಕೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯುವಜನರು, ವಿದ್ಯಾರ್ಥಿಗಳು ತೊಡಗಿಸಿಕೊಳ್ಳಬೇಕು. ಕ್ರೀಡೆಯಲ್ಲಿ ಸಾಧನೆ ಮಾಡಿದವರಿಗೆ ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೌರವ ಪ್ರಾಪ್ತಿಯಾಗುತ್ತದೆ ಎಂದರು.

ಓಟದ ಮಾರ್ಗ: ಚಾಮುಂಡಿ ವಿಹಾರ ಕ್ರೀಡಾಂಗಣದಿಂದ ಆರಂಭವಾದ ರಸ್ತೆ ಓಟವು ಎಸ್ಪಿ ಕಚೇರಿ ವೃತ್ತ, ಹಾರ್ಡಿಂಜ್ ವೃತ್ತ, ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಮುಖಾಂತರ ಕೆ.ಆರ್. ವೃತ್ತ, ನಗರ ಪಾಲಿಕೆ, ಕೋಟೆ ಮಾರಮ್ಮನ ದೇವಸ್ಥಾನ, ಪೊಲೀಸ್ ಆಯುಕ್ತ ಕಚೇರಿ, ನಜರ್‌ಬಾದ್ ಪೊಲೀಸ್ ಠಾಣೆ ಮುಂಭಾಗದ ರಸ್ತೆ ಮೂಲಕ ಚಾಮುಂಡಿ ವಿಹಾರ ಕ್ರೀಡಾಂಗಣಕ್ಕೆ ತಲುಪಿತು. 5 ಕಿ.ಮೀ ದೂರದ ಓಟದ ಸ್ಪರ್ಧೆಯಲ್ಲಿ 16 ವರ್ಷದೊಳಗಿನ ಬಾಲಕ, ಬಾಲಕಿಯರು, 45 ವರ್ಷದೊಳಗಿನ ಪುರುಷ, ಮಹಿಳೆಯರು, 45 ವರ್ಷ ಮೇಲ್ಪಟ್ಟ ಪುರುಷರು ಹಾಗೂ ಮಹಿಳೆಯರು ಸೇರಿದಂತೆ ನೂರಾರು ಮಂದಿ ಓಟದಲ್ಲಿ ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್‌ಕುಮಾರ್ ಗೌಡ, ನಗರ ಪಾಲಿಕೆ ಸದಸ್ಯೆ ಎಂ.ಎಸ್. ಶೋಭಾ, ಕೂರ್ಗಳ್ಳಿ ಗ್ರಾಪಂ ಮಾಜಿ ಅಧ್ಯಕ್ಷೆ ಕೆ. ನಾಗರತ್ನ, ಜಿಪಂ ಮಾಜಿ ಸದಸ್ಯೆ ಚಂದ್ರಿಕಾ ಸುರೇಶ್, ಲಯನ್ ಸಂಸ್ಥೆಯ ನಾಗರಾಜ್ ವಿ. ಬೈರಿ, ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಕೆ. ಸುರೇಶ್, ಮಾನವ್ ಟ್ರಸ್ಟ್ ಉಪಾಧ್ಯಕ್ಷ ವಿವೇಕ್, ಕಾರ್ಯದರ್ಶಿ ಉಜ್ವಲ್, ಸಹಕಾರ್ಯದರ್ಶಿ ಸಚಿನ್ ಇನ್ನಿತರರು ಪಾಲ್ಗೊಂಡಿದ್ದರು.



ಲೋಕಸಭಾ ಮಾಜಿ ಸ್ಪೀಕರ್ ಶ್ರೀಮತಿ ಮೀರಾ ಕುಮಾರ್ ಮತ್ತು ಶಾಸಕ ಪ್ರಿಯಾಂಕ್ ಖರ್ಗೆ ಸೋಮವಾರ ವಿಧಾನಪರಿಷತ್ ಸದಸ್ಯ ಡಾ.ಡಿ ತಿಮ್ಮಯ್ಯನವರ ಮನೆಗೆ ಭೇಟಿ ನೀಡಿ ಇತ್ತೀಚೆಗೆ ಅವರ ಧರ್ಮಪತ್ನಿ ಶ್ರೀಮತಿ ಮೀರಾ ಬಾಯಿ ಅವರ ನಿಧನಕ್ಕೆ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು. ಈ ವೇಳೆ ತಿಮ್ಮಯ್ಯ ಅವರ ಮಗ ಅರುಣ್, ಸೊಸೆ ಶ್ರೀಮತಿ ಕಲ್ಪಶ್ರೀ, ಪುತ್ರಿ ಸಹನ, ಅಳಿಯಂದಿರಾದ ಲೋಕಸೇವಾ ಆಯೋಗದ ಸದಸ್ಯ ಪವಿತ್ರ, ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು

ಮರಳು ವ್ಯಾಪಾರಿಯಿಂದ ಹಫ್ತಾ ವಸೂಲಿ

ದಾವಣಗೆರೆ ಪೊಲೀಸರಿಂದ ಮೈಸೂರಿನ ಇಮ್ರಾನ್ ಸಿದ್ಧಿಕ್ ಸೇರಿ ಇಬ್ಬರ ಬಂಧನ

75.70 ಲಕ್ಷ ನಗದು, 2 ಮೊಬೈಲ್ ವಶ

ದಾವಣಗೆರೆ, ಮೇ 2- ಮರಳು ವ್ಯಾಪಾರಿಯನ್ನು ಹಫ್ತಾಗಾಗಿ ಬ್ಲಾಕ್‌ಮೇಲ್ ಮಾಡಿದ ಆರೋಪದ ಮೇರೆಗೆ ಮೈಸೂರಿನ ಇಮ್ರಾನ್ ಸಿದ್ಧಿಕ್ ಮತ್ತು ಚಿತ್ರದುರ್ಗ ಮೂಲದ ಅಶೋಕ್ ಅಲಿಯಾಸ್ ಜಿಮ್ಮಿ ಎಂಬುವವರನ್ನು ಬಂಧಿಸಿರುವ ದಾವಣಗೆರೆ ಪೊಲೀಸರು 75.70 ಲಕ್ಷ ರೂ. ಹಾಗೂ 2 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ವಿವರ: ದಾವಣಗೆರೆ ನಗರದ ಮುಬಾರಕ್ ಎಂಬ ಮರಳು ವ್ಯಾಪಾರಿ ಕಾನೂನುಬದ್ಧವಾಗಿ ಪರ್ಮಿಟ್ ಪಡೆದು ಮರಳು ವ್ಯಾಪಾರ ಮಾಡುತ್ತಿದ್ದರು ಎಂದು ಹೇಳಲಾಗಿದ್ದು, ದಾವಣಗೆರೆಯ ಮರಳು ದಂಧೆಕೋರರಿಂದ ಹಫ್ತಾ ವಸೂಲಿ ಮಾಡುವ ಕಾಯಕದಲ್ಲಿ ತೊಡಗಿದ್ದ ಮೈಸೂರಿನ ಇಮ್ರಾನ್ ಸಿದ್ಧಿಕ್ ಮತ್ತು ಚಿತ್ರದುರ್ಗದ ಅಶೋಕ ಅವರುಗಳು ಮುಬಾರಕ್ ಅವರನ್ನು ಸಂಪರ್ಕಿಸಿ ತಮಗೆ ತಿಂಗಳಿಗೆ 4 ಲಕ್ಷ ರೂ. ಹಫ್ತಾ ನೀಡಬೇಕು ಎಂದು ಬೇಡಿಕೆ ಇಟ್ಟಿದ್ದಲ್ಲದೇ ಹಫ್ತಾ ಕೊಡದಿದ್ದರೆ ಹೇಗೆ ಮರಳು ವ್ಯಾಪಾರ ಮಾಡುತ್ತೀಯಾ ಎಂದು ನೋಡುಕೊಳ್ಳುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ.

ಈ ಸಂಬಂಧ ಮುಬಾರಕ್ ದಾವಣಗೆರೆ ಗ್ರಾಮಾಂತರ ಠಾಣೆಗೆ ನೀಡಿದ ದೂರಿನ ಹಿನ್ನೆಲೆಯಲ್ಲಿ ಭಾರತೀಯ ದಂಡ ಸಂಹಿತೆ 420, 384, ರೆಡ್‌ವಿತ್ 34ರಡಿ ಪ್ರಕರಣ ದಾಖಲಿಸಲಾಗಿತ್ತು. ಈ ವ್ಯಕ್ತಿಗಳು ದಾವಣಗೆರೆಯ ಮರಳು ದಂಧೆಕೋರರಿಂದ ನಿರಂತರವಾಗಿ ಹಫ್ತಾ ವಸೂಲಿ ಮಾಡುವುದನ್ನು ಮನಗಂಡ ಜಿಲ್ಲಾ ಎಸ್ಪಿ ಸಿ.ಬಿ.ರಿಷ್ಯಂತ್ ಅವರು ದಾವಣಗೆರೆ ಡಿಸಿಆರ್‌ಬಿ ಡಿವೈಎಸ್ಪಿ ಬಿ.ಎಸ್.ಬಸವರಾಜು ಮತ್ತು ಪ್ರೊಬೆಷನರಿ ಐಪಿಎಸ್ ಅಧಿಕಾರಿ ಹೆಚ್.ಎನ್.ಮಿಥುನ್ ನೇತೃತ್ವದಲ್ಲಿ ವಿಶೇಷ ತಂಡವನ್ನು ರಚಿಸಿದ್ದರು.

ಈ ತಂಡವು ಕಾರ್ಯಾಚರಣೆ ನಡೆಸಿ ಮೈಸೂರಿನ ಇಮ್ರಾನ್ ಸಿದ್ಧಿಕ್‌ನನ್ನು ಬಂಧಿಸಿ ಆತನಿಂದ 75 ಲಕ್ಷ ರೂ. ಹಾಗೂ 2 ಮೊಬೈಲ್ ಮತ್ತು ಚಿತ್ರದುರ್ಗದ ಅಶೋಕ ಅಲಿಯಾಸ್ ಜಿಮ್ಮಿಯನ್ನು ಬಂಧಿಸಿ ಆತನಿಂದ 70 ಸಾವಿರ ರೂ. ವಶಪಡಿಸಿಕೊಂಡಿದ್ದಾರೆ. ಈ ಹಣವು ಆರೋಪಿಗಳು ಮರಳು ದಂಧೆ ಮಾಡುವವರಿಂದ ಸಂಗ್ರಹಿಸಿದ್ದ ಹಣವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಡಿಸಿಆರ್‌ಬಿ ಡಿವೈಎಸ್ಪಿ ಬಿ.ಎಸ್.ಬಸವರಾಜು, ಪ್ರೊಬೆಷನರಿ ಐಪಿಎಸ್ ಅಧಿಕಾರಿ ಹೆಚ್.ಎನ್.ಮಿಥುನ್, ದಾವಣಗೆರೆ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಲಿಂಗನಗೌಡ ನೆಗಳೂರು, ಡಿಸಿಆರ್‌ಬಿ ಎಎಸ್‌ಐ ಎಂ.ಆಂಜನಪ್ಪ, ಸಿಬ್ಬಂದಿಗಳಾದ ಕೆ.ಸಿ.ಮಜೀದ್, ಕೆ.ಟಿ.ಆಂಜನೇಯ, ಡಿ.ರಾಘವೇಂದ್ರ, ಯು.ಮಾರುತಿ, ಪಿ.ಸುರೇಶ್, ಜೆಹೆಚ್‌ಆರ್ ನಟರಾಜ್, ಈ.ಬಿ.ಅಶೋಕ, ಆರ್.ರಮೇಶ್ ನಾಯಕ, ಬಾಲರಾಜು, ಬಸವರಾಜು, ಸಿ.ಮಲ್ಲಿಕಾರ್ಜುನ್, ದಾವಣಗೆರೆ ಗ್ರಾಮಾಂತರ ಠಾಣೆ ಸಿಬ್ಬಂದಿಗಳಾದ ಗುರು ಶಾಂತಯ್ಯ, ಅರುಣ್ ಕುಮಾರ್ ಭಾಗವಹಿಸಿದ್ದರು.

ರೈಲಿಗೆ ಸಿಲುಕಿ ವ್ಯಕ್ತಿ ಸಾವು

ಮೈಸೂರು, ಮೇ 2- ಪಾಂಡವಪುರ ಮತ್ತು ಬ್ಯಾಡರಹಳ್ಳಿ ರೈಲು ನಿಲ್ದಾಣಗಳ ನಡುವೆ ರೈಲಿಗೆ ಸಿಲುಕಿ ಸುಮಾರು 55 ವರ್ಷ ವಯಸ್ಸಿನ ವ್ಯಕ್ತಿ ಸಾವನ್ನಪ್ಪಿದ್ದು, ಈತನ ವಾರಸುದಾರರು ಅಥವಾ ಪರಿಚಯಸ್ಥರು ಮೈಸೂರು ರೈಲ್ವೆ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 0821-2516579 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ಸಾಲು ಸಾಲು ರಜೆ ಹಿನ್ನೆಲೆ

ಮೈಸೂರಿಗೆ ಹರಿದು ಬಂದ ಪ್ರವಾಸಿಗರ ಸಾಗರ! ಎಲ್ಲೆಡೆ ಸಡಗರ

ಹೋಟೆಲ್, ರೆಸಾರ್ಟ್‌ಗಳಲ್ಲಿ ಕೊಠಡಿಗಳು ಭರ್ತಿ, ಪ್ರವಾಸಿ ಟ್ಯಾಕ್ಸಿ, ಗೈಡ್‌ಗಳಿಗೆ ಶುಕ್ರದೆಸೆ.





ಮೈಸೂರು, ಮೇ 2(ಆರ್‌ಕೆ)- ಸಾಲು ಸಾಲು ರಜೆ ಬಂದಿರುವುದರಿಂದ ಮೈಸೂರಿನ ಆತಿಥ್ಯ ಕ್ಷೇತ್ರ ಹಾಗೂ ಪ್ರವಾಸೋದ್ಯಮಕ್ಕೆ ಶುಕ್ರದೆಸೆ.

ಕಳೆದ 15 ದಿನಗಳಿಂದೀಚೆಗೆ ಹೋಟೆಲ್, ಪ್ರವಾಸಿ ಟ್ಯಾಕ್ಸಿ, ಗೈಡ್‌ಗಳು ಹಾಗೂ ಪ್ರವಾಸಿ ತಾಣಗಳಿಗೆ ಬಂಪರ್ ಇನ್ನಿಂಗ್ಸ್ ಪ್ರಾಪ್ತವಾಗಿದ್ದು, ಇದೀಗ ಮಂಗಳವಾರ ರಾತ್ರಿವರೆಗೆ ಎಲ್ಲಾ ಹೋಟೆಲ್‌ಗಳಲ್ಲಿ ಕೊಠಡಿಗಳು ಶೇ. 100ರಷ್ಟು ಭರ್ತಿಯಾಗಿವೆ. ಕಳೆದ ಏಪ್ರಿಲ್ 13, 14, 15 ಮತ್ತು 16ರಂದು ಸಾಲು ಸಾಲು ರಜೆ ಇದ್ದಿದ್ದರಿಂದ ಪ್ರವಾಸಿಗರು ಮೈಸೂರಲ್ಲಿ ತುಂಬಿ ತುಳುಕುತ್ತಿದ್ದರು.

ಈಗ ಏಪ್ರಿಲ್ 30 ವಾರಾಂತ್ಯ ಶನಿವಾರ, ಮೇ 1 ಭಾನುವಾರ, ಮೇ 2ರಂದು ರಂಜಾನ್, ಮೇ 3ರಂದು ಬಸವ ಜಯಂತಿ ರಜೆ ಇರುವುದರಿಂದ ಕೇರಳ, ತಮಿಳುನಾಡು ಹಾಗೂ ಇನ್ನಿತರ ಸ್ಥಳಗಳಿಂದ ಪ್ರವಾಸಿಗರ ದಂಡೇ ಮೈಸೂರಿನತ್ತ ಬಂದಿರುವುದರಿಂದ ಇಲ್ಲಿನ 450 ಹೋಟೆಲ್‌ಗಳ ಸುಮಾರು 10,500 ಕೊಠಡಿಗಳು ಭರ್ತಿಯಾಗಿವೆ ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ ತಿಳಿಸಿದ್ದಾರೆ.

ಕೊರೊನಾ ಸೋಂಕಿನಿಂದ ಸುಮಾರು ಎರಡೂವರೆ ವರ್ಷಗಳ ಕಾಲ ವ್ಯಾಪಾರ ವಹಿವಾಟಿಲ್ಲದೇ ನಷ್ಟ ಅನುಭವಿಸಿದ್ದ ಹೋಟೆಲ್ ಉದ್ಯಮವೀಗ ಸಂಪೂರ್ಣ ಚೇತರಿಸಿಕೊಂಡು ಒಳ್ಳೆಯ ವಾತಾವರಣದಲ್ಲಿ ಸಂತಸಪಡುವಂತಾಗಿದೆ. ತಿಂಡಿ-ಊಟದ ಹೋಟೆಲ್‌ಗಳೂ ಸಂಪೂರ್ಣವಾಗಿ ಚೇತರಿಸಿಕೊಂಡಿವೆ ಎಂದು ಅವರು ತಿಳಿಸಿದರು.

ಮೈಸೂರಲ್ಲಿ ಕ್ಯಾಬ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ, ಟೆಂಪೋ ಟ್ರಾವೆಲರ್ ಸೇರಿದಂತೆ ಸುಮರು 3,000 ಪ್ರವಾಸಿ ವಾಹನಗಳೂ ಪ್ರವಾಸಿಗರ ಸೇವೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಬೇಡಿಕೆಗೆ ತಕ್ಕಂತೆ ವಾಹನ ಒದಗಿಸಲು ಸಾಧ್ಯವಾಗುತ್ತಿಲ್ಲ ಎಂದು ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಸಿ.ಎ. ಜಯಕುಮಾರ್ ತಿಳಿಸಿದ್ದಾರೆ.

ಶನಿವಾರದಿಂದಲೇ ಪ್ರವಾಸಿಗರು ಮೈಸೂರಿನಲ್ಲಿ ಬೀಡು ಬಿಟ್ಟಿದ್ದು, ಅರಮನೆ, ಚಾಮುಂಡಿಬೆಟ್ಟ, ಮೃಗಾಲಯ, ನಂಜನಗೂಡು, ಕೆಆರ್‌ಎಸ್, ಶ್ರೀರಂಗಪಟ್ಟಣ, ಮೇಲುಕೋಟೆ, ತಲಕಾಡು ಸೇರಿದಂತೆ ಮೈಸೂರು ಮತ್ತು ಸುತ್ತಮುತ್ತಲ ಪ್ರವಾಸಿ ತಾಣಗಳು ಪ್ರವಾಸಿಗರಿಂದ ಉದ್ಯಮ ಅವಲಂಬಿಸಿರುವ ಇತರ ಕ್ಷೇತ್ರಗಳೂ ಚೇತರಿಸಿಕೊಂಡಿವೆ.

ಕೆಲಸವೇ ಇಲ್ಲದೇ ಕಂಗಾಲಾಗಿದ್ದ ಪ್ರವಾಸಿ ಮಾರ್ಗದರ್ಶಿ (Tourist Guide)ಗಳಂತೂ ಪ್ರತೀದಿನ ಬ್ಯುಸಿಯಾಗಿದ್ದಾರೆ. ಇದರಿಂದ ಬೀದಿಬದಿ ವ್ಯಾಪಾರಿಗಳು, ಆಟಿಕೆ, ಅಲಂಕಾರಿಕ ವಸ್ತು ಮಾರಾಟ ಮಾಡುವವರಿಗೂ ಉತ್ತಮ ವ್ಯಾಪಾರವಾಗುತ್ತಿದ್ದು, ಎಲ್ಲಿ ನೋಡಿದರೂ ಪ್ರವಾಸಿಗರೇ ಕಾಣಿಸುತ್ತಿರುವ ಮೈಸೂರಲ್ಲಿ ರಾತ್ರಿ ವೇಳೆ ವಾಹನ ಸಂಚಾರ ದಟ್ಟಣೆ ನಿಭಾಯಿಸಲು ಪೊಲೀಸರು ಹರಸಾಹಸ ಪಡುತ್ತಿದ್ದಾರೆ.

ತಲಕಾಡಿನಲ್ಲಿ ಪುನೀತ್ ರಾಜ್‌ಕುಮಾರ್ ಅವರಿಗೆ ನಮನ ಕಾರ್ಯಕ್ರಮ

ರಾಜ್ಯಕ್ಕೆ ಡಾ.ರಾಜ್ ಕುಟುಂಬದಿಂದ ಅವಿಸ್ಮರಣೀಯ ಕೊಡುಗೆ

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಶ್ಲಾಘನೆ



ತಿ.ನರಸೀಪುರ, ಮೇ 2(ಎಸ್‌ಕೆ)– ಕನ್ನಡದ ಮೇರು ನಟ ಡಾ.ರಾಜ್‌ಕುಮಾರ್ ಕುಟುಂಬ ಕಲೆ ಮೂಲಕ ರಾಜ್ಯಕ್ಕೆ ಅವಿಸ್ಮರಣೀಯ ಕೊಡುಗೆ ನೀಡಿದೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಶ್ಲಾಘಿಸಿದರು.

ತಾಲೂಕಿನ ತಲಕಾಡು ಗ್ರಾಮದಲ್ಲಿ ಡಾ.ಪುನೀತ್ ರಾಜ್‌ಕುಮಾರ್ ಅಭಿಮಾನಿ ಬಳಗದಿಂದ ಆಯೋಜಿಸಿದ್ದ ಅಪ್ಪು ನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆದರ್ಶ ವ್ಯಕ್ತಿಗಳು ಎಂದಿಗೂ ಹೆಚ್ಚು ಮಾತನಾಡಲ್ಲ. ಬದಲಿಗೆ ಅವರ ಕೆಲಸಗಳು ಮಾತನಾಡುತ್ತವೆ. ಹಾಗಾಗಿ ರಾಜ್ಯದ ಜನತೆ ಅಪ್ಪು ಸಾಧನೆಯನ್ನು ಸ್ಮರಿಸುತ್ತಿದ್ದು, ಅವರ ಸಾರ್ಥಕ ಬದುಕು, ಅದ್ಭುತ ನಟನೆ ಮತ್ತು ಜನಪರ ಕಾಳಜಿಗೆ ಮನಸೋತಿದೆ. ನಾನು ರಾಜ್ಯಾದ್ಯಂತ ಪ್ರವಾಸ ಮಾಡುವ ಸಂದರ್ಭ ಜನರಲ್ಲಿ ಅಪ್ಪು ಮೇಲಿನ ಅಭಿಮಾನ ಕಂಡು ಆಶ್ಚರ್ಯ ಚಕಿತನಾದೆ ಎಂದು ಅಪ್ಪು ಜನಪ್ರಿಯತೆ ಸ್ಮರಿಸಿದರು.

ಡಾ.ರಾಜ್ ಕುಟುಂಬದ ಕುಡಿಯಾಗಿದ್ದ ಅಪ್ಪು ನಮ್ಮ ಮನೆ ಮಗನಂತಿದ್ದರು. ಅವರ ಆಕಸ್ಮಿಕ ಸಾವು ನನ್ನನ್ನು ಘಾಸಿಗೊಳಿಸಿತು. ಅಂತೆಯೇ ಅಪ್ಪು ತಮ್ಮ ನಟನೆ, ಬದುಕಿನ ಮೂಲಕ ಜನಪರ ಸಮಾಜಮುಖಿ ಕೆಲಸ ಮಾಡಿದಾಗ ಜನ ಸ್ಮರಿಸುತ್ತಾರೆ ಎಂಬುದನ್ನು ತೋರಿಸಿಕೊಟ್ಟರು ಎಂದರು.

ತಲಕಾಡು ಪ್ರವಾಸಿ ಕ್ಷೇತ್ರವಾಗಲಿ: ಕ್ಷೇತ್ರದ ಜನತೆ ಕೊಟ್ಟ ಅಧಿಕಾರದಿಂದ ಪ್ರಾಮಾಣಿಕವಾಗಿ ಎಷ್ಟು ಕೆಲಸ ಮಾಡಬೇಕೋ ಅಷ್ಟು ಕೆಲಸ ಮಾಡಿದ್ದೇನೆ. ತಲಕಾಡಿಗೆ ಅಲಮೇಲಮ್ಮ ಕೊಟ್ಟ ಶಾಪ ಸುಳ್ಳು ಮಾಡಲು ತಲಕಾಡನ್ನು ಪ್ರಮುಖ ಪ್ರವಾಸೋದ್ಯಮ ಕ್ಷೇತ್ರ ಮಾಡಬೇಕು. ಅಲ್ಲದೇ ವಿದ್ಯಾಕೇಂದ್ರಗಳ ಸ್ಥಾಪನೆ, ಯುವಕ–ಯುವತಿಯರಿಗೆ ಕೌಶಲ್ಯ ತರಬೇತಿ, ಮಾಧವ ಮಂತ್ರಿ ಅಣೆಕಟ್ಟೆ ಮರು ನಿರ್ಮಾಣ ಮಾಡುವ ಅಭಿಲಾಷೆ ಹೊಂದಿದ್ದೇನೆ. ನಾನು ಮತ್ತೆ ಚುನಾವಣೆಯಲ್ಲಿ ಗೆದ್ದಿದ್ದರೆ ಅಣೆಕಟ್ಟೆ 2 ವರ್ಷಗಳ ಹಿಂದೆಯೇ ಪೂರ್ಣವಾಗುತ್ತಿತ್ತು. ಆದರೆ ಈಗ ಅದನ್ನು ಹೇಳೋರು ಕೇಳೋರೂ ಯಾರೂ ಇಲ್ಲದಂತಾಗಿದೆ ಎಂದರು.

ಯಾರೊಂದಿಗೂ ರಾಜಿ ಇಲ್ಲ: ಸರ್ಕಾರದಲ್ಲಿ ಹತ್ತು ಹಲವು ಯೋಜನೆ ಜಾರಿಗೆ ತಂದು ಮಂಜೂರು ಮಾಡಿ ಜನರ ಜೀವನ ಸುಧಾರಣೆ ಮಾಡಲು, ನೀರಾವರಿ ಸಾಮರ್ಥ್ಯ ಹೆಚ್ಚಿಸಲು, ಕೌಶಲ್ಯಾಭಿವೃದ್ಧಿ ತರಬೇತಿ, ಐಟಿಐ ಕಾಲೇಜು ಮಾಡಲು ಕಷ್ಟ ಪಡೋನು ನಾನು. ಇದನ್ನು ಸಹಿಸದ ಕೆಲವರು ನನ್ನ ವಿರುದ್ಧ ಇಲ್ಲಸಲ್ಲದ ಮಾತುಗಳನ್ನಾಡುತ್ತಾರೆ. ನನ್ನ ಜೀವನದಲ್ಲಿ ರಾಜಕೀಯ ತತ್ವ ಸಿದ್ಧಾಂತ ಬಿಟ್ಟು ಅಧಿಕಾರಕ್ಕಾಗಿ ಯಾರ ಜೊತೆಯೂ ರಾಜಿಯಾದವನಲ್ಲ. ನಾನೇನು ಬಿಜೆಪಿಯಿಂದ ಚುನಾವಣೆಗೆ ನಿಂತು ಕಾಂಗ್ರೆಸ್‌ಗೆ ಬಂದಿಲ್ಲ. ಬಿಜೆಪಿಯಿಂದ ಕಾಂಗ್ರೆಸ್‌ಗೆ ಬಂದಿರುವವರನ್ನು ಎತ್ತಿ ಕೊಂಡು ಮೆರೆಯುತ್ತಲೂ ಇಲ್ಲ ಎಂದರು.

ಸೋತರು ಸಿಎಂರಿಂದ ಸನ್ಮಾನ: ಚುನಾವಣೆಯಲ್ಲಿ ಸೋತರು ನಾನು ಮನೆಯಲ್ಲಿ ಕೂರದೇ ಸಿದ್ದರಾಮಯ್ಯರೊಂದಿಗೆ ರಾಜ್ಯಾದ್ಯಂತ ಪ್ರವಾಸ ಮಾಡಿ ಜನ ಜಾಗೃತಿ ಮೂಡಿಸಲು ಕಾರ್ಯಕ್ರಮ ಮಾಡುತ್ತಿದ್ದೇನೆ. ಜನರು ನಮ್ಮ ಕೆಲಸ ಸ್ಮರಿಸುವುದರಿಂದ ಚುನಾವಣೆಯಲ್ಲಿ ಸೋತರೂ ಸಂತಸವಾಗುತ್ತದೆ. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಸಹ ನನ್ನ ಸಾಧನೆ ಮೆಚ್ಚಿ ಸನ್ಮಾನಿಸಿದೆ. ಬೇರೆ ಪಕ್ಷದ ಮುಖ್ಯಮಂತ್ರಿಯಿಂದ ಸನ್ಮಾನಿತನಾದ ಮಾಜಿ ಸಚಿವರಲ್ಲಿ ನಾನೇ ಮೊದಲಿಗ ಎಂದರು.

ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಮಾತನಾಡಿ, ಅಪ್ಪು ದೇಶದ ಜನಮಾನಸದಲ್ಲಿ ಅಜರಾಮರ. ಏಕೆಂದರೆ ಅವರು ಮಾಡಿರುವ ಮಾನವೀಯ ಮತ್ತು ಜನಪರ ಕೆಲಸಗಳು ಅವರ ಹೆಸರು ಕನ್ನಡ ಚಿತ್ರರಂಗ ಇರುವವರೆಗೂ ಚಿರಸ್ಥಾಯಿ ಮಾಡಿದೆ. ನನಗೂ ಕೂಡ ಅವರು ಕೆಲವೊಂದು ಸಂದರ್ಭ ಉಪಯುಕ್ತ ಮಾರ್ಗದರ್ಶನ ನೀಡಿದ್ದರು ಎಂದು ಒಡನಾಟ ಸ್ಮರಿಸಿದರು.

ಸಮಾರಂಭಕ್ಕೂ ಮುನ್ನಾ ಹೆಮ್ಮಿಗೆ ಗ್ರಾಮದಿಂದ ಡೈರಿ ಕಾರ್ಯದರ್ಶಿ ಸೋಮಣ್ಣ ನೇತೃತ್ವದಲ್ಲಿ ಬೈಕ್ ರ‍್ಯಾಲಿ ನಡೆಸಲಾಯಿತು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜ್, ತಾಪಂ ಮಾಜಿ ಸದಸ್ಯ ಗಣೇಶ್, ಮಲ್ಲಾಜಮ್ಮ ಎಸ್ಸಿ/ಎಸ್ಟಿ ಹಿತರಕ್ಷಣಾ ಸಮಿತಿ ಸದಸ್ಯ ಮಹದೇವಸ್ವಾಮಿ, ತಾಲೂಕು ಕುರುಬರ ಸಂಘದ ಖಜಾಂಚಿ ಮಲ್ಲೇಶ್, ಕಾರ್ಯದರ್ಶಿ ಬಸವರಾಜು, ಹಿಂದುಳಿದ ವರ್ಗಗಳ ಅಧ್ಯಕ್ಷ ಚಂದ್ರಶೇಖರ್, ಗ್ರಾಪಂ ಸದಸ್ಯ ವಿಜಾಪುರ ಶಿವಶಂಕರ್, ಮಾದೇಶ್, ಮಹದೇವ ಶೆಟ್ಟಿ, ಬೆಟ್ಟಹಳ್ಳಿ ಗ್ರಾಪಂ ಅಧ್ಯಕ್ಷ ನಾಗರಾಜು, ಪ್ರಭು, ಪಿಎಸಿಸಿ ಮಾಜಿ ಅಧ್ಯಕ್ಷ ಶೇಷಾದ್ರಿ, ಗಣೇಶ್, ನವೀನ್, ನಿವೃತ್ತ ಅಕೌಂಟ್ ಸೂಪರಿಂಟೆಂಡೆಂಟ್ ಶಿವಸ್ವಾಮಿ ಮತ್ತಿತರರಿದ್ದರು.

ಹುಟ್ಟುಹಬ್ಬ ಆಚರಿಸಿಕೊಳ್ಳುವ ಯೋಗ್ಯತೆ ನನಗಿನ್ನೂ ಬಂದಿಲ್ಲ...

ಹುಟ್ಟುಹಬ್ಬ ಆಚರಿಸಿಕೊಳ್ಳುವ ಯೋಗ್ಯತೆ ನನಗಿನ್ನೂ ಬಂದಿಲ್ಲ, ದೊಡ್ಡವರು ಮಾತ್ರ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಾರೆ ಎನ್ನುವ ಮೂಲಕ ಇತ್ತೀಚೆಗಷ್ಟೇ ಅದ್ದೂರಿಯಾಗಿ ಜನ್ಮದಿನ ಆಚರಿಸಿಕೊಂಡ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ಹೆಚ್.ಮಂಜುನಾಥ್‌ಗೆ ಮಹದೇವಪ್ಪ ಟಾಂಗ್ ನೀಡಿದರು.

ನನಗೆ ನನ್ನ ಜನ್ಮದಿನವೇ ನೆನಪಿಲ್ಲ. ನನ್ನಪ್ಪ ತೊಲೆಯಲ್ಲಿ ಒಂದು ಗೀಟು ಎಳೆದಿದ್ದ. ಶಾಲೆಯಲ್ಲಿ ಮೇಷ್ಟ್ರು ಒಂದು ಡೇಟ್ ಬರೆದರು. ಅದೇ ನನ್ನ ಜನ್ಮದಿನ ಎಂದು ತಿಳಿದಿದ್ದಾರೆ. ಜನ್ಮದಿನ ಆಚರಿಸಿಕೊಳ್ಳುವ ಸಂಸ್ಕೃತಿ ನಮ್ಮದಲ್ಲ. ಅದಕ್ಕೆ ನಾವು ಒತ್ತುಕೊಟ್ಟವರೂ ಅಲ್ಲ. ಯಾರೋ ದೊಡ್ಡವರು ಜನ್ಮದಿನ ಆಚರಿಸಿಕೊಳ್ತಾರೆ. ಹುಡುಕಿ– ಹುಡುಕಿ, ಕರೆದು–ಕರೆದು ಭಾರೀ ಸಾಧನೆ ಮಾಡಿದ್ದೇನೆ. ಹೋರಾಟ ಮಾಡಿ ನಾಡು ಕಟ್ಟಿದ್ದೇನೆ ಎಂದು ಜನರನ್ನು ಕರೆದು ಹುಟ್ಟುಹಬ್ಬ ಮಾಡಿಕೊಳ್ತಾರೆ. ಆದರೆ ಜನ್ಮದಿನ ಆಚರಿಸಿಕೊಳ್ಳುವಷ್ಟು ಯೋಗ್ಯತೆ ನಾನಿನ್ನೂ ಸಂಪಾದನೆ ಮಾಡಿಲ್ಲ. ಯಾರ‍್ಯಾರು ಮಾಡಿಕೊಳ್ತಾರೋ ಮಾಡಿಕೊಳ್ಳಲಿ ಅವರಿಗೆಲ್ಲ ಒಳ್ಳೆಯದಾಗಲಿ ಎಂದು ವ್ಯಂಗ್ಯವಾಡಿದ ಮಹದೇವಪ್ಪ ಇಲ್ಲದ್ದನ್ನೆಲ್ಲಾ ಯಾಕೆ ಮಾತನಾಡಬೇಕು. ಏನೂ ಯಾರಿಗೂ ಇಲ್ಲದ ಚಿನ್ನದ ಕಿರೀಟ ಬಿದ್ದು ಹೋಯಿತೆ ಎಂದು ಹೇಳುವ ಮೂಲಕ ಬ್ಲಾಕ್ ಅಧ್ಯಕ್ಷ ಸ್ಥಾನವನ್ನು ರಾಜಕೀಯ ದ್ವೇಷದಿಂದ ಏಕಾಏಕಿ ಕಸಿದುಕೊಳ್ಳಲಾಯಿತು ಎಂದು ಟಿ.ಎಚ್.ಮಂಜುನಾಥ್ ಮಾಡಿದ್ದ ಆರೋಪಕ್ಕೆ ವ್ಯಂಗ್ಯವಾಗಿ ಪ್ರತಿಕ್ರಿಯಿಸಿದರು.

ಗೃಹಿಣಿ ಅನುಮಾನಾಸ್ಪದ ಸಾವು

ಪೋಷಕರಿಂದ ಕೊಲೆ ಆರೋಪ



ನಂಜನಗೂಡು, ಮೇ 2– ಗೃಹಿಣಿಯೊಬ್ಬಳು ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಹಿಮ್ಮಾವು ಗ್ರಾಮದಲ್ಲಿ ನಡೆದಿದೆ. ಈ ಗ್ರಾಮದ ನಿವಾಸಿ ಉಮೇಶ್ ಎಂಬುವರ ಪತ್ನಿ ಬೇಬಿ(29) ಸಾವನ್ನಪ್ಪಿದ ಗೃಹಿಣಿ.

ವಿವರ: ಗ್ರಾಮದ ನಿವಾಸಿ ಕುಮಾರ್ ಅಲಿಯಾಸ್ ಗುಡ್ಡಪ್ಪ ಮತ್ತು ಜಯಲಕ್ಷ್ಮಿ ಎಂಬುವರ ಪುತ್ರ ಉಮೇಶ್ ಅವರಿಗೆ ಬೇಬಿ ಅವರನ್ನು ಕಳೆದ 10 ವರ್ಷಗಳ ಹಿಂದೆ ಮದುವೆ ಮಾಡಿಕೊಡಲಾಗಿತ್ತು. ಈ ದಂಪತಿಗೆ 6 ವರ್ಷದ ಪುತ್ರನಿದ್ದಾನೆ. ಈಕೆಯ ಶವ ಮನೆಯ ಕೊಠಡಿಯ ಫ್ಯಾನಿನಲ್ಲಿ ನೇತಾಡುವ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಬೇಬಿ ಮೈಮೇಲೆ ಹಲ್ಲೆ ನಡೆಸಿರುವ ಗುರುತುಗಳು ಕಾಣುತ್ತಿವೆ. ಹೀಗಾಗಿ ಆಕೆಯನ್ನು ವರದಕ್ಷಿಣೆ ಕಿರುಕುಳ ನೀಡಿ ಹತ್ಯೆ ಮಾಡಲಾಗಿದೆ ಎಂದು ಮೃತಳ ಕುಟುಂಬದವರು ಆರೋಪಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಂಜನಗೂಡು ಗ್ರಾಮಾಂತರ ಠಾಣೆ ಎಸ್‌ಐ ಚಂದ್ರು ಮತ್ತು ಸಿಬ್ಬಂದಿ ಪರಿಶೀಲನೆ ನಡೆಸಿ ನಂಜನಗೂಡು ಸರ್ಕಾರಿ ಆಸ್ಪತ್ರೆಗೆ ಶವವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಬೇಬಿ ಗಂಡ, ಅತ್ತೆ, ಮಾವ ನಾಪತ್ತೆಯಾಗಿದ್ದು, ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಬಾಲಕಿಗೆ ತಿಂಡಿ ಆಸೆ ತೋರಿಸಿ ಅತ್ಯಾಚಾರಕ್ಕೆ ಯತ್ನ

ಕಾಮುಕನಿಗೆ ಗ್ರಾಮಸ್ಥರಿಂದ ಧರ್ಮದೇಟು

ಹುಣಸೂರು, ಮೇ 2– ತಿಂಡಿ ಕೊಡಿಸುವ ಆಮಿಷವೊಡ್ಡಿ ಬಾಲಕಿ ಮೇಲೆ ಅತ್ಯಾಚಾರ ನಡೆಸಲು ಯತ್ನಿಸಿದ ಘಟನೆ ಹುಣಸೂರು ತಾಲೂಕಿನ ತಿಪ್ಪೂರಿನಲ್ಲಿ ನಡೆದಿದೆ.

ಹೊಸಪುರ ಗ್ರಾಮದ ಕಾಳನಾಯಕ ಸಿಕ್ಕಿಬಿದ್ದ ಕಾಮುಕ. ಆರೋಪಿಯನ್ನು ಕಂಬಕ್ಕೆ ಕಟ್ಟಿಹಾಕಿದ ಗ್ರಾಮಸ್ಥರು ನಂತರ ಪೊಲೀಸರ ವಶಕ್ಕೆ ನೀಡಿದ್ದಾರೆ.

ಹೊಸಪುರ ಗ್ರಾಮದ ಕಾಳನಾಯಕ ತಿಪ್ಪೂರಿನಲ್ಲಿ ಮಹಿಳೆಯೊಂದಿಗೆ ಅಕ್ರಮ ಸಂಬಂಧ ಇರಿಸಿಕೊಂಡು ಈ ಹಿಂದೆ ಸಿಕ್ಕಿ ಬಿದ್ದಿದ್ದ. ಪತ್ನಿ ನೀಡಿದ ದೂರಿನ ಹಿನ್ನಲೆ ಕಾಳನಾಯಕ 2 ವರ್ಷ ಜೈಲುವಾಸ ಅನುಭವಿಸಿ ಬಿಡುಗಡೆಯಾಗಿ ಬಂದು ಒಂಟಿ ಜೀವನ ಸಾಗಿಸುತ್ತಿದ್ದ. ಆಟವಾಡುತ್ತಿದ್ದ ಬಾಲಕಿಗೆ ತಿಂಡಿ ಕೊಡಿಸುವ ಆಸೆ ತೋರಿಸಿ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಅತ್ಯಾಚಾರಕ್ಕೆ ಯತ್ನಿಸಿದ್ದಾನೆ. ಈ ವೇಳೆ ಈತ ಗ್ರಾಮಸ್ಥರ ಕೈಗೆ ಸಿಕ್ಕಿಬಿದ್ದಿದ್ದು, ಧರ್ಮದೇಟು ಕೊಟ್ಟಿದ್ದಾರೆ. ಬಳಿಕ ಕಾಳನಾಯಕನನ್ನು ಕಂಬಕ್ಕೆ ಕಟ್ಟಿದ ಗ್ರಾಮದ ಮುಖಂಡರು, ನಂತರ ಬಿಳಿಕೆರೆ ಪೊಲೀಸರ ವಶಕ್ಕೆ ನೀಡಿದ್ದಾರೆ. ಆರೋಪಿಯನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ

ಬನ್ನೂರು, ಮೇ 2(ಪ್ರಭು)– ಪಟ್ಟಣದ ಬಾಲಾಜಿ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಶುಕ್ರವಾರ ಸಂಜೆ ದಯಾನಂದ ಅಲಿಯಾಸ್ ಚಿನ್ನಿ ಎಂಬಾತನ ಮೇಲೆ ಗುಂಪೊಂದು ಮಾರಕಾಸ್ತ್ರಗಳಿಂದ ಮಾರಣಾಂತಿಕ ಹಲ್ಲೆ ನಡೆಸಿದೆ.

ಗುರು, ಬಿಂದಾಸ್ ಅಲಿಯಾಸ್ ಬಿಂದು, ಚಂದ್ರು ಎಂಬುವರ ಮೇಲೆ ಬನ್ನೂರು ಪೋಲಿಸ್ ಠಾಣೆಯಲ್ಲಿ ಕೊಲೆ ಯತ್ನ ಪ್ರಕರಣ ದಾಖಲಾಗಿದೆ.

ದಯಾನಂದ ಶುಕ್ರವಾರ ಸಂಜೆ ತನ್ನ ಸ್ನೇಹಿತರಾದ ಮಹೇಶ್ ಹಾಗೂ ಮಧು ಎಂಬುವರ ಜೊತೆ ಅಡವಿಟ್ಟ ಗಾಡಿಯ ವಿಚಾರವಾಗಿ ಸೆಟಲ್ಮೆಂಟ್ ಮಾಡಿಕೊಂಡು ಬಾಲಾಜಿ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಊಟ ಮಾಡಲು ಕುಳಿತುಕೊಂಡಿದ್ದಾರೆ. ಈ ಸಂದರ್ಭ ಬಾರ್‌ಗೆ ಮಾರಕಾಸ್ತ್ರಗಳೊಂದಿಗೆ ನುಗ್ಗಿದ ಗುರು, ಬಿಂದು, ಚಂದ್ರು ಹಾಗೂ ಕೆಲವರಿದ್ದ ಗುಂಪು ಬಿಯರ್ ಬಾಟಲ್ ಮತ್ತು ಲಾಂಗ್‌ನಿಂದ ಹಲ್ಲೆ ನಡೆಸಿದೆ. ದಯಾನಂದ್ ಬಾರ್‌ನಿಂದ ಹೊರಗೆ ಓಡಿದರೂ ಬಿಡದೆ ಬೆನ್ನಟ್ಟಿದ ಗುಂಪು ಬಾರ್ ಮುಂಭಾಗವೂ ಆತನ ಮೇಲೆ ಹಲ್ಲೆ ನಡೆಸಿರುವುದು ಸಿಸಿ ಕ್ಯಾಮರಾದಲ್ಲಿ ದಾಖಲಾಗಿದ್ದು, ಈ ದೃಶ್ಯಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಹೇಮಾದ್ರಂಭ ಹಬ್ಬದ ವಿಚಾರವಾಗಿ ಐದಾರು ವರ್ಷಗಳ ಹಿಂದೆ ತನಗೂ ಹಲ್ಲೆ ಮಾಡಿದವರಿಗೂ ನಡುವೆ ಗಲಾಟೆ ನಡೆದಿದ್ದು, ಈ ಸಂಬಂಧ ಪೊಲೀಸ್ ಕೇಸ್ ಆಗಿದೆ. ಆಗಿನಿಂದಲೂ ಇವರು ತನ್ನ ಮೇಲೆ ದ್ವೇಷ ಇಟ್ಟುಕೊಂಡಿದ್ದಾಗಿ ದಯಾನಂದ ನೀಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಬನ್ನೂರು ಪೊಲೀಸರು ಮೂವರ ವಿರುದ್ಧ ಕೊಲೆ ಯತ್ನ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಚಿರತೆ ಬೇಟೆ: ಚರ್ಮ ಮಾರಾಟಕ್ಕೆ ಯತ್ನಿಸಿದ ಐವರ ಸೆರೆ



ಹನಗೋಡು, ಮೇ 2– ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ ಚಿರತೆ ಬೇಟೆಯಾಡಿ ಚರ್ಮ ಸೇರಿದಂತೆ ಅಂಗಾಂಗ ಮಾರಾಟ ಮಾಡಲೆತ್ನಿಸಿದ ಐವರು ಆರೋಪಿಗಳನ್ನು ಮಾಲು ಸಮೇತ ಬಂಧಿಸುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.

ಬಂಧಿತ ನಾಲ್ವರು ಆರೋಪಿಗಳು ಹುಣಸೂರು ತಾಲೂಕಿನ ವಿವಿಧ ಹಾಡಿಗೆ ಸೇರಿದ್ದು, ಮತ್ತೊಬ್ಬ ಹನಗೋಡಿಗೆ ಸಮೀಪದ ಅಬ್ಬೂರಿನವರೆಂದು ತಿಳಿದು ಬಂದಿದೆ. ಕೃತ್ಯದಲ್ಲಿ ಭಾಗಿಯಾಗಿರುವ ಇನ್ನೂ ಕೆಲ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಬಂಧಿತರಿಂದ ಚಿರತೆ ಚರ್ಮ, ನಾಲ್ಕು ಕಾಲಿನ ಭಾಗಗಳು ಹಾಗೂ ಕೃತ್ಯಕ್ಕೆ ಬಳಸಿದ್ದ ಒಂದು ಸಿಂಗಲ್ ಬ್ಯಾರಲ್ ಗನ್ ಹಾಗೂ ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ.

ವಿವರ: ನಾಗರಹೊಳೆ ಉದ್ಯಾನವನದ ಹುಣಸೂರು ವನ್ಯಜೀವಿ ವಲಯದಲ್ಲಿ ಹತ್ಯೆ ಮಾಡಿದ್ದ ಚಿರತೆ ಚರ್ಮ ಹಾಗೂ ಚಿರತೆಯ ಕತ್ತರಿಸಿದ 4 ಕಾಲಿನ ಭಾಗಗಳನ್ನು ಮಾರಾಟ ಮಾಡಲು ಯತ್ನಿಸುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಎಚ್ಚೆತ್ತುಕೊಂಡ ಪೊಲೀಸರು ಹನಗೋಡು–ಪಂಚವಳ್ಳಿ ಮುಖ್ಯ ರಸ್ತೆಯ ಕಡೇಮನುಗನಹಳ್ಳಿ ಕ್ರಾಸ್ ಬಳಿ ದ್ವಿಚಕ್ರ ವಾಹನ ಸಮೇತ ಆರೋಪಿಯೊಬ್ಬನ ಮೇಲೆ ಹಠಾತ್ ದಾಳಿ ನಡೆಸಿ ಚಿರತೆ ಅಂಗಾಂಗಗಳನ್ನು ವಶಕ್ಕೆ ಪಡೆದಿದ್ದಾರೆ. ಈ ವೇಳೆ ವಿಚಾರಣೆ ನಡೆಸಿದಾಗ ಸಹಚರರ ಬಗ್ಗೆ ಮಾಹಿತಿ ನೀಡಿದ ಮೇರೆಗೆ ನಾಲ್ವರು ಸೇರಿದಂತೆ ಐವರು ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೊಪ್ಪಿಸಿ, ಉಳಿದ ಆರೋಪಿಗಳ ಬಂಧನಕ್ಕೆ ತಂಡ ರಚಿಸಲಾಗಿದೆ.

ನಾಗರಹೊಳೆ ಹುಲಿಯೋಜನೆ ಮುಖ್ಯಸ್ಥ ಮಹೇಶ್‌ಕುಮಾರ್ ಹಾಗೂ ಎಸಿಎಫ್ ಸತೀಶ್‌ರ ಮಾರ್ಗದರ್ಶನದಲ್ಲಿ ಹುಣಸೂರು ವಲಯ ಅರಣ್ಯಾಧಿಕಾರಿ ಹನುಮಂತರಾಜು, ವಿಶೇಷ ಹುಲಿ ಸಂರಕ್ಷಣಾ ದಳದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಡಿಆರ್‌ಎಫ್‌ಓಗಳಾದ ವೀರಭದ್ರಯ್ಯ, ಜಿ.ಎನ್.ಸಿದ್ದರಾಜು, ಹೆಚ್.ಎಸ್, ಪ್ರಸನ್ನಕುಮಾರ್, ಅರಣ್ಯ ರಕ್ಷಕರಾದ ಕುಶಾಲ್ ಜಾಧವ್, ಲಿಂಗರಾಜು ಮುಗಳಿ, ಕೃಷ್ಣ ಮಾದರ್ ಸೇರಿದಂತೆ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಆರ್ಚ್‌ಗೆ ಟಾಟಾ ಏಸ್ ಡಿಕ್ಕಿ: ಮಹಿಳೆ ಸಾವು

ಬನ್ನೂರು, ಮೇ 2(ಪ್ರಭು)– ಟಾಟಾ ಏಸ್ ಗೂಡ್ಸ್ ವಾಹನ ಬನ್ನೂರು ಪ್ರವೇಶ ದ್ವಾರದಲ್ಲಿರುವ ಆರ್ಚ್‌ಗೆ ಡಿಕ್ಕಿ ಹೊಡೆದ ಪರಿಣಾಮ ಮಹಿಳೆ ಸಾವನ್ನಪ್ಪಿರುವ ಘಟನೆ ಇಲ್ಲಿನ ಕಾವೇರಿ ನದಿ ಸೇತುವೆ ಬಳಿ ನಡೆದಿದೆ. ಮಳವಳ್ಳಿ ತಾಲೂಕಿನ ಉಮ್ಮತ್ತೂರಯ್ಯನ ತೋಟದ ನಿವಾಸಿ ಸುಕನ್ಯಾ(39) ಸಾವನ್ನಪ್ಪಿದವರು.

ವಿವರ: ಉಮ್ಮತ್ತೂರಯ್ಯನ ತೋಟದ ನಿವಾಸಿಗಳಾದ ಸುಕನ್ಯಾ, ಮನು ಅವರು ಶುಕ್ರವಾರ ರಾತ್ರಿ ಟಾಟಾ ಏಸ್ ಇಂಟ್ರಾ ಗೂಡ್ಸ್ ವಾಹನ(ಕೆಎ.11, ಬಿ.8889)ದಲ್ಲಿ ತರಕಾರಿ ತುಂಬಿಕೊಂಡು ಮಳವಳ್ಳಿಯಿಂದ ಮೈಸೂರಿನ ಎಪಿಎಂಸಿಗೆ ಹೋಗುತ್ತಿದ್ದರು. ಈ ವೇಳೆ ಗೂಡ್ಸ್ ವಾಹನದ ಚಾಲಕ ಸಂದೀಪ್ ಬನ್ನೂರಿನ ಕಾವೇರಿ ನದಿ ಸೇತುವೆ ಬಳಿಯ ಆರ್ಚ್‌ಗೆ ಡಿಕ್ಕಿ ಹೊಡೆದಿದ್ದಾರೆ. ಪರಿಣಾಮ ಡಿಕ್ಕಿ ರಭಸಕ್ಕೆ ಸುಕನ್ಯಾ ವಾಹನದ ಆಚೆ ಬಿದ್ದು ತೀವ್ರ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಇನ್ನು ಮನುಗೆ ಸಣ್ಣಪುಟ್ಟ ಗಾಯಗಳಾಗಿದೆ. ಘಟನೆಗೆ ವಾಹನ ಚಾಲಕನ ಅತೀವೇಗ ಹಾಗೂ ಅಜಾಗರೂಕತೆಯೇ ಕಾರಣ. ಹೀಗಾಗಿ ಆತನ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮನು ಬನ್ನೂರು ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕೋಟೆಯಲ್ಲಿ ಆದಿವಾಸಿ ಭವನಕ್ಕೆ ಗುದ್ದಲಿ ಪೂಜೆ



ಹೆಚ್.ಡಿ.ಕೋಟೆ, ಮೇ 2(ಮಂಜು)– ಆದಿವಾಸಿಗಳ ಹೋರಾಟವೇ ಈ ಭವನ ನಿರ್ಮಾಣವಾಗಲು ಮುಖ್ಯ ಕಾರಣ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ 8ನೇ ವಾರ್ಡ್‌ನಲ್ಲಿ ಕೋಟಿ ರೂ. ವೆಚ್ಚದ ಆದಿವಾಸಿ ಭವನ ನಿರ್ಮಾಣಕ್ಕೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದ ಅವರು, ಸ್ಥಳದ ಅಭಾವದ ಹಿನ್ನೆಲೆಯಲ್ಲಿ ಭವನ ನಿರ್ಮಾಣ ಕಾಮಗಾರಿಗೆ ಚಾಲನೆ ಸಿಕ್ಕಿರಲಿಲ್ಲ. ಇದೀಗ ಪುರಸಭೆಯಿಂದ ಸ್ಥಳ ಮಂಜೂರಾದ ಹಿನ್ನೆಲೆಯಲ್ಲಿ ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದರು.

ತಾಲೂಕಿನಲ್ಲಿ ಆದಿವಾಸಿಗಳು ವಾಸಿಸುವ ಹಾಡಿಗಳಲ್ಲಿ ಶೇ.70ರಷ್ಟು ಸಿಮೆಂಟ್ ರಸ್ತೆ ಸೇರಿದಂತೆ ಇನ್ನಿತರ ಕಾಮಗಾರಿಗಳು ಪೂರ್ಣಗೊಂಡಿದ್ದು, ಕೆಲವು ಆದಿವಾಸಿಗಳಿಗೆ ನಿವೇಶನದ ಕೊರತೆ ಇದೆ. ಹೆಚ್ಚಿನ ಜವಾಬ್ದಾರಿ ವಹಿಸಿ ಶೀಘ್ರ ನಿವೇಶನ ಕೊಡಿಸುವ ಭರವಸೆ ನೀಡಿದರು. ಆದಿವಾಸಿಗಳಿಗೆ ನಿಗಮ ಮಂಡಳಿ ಮಾಡುವ ವಿಚಾರ ಹಾಗೂ ಆದಿವಾಸಿ ಭವನ ಕಾಮಗಾರಿಗೆ ಇನ್ನೂ 50 ಲಕ್ಷ ರೂ. ಅನುದಾನ ಬಿಡುಗಡೆಗೆ ಸಚಿವ ಶ್ರೀರಾಮುಲು ಅವರೊಂದಿಗೆ ಚರ್ಚಿಸಿ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ಪುರಸಭೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಎಚ್.ಸಿ. ನರಸಿಂಹಮೂರ್ತಿ ಮಾತನಾಡಿ, ಆದಿವಾಸಿಗಳ ಹೋರಾಟಕ್ಕೆ ಒತ್ತು ನೀಡಿದವರು ಮಾಜಿ ಶಾಸಕ ದಿ.ಚಿಕ್ಕಮಾದು ಅವರು. ಹೀಗಾಗಿ ಅವರ ಪುತ್ರ ಶಾಸಕ ಅನಿಲ್ ಚಿಕ್ಕಮಾದು ಅವರು ಸುಮಾರು 15 ಲಕ್ಷ ರೂ. ವೆಚ್ಚದಲ್ಲಿ ತಾಲೂಕಿನ ದಮ್ಮನಕಟ್ಟೆ ಸಮೀಪ ಬಿರ್ಸಾ ಮುಂಡಾ ಪ್ರತಿಮೆ ನಿರ್ಮಾಣಕ್ಕೆ ಕ್ರಮ ಕೈಗೊಂಡು ಗುದ್ದಲಿ ಪೂಜೆ ನೆರವೇರಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಪುರಸಭಾ ಅಧ್ಯಕ್ಷೆ ಶಿವಮ್ಮ, ಸದಸ್ಯೆ ನಾಗಮ್ಮ, ಸಿದ್ದರಾಜು, ಗ್ರಾಪಂ ಸದಸ್ಯರಾದ ಪಾರ್ವತಿ, ಲಕ್ಷ್ಮಿ, ಗಿರಿಜನ ಲ್ಯಾಂಪ್ ಸೊಸೈಟಿ ಅಧ್ಯಕ್ಷ ಕಾವೇರ, ಮುಖಂಡರಾದ ಯಶವಂತ್, ಅಶೋಕ್, ವಿಜಯ್ ಕುಮಾರ್, ಕಾಳಕರ್, ಪುಟ್ಟಬಸವ, ಸೋಮಣ್ಣ, ಶೈಲೇಂದ್ರ, ಬಸವರಾಜ್, ಗಣೇಶ್, ಚಿನ್ನಪ್ಪ, ಅಧಿಕಾರಿಗಳಾದ ಸುರೇಶ್, ನಾರಾಯಣಸ್ವಾಮಿ, ಜಯರಾಂ, ರಾಧಾ, ನಾಗರಾಜು ಇದ್ದರು.

ನಂ.ಗೂಡು: ಬೃಹತ್ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ



ನಂಜನಗೂಡು, ಮೇ 2(ಸುದರ್ಶನ್)– ರೋಟರಿ ಸಂಸ್ಥೆ, ನಂಜನಗೂಡು ಮತ್ತು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಸಹಯೋಗದೊಂದಿಗೆ ನಗರದ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಉಚಿತ ಬೃಹತ್ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ಆರೋಗ್ಯ ಶಿಬಿರಕ್ಕೆ ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಮನುಷ್ಯನಿಗೆ ಆರೋಗ್ಯ ಬಹಳ ಮುಖ್ಯ. ಆರೋಗ್ಯವಂತರು ಬದುಕಿನಲ್ಲಿ ಏನನ್ನಾದರೂ ಸಾಧನೆ ಮಾಡಬಹುದು. ವ್ಯಕ್ತಿಯ ಆರೋಗ್ಯ ತೊಂದರೆಯಿಂದರೆ ನಗರ ಪ್ರದೇಶದಲ್ಲಿ ಆರೋಗ್ಯ ಸೌಲಭ್ಯಗಳು ಸಿಗುತ್ತವೆ. ಆದರೆ ಗ್ರಾಮೀಣ ಭಾಗದಲ್ಲಿ ಆರೋಗ್ಯ ಸೌಲಭ್ಯ ದೊರಕುವುದು ಕಷ್ಟ. ಗ್ರಾಮೀಣ ಜನರ ಆರೋಗ್ಯ ಕಾಳಜಿಯ ದೃಷ್ಟಿಯಿಂದ ರೋಟರಿ ಸಂಸ್ಥೆ ಮತ್ತು ಜೆಎಸ್‌ಎಸ್ ಆಸ್ಪತ್ರೆ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಎಲ್ಲಾ ವಿವಿಧ ಕಾಯಿಲೆಗಳನ್ನು ತಪಾಸಣೆ ಮಾಡಿ ಉಚಿತ ಚಿಕಿತ್ಸೆ ಜೊತೆಗೆ ಸೂಕ್ತ ಸಲಹೆಗಳನ್ನು ನೀಡಲಾಗುತ್ತಿದೆ. ಸಾರ್ವಜನಿಕರು ಇದರ ಸದುಪಯೋಗಪಡೆದುಕೊಂಡು ಆರೋಗ್ಯವಂತ ಜೀವನ ನಡೆಸುವಂತಾಗಲಿ ಎಂದರು.

ಸಂಸದ ವಿ.ಶ್ರೀನಿವಾಸಪ್ರಸಾದ್ ಮಾತನಾಡಿ, ಬಡವರಿಗೆ ಆರೋಗ್ಯ ತೊಂದರೆಯುಂಟಾದಲ್ಲಿ ಚಿಕಿತ್ಸೆ ಪಡೆಯುವುದು ಕಷ್ಟಕರ. ಆದರೆ ಪ್ರಧಾನಿ ಮೋದಿ ಬಡಜನರ ಆರೋಗ್ಯ ಕಾಳಜಿ ದೃಷ್ಟಿಯಿಂದ ಆಯುಷ್ಮಾನ್ ಭಾರತ್ ಯೋಜನೆಯಡಿ 5 ಲಕ್ಷದ ವರೆಗೆ ಉಚಿತವಾಗಿ ಚಿಕಿತ್ಸೆ ಪಡೆಯುವ ಸೌಲಭ್ಯ ಕಲ್ಪಿಸಿದ್ದಾರೆ. ರೋಟರಿ ಸಂಸ್ಥೆ ಕೂಡ ಬೃಹತ್ ಆರೋಗ್ಯ ಶಿಬಿರ ಏರ್ಪಡಿಸಿರುವುದು ಅನುಕರಣೀಯ. ದಾನಿಗಳು ಇಂತಹ ಆರೋಗ್ಯ, ಶಿಕ್ಷಣ, ಅರಿವು ಮೂಡಿಸುವಂತಹ ಸಾಮಾಜಿಕವಾದ ಕೆಲಸ ಮಾಡುತ್ತಿರುವುದು ಸಂತಸ ತಂದಿದೆ. ಈ ಶಿಬಿರ ಯಶಸ್ವಿಗೊಂಡು ಸಾರ್ವಜನಿಕರಿಗೆ ಉಪಯೋಗವಾಗಲಿ ಎಂದರು.

ಶಾಸಕ ಬಿ.ಹರ್ಷವರ್ಧನ್ ಸ್ವತಃ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಶಿಬಿರಕ್ಕೆ ಹುರಿದುಂಬಿಸಿದರು. ಶಿಬಿರದಲ್ಲಿ ಸುಮಾರು ಸಾವಿರಕ್ಕೂ ಹೆಚ್ಚಿನ ಜನರು ತಪಾಸಣೆಗೆ ಒಳಗಾದರು.

ಶಿಬಿರದಲ್ಲಿ ಕಿದ್ವಾಯಿ ಸಂಸ್ಥೆಯಿಂದ ಉಚಿತವಾಗಿ ಕ್ಯಾನ್ಸರ್ ತಪಾಸಣೆ ನಡೆಸಲಾಯಿತು. ಹೃದಯ ಸಂಬಂಧಿ ಸಮಸ್ಯೆಗಳು, ಕಿವಿ, ಮೂಗು, ಗಂಟಲು, ಕಣ್ಣಿನ ತೊಂದರೆ, ರಕ್ತದೊತ್ತಡ, ವಾತಪಿತ್ತ, ಮೂಳೆಗೆ ಸಂಬಂಧಿಸಿದ ತೊಂದರೆಗಳು, ಚರ್ಮಕ್ಕೆ ಸಂಬಂಧಿಸಿದ ತೊಂದರೆಗಳು, ಮಕ್ಕಳ ತಜ್ಞರು, ದಂತ ತಜ್ಞರು, ಸ್ತ್ರೀರೋಗ ತಜ್ಞ ವೈದ್ಯರು ಭಾಗವಹಿಸಿದ್ದು 11 ವಿಭಾಗದಲ್ಲಿ ತಪಾಸಣೆ ನಡೆಸಲಾಯಿತು. ತಪಾಸಣೆಗೆ ಒಳಗಾದ ರೋಗಿಗಳಿಗೆ ನಂಜನಗೂಡು ಜಿಹ್ವಾ ಮಾರುಕಟ್ಟೆ ಸಂಘದಿಂದ ಉಚಿತವಾಗಿ ಔಷಧಗಳನ್ನು ನೀಡಲಾಯಿತು.

ಶಿಬಿರದಲ್ಲಿ ನಗರಸಭಾಧ್ಯಕ್ಷ ಎಚ್.ಎಸ್.ಮಹದೇವಸ್ವಾಮಿ, ಸಮಾಜ ಸೇವಕರಾದ ಯು.ಎನ್.ಪದ್ಮನಾಭ ರಾವ್, ರೋಟರಿ ಸಂಸ್ಥೆಯ ಡಾ.ಶ್ರೀಕಾಂತ್, ವಿಜಯ ಕುಮಾರ್, ಚಂದ್ರು, ಸುಧೀಂದ್ರ, ಉದ್ಯಮಿ ಕೃಷ್ಣಪ್ಪ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಕುಂಬ್ರಳ್ಳಿಸುಬ್ಬಣ್ಣ, ಗೋವರ್ಧನ್, ಶಿವಣ್ಣ, ನಂಜುಂಡಸ್ವಾಮಿ ಬೊಮ್ಮಾಯಿ ಸೇರಿದಂತೆ ಇತರರು ಹಾಜರಿದ್ದರು.

ಹಂದನಹಳ್ಳಿ ಡೈರಿ ಚುನಾವಣೆ: ಜಯಶಂಕರ್ ಬಣಕ್ಕೆ ಜಯ



ಹುಣಸೂರು, ಮೇ 2– ತಾಲೂಕಿನ ಹಂದನಹಳ್ಳಿ ಹಾಲು ಉತ್ಪಾದಕರ ಸಂಘದ ಚುನಾವಣೆಯಲ್ಲಿ ಗ್ರಾಪಂ ಸದಸ್ಯ ಎಚ್.ಎಸ್.ಜಯಶಂಕರ್ ನೇತೃತ್ವದ ಬಣ ಜಯಭೇರಿ ಬಾರಿಸಿದೆ.

ಶನಿವಾರ ಗ್ರಾಮದಲ್ಲಿ ನಡೆದ ಚುನಾವಣೆಯಲ್ಲಿ 10 ಸ್ಥಾನಗಳಲ್ಲಿ 8 ಸ್ಥಾನಗಳನ್ನು ಜಯಶಂಕರ್ ಬಣ ಗೆದ್ದಿದ್ದು, ನಿರ್ದೇಶಕರಾಗಿ ಜಗದೀಶ, ನೀಲಾವತಿ, ಶಿವಪ್ಪ, ಬಸವರಾಜು, ಮಂಚಮ್ಮ, ಯತ್ತನಾಯ್ಕ, ರಮೇಶ, ರೇವಣ್ಣ, ಶಿವಣ್ಣನಾಯ್ಕ, ಸುಂದ್ರಮ್ಮ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ. ನೂತನ ನಿರ್ದೇಶಕರನ್ನು ಯುವ ಮುಖಂಡ ಮಹದೇವ ಪಟೇಲ್ ಮತ್ತಿತರರು ಅಭಿನಂದಿಸಿದರು.

ಆರ್‌ಆರ್‌ಗೆ ಸೋಲು: ಜಯದ ಹಾದಿಗೆ ಕೆಕೆಆರ್



ಮುಂಬೈ, ಮೇ 2– ನಿತೀಶ್ ರಾಣಾ, ರಿಂಕು ಸಿಂಗ್ ಹಾಗೂ ನಾಯಕ ಶ್ರೇಯಸ್ ಅಯ್ಯರ್ ಉಪಯುಕ್ತ ಬ್ಯಾಟಿಂಗ್ ನೆರವಿನಿಂದ ಕೋಲ್ಕತ್ತಾ ನೈಟ್ ರೈಡರ್ಸ್ ರಾಜಸ್ಥಾನ್ ರಾಯಲ್ಸ್ ವಿರುದ್ಧ 7 ವಿಕೆಟ್‌ಗಳ ಗೆಲುವು ದಾಖಲಿಸಿದೆ.

ಇದರೊಂದಿಗೆ ಸತತ 5 ಸೋಲುಗಳ ಬಳಿಕ ಕೆಕೆಆರ್ ಗೆಲುವಿನ ಹಾದಿಗೆ ಮರಳಿದೆ. ಅತ್ತ ರಾಜಸ್ಥಾನ್ ಸತತ 2ನೇ ಸೋಲಿಗೆ ಶರಣಾಗಿದೆ. ಇಲ್ಲಿನ ವಾಂಖೆಡೆ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 152 ರನ್ ಗಳಿಸಿತು. ತಂಡದ ಪರ ನಾಯಕ ಸಂಜು ಸ್ಯಾಮ್ಸನ್ 54, ಜೋಸ್ ಬಟ್ಲರ್ 22, ಕರುಣ್ ನಾಯರ್ 13, ರಿಯಾನ್ ಪರಾಗ್ 19, ಶಿಮ್ರಾನ್ ಹೆಟ್ಮೆಯರ್ 27ರನ್ ಗಳಿಸಿದರು. ಕೆಕೆಆರ್ ಪರ ಸೌಥಿ 2, ಶಿವಂ ಮಾವಿ, ಅಂಕುಲ್ ರಾಯ್ ಹಾಗೂ ಉಮೇಶ್ ಯಾದವ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ನಂತರ ಗೆಲುವಿನ ಗುರಿ ಬೆನ್ನತ್ತಿದ ಕೋಲ್ಕತ್ತಾ ನೈಟ್ ರೈಡರ್ಸ್ 19.1 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 158 ರನ್ ಗಳಿಸುವ ಮೂಲಕ ಗೆಲುವಿನ ಗುರಿ ತಲುಪಿತು. ತಂಡದ ಪರ ಬಾಬಾ ಇಂದ್ರಜಿತ್ 15, ಶ್ರೇಯಸ್ ಅಯ್ಯರ್ 34, ನಿತೀಶ್ ರಾಣಾ 48, ರಿಂಕು ಸಿಂಗ್ 42 ರನ್ ಗಳಿಸಿದರು. ರಾಜಸ್ಥಾನ್ ಪರ ಪ್ರಸಿದ್ಧ ಕೃಷ್ಣ ಟ್ರೆಂಟ್ ಬೌಲ್ಟ್, ಕುಲದೀಪ್ ಸೇನ್ ತಲಾ ಒಂದೊಂದು ವಿಕೆಟ್ ಪಡೆದರು. ರಿಂಕು ಸಿಂಗ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.